ಜನಶಿಕ್ಷಣ

ಜನಜಾಗೃತಿ

ಜನಸೇವೆ










# ವಾರ್ಷಿಕ ವರದಿ 2017–18





# ರಾಷ್ಟ್ರೋತ್ಥಾನ ಪರಿಷತ್

ಕೇಶವಶಿಲ್ಪ, ಕೆಂಪೇಗೌಡನಗರ, ಬೆಂಗಳೂರು - 560 019

E-mail: rashtrotthana@gmail.com Website: www.rashtrotthana.org

# ಪ್ರಕಲ್ಪಗಳು

- ಜಾಗರಣ
- ಶೈಕ್ಷಣಿಕ ಚಟುವಟಿಕೆಗಳು
- ರಾಷ್ಟ್ರೋತ್ಥಾನ ಆರೋಗ್ಯಸೇವಾ ಕೇಂದ್ರ
- ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ
- ರಾಷ್ಟ್ರೋತ್ಥಾನ ಬಳಗ
- ಮಂಥನ
- ಉಪನ್ಯಾಸ ಮಾಲೆ
- ಗ್ರಾಮೋತ್ಥಾನ
- ಫೌಂಡೇಷನ್ ಫಾರ್ ಇಂಡಿಕ್ ರಿಸರ್ಚ್ ಸ್ಟಡೀಸ್ (FIRST)
- ರಾಷ್ಟ್ರೋತ್ಥಾನ ಮುದ್ರಣಾಲಯ
- ರಾಷ್ಟ್ರೋತ್ಥಾನ ಸಾಹಿತ್ಯ
- ಸಾಹಿತ್ಯ ಸಿಂಧು ಪ್ರಕಾಶನ
- ಗೀತಭಾರತಿ
- ಉತ್ಥಾನ

# ನಡೆದು ಬಂದ ಹಾದಿ...
# ಬದ್ಧತೆಯ ಹೆಜ್ಜೆಗಳು...

ಜನಜಾಗೃತಿ (ಸಾಂಸ್ಕೃತಿಕ ಜಾಗೃತಿ), ಜನಶಿಕ್ಷಣ (ಸಮೂಹ ಶಿಕ್ಷಣ) ಮತ್ತು ಜನಸೇವೆ (ಸಮಾಜಸೇವೆ) ಎಂಬ ಮಾರ್ಗದರ್ಶಕ ಅಂಶಗಳ ಆಧಾರದಲ್ಲಿ ರಾಷ್ಟ್ರೋತ್ಥಾನ ಪರಿಷತ್ ಕಳೆದ 63 ವರ್ಷಗಳಿಂದ ಕಾರ್ಯೋನ್ಮುಖವಾಗಿದೆ. "ಸಂದರ್ಭ ಅನುಕೂಲಕರವಾಗುವಂತೆ ಏರ್ಪಡಲಿ. ಆಮೇಲೆ ಕೆಲಸ ಮಾಡೋಣ – ಎಂದು ಕಾಯುತ್ತ ಕೂರದೇ, ಅಂತಹ ಸಂದರ್ಭವನ್ನು ಸೃಷ್ಟಿಮಾಡಿ ಮುಂದಕ್ಕೆ ಸಾಗುತ್ತಿರಿ" ಎಂಬ ಆರೆಸ್ಸೆಸ್‌ನ ದಿ| ಯಾದವರಾವ್ ಜೋಶಿ ಅವರ ಹಾರೈಕೆಯಂತೆ, ನಿರಂತರವಾಗಿ ಸೇವಾವಕಾಶಗಳನ್ನು ಹುಡುಕಿಕೊಂಡು, ನಮ್ಮ ಪರಿಧಿಯಲ್ಲಿ ಸಮಾಜವನ್ನು ಹೇಗೆ ಹೆಚ್ಚು ಸಚೇತನಗೊಳಿಸಬಹುದು ಎಂಬ ದಿಕ್ಕಿನಲ್ಲಿ 'ಚರೈವೇತಿ ಚರೈವೇತಿ' ಎಂಬಂತೆ ದೃಢವಾದ ಹೆಜ್ಜೆಗಳನ್ನಿಡುತ್ತ ರಾಷ್ಟ್ರೋತ್ಥಾನ ಪರಿಷತ್ ಮುಂದೆ ಸಾಗುತ್ತಿದೆ.

ಕೌಟುಂಬಿಕ ಮಾಸಪತ್ರಿಕೆ 'ಉತ್ಥಾನ'ದ ಮೂಲಕ ಶುಭಾರಂಭಗೊಂಡ ಪರಿಷತ್‌ನ ಚಟುವಟಿಕೆ ಇಂದು ರಾಷ್ಟ್ರೀಯ ವಿಚಾರಧಾರೆಯ ಪುಸ್ತಕ ಪ್ರಕಾಶನ; ಸಾಮಾಜಿಕ–ಸಾಂಸ್ಕೃತಿಕ ವಿಕಾಸದ ಗುರಿಹೊತ್ತ ರಾಷ್ಟ್ರೋತ್ಥಾನ ಬಳಗಗಳು; ಸುಸಂಪನ್ನ ದೇಶಭಕ್ತ ಶಿಕ್ಷಿತ ಸಮಾಜ ರೂಪಿಸುವ ಶಿಕ್ಷಣಸಂಸ್ಥೆಗಳು; ಬಡತನದಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ, ಉಚಿತವಾಗಿ ದೇಶದ ಪ್ರತಿಷ್ಠಿತ ಶಿಕ್ಷಣಕ್ಕೆ ತರಬೇತಿ ನೀಡುವ 'ತಪಸ್' ಹಾಗೂ 'ಸಾಧನಾ' ಶೈಕ್ಷಣಿಕ ಯೋಜನೆಗಳು; ಸೇವಾಬಸ್ತಿ (ಸ್ಲಂ, ಕೊಳೆಗೇರಿ)ಗಳ ವಿಕಾಸಕ್ಕಾಗಿ ಶ್ರಮಿಸುವ ವ್ಯಾಸಂಗ/ ಕಂಪ್ಯೂಟರ್/ ವೃತ್ತಿತರಬೇತಿ ಕೇಂದ್ರಗಳು; ಅಗತ್ಯ ಫಲಾನುಭವಿಗಳಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ರಕ್ತ ಒದಗಿಸುವ ರಕ್ತನಿಧಿಗಳು; ಗುಣಮಟ್ಟದ ರಕ್ತ ಉತ್ಪತ್ತಿಯಾಗದ ನ್ಯೂನತೆ ತಲಸ್ಸೇಮಿಯಾದಿಂದ ಬಳಲುವ ಮಕ್ಕಳಿಗೆ ಸಂಪೂರ್ಣ ಉಚಿತ ಆರೈಕೆ ನೀಡುವ 'ಸಂರಕ್ಷಾ'; ಆರೋಗ್ಯವಂತ ಸಶಕ್ತ ವ್ಯಕ್ತಿಗಳನ್ನು ರೂಪಿಸುವ ಯೋಗಕೇಂದ್ರಗಳು; ಅವಕಾಶವಂಚಿತ, ಪೋಷಕರಹಿತ ಮಕ್ಕಳ ರಕ್ಷಣೆಗೆ ನಿಂತಿರುವ ನಂದಗೋಕುಲ; ದೇಸೀ ಗೋ–ಸಂತತಿಗಳ ರಕ್ಷಣೆಗೆ ಪಣತೊಟ್ಟ ಗೋಶಾಲೆ; – ಹೀಗೆ ಸೇವೆಯ ಜಗತ್ತನ್ನು **life's mission** ಆಗಿ ಸ್ವೀಕರಿಸಿರುವ ರಾಷ್ಟ್ರೋತ್ಥಾನ ಪರಿಷತ್ ಇಂದು ಅನೇಕ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ರಾಜ್ಯಾದ್ಯಂತ ವ್ಯಾಪಿಸಿದೆ.

ನಮ್ಮ ಕಾರ್ಯಚಟುವಟಿಕೆಯನ್ನು ಗಮನಿಸಿದ ಪೂಜ್ಯ ಶ್ರೀ ವೀರೇಶಾನಂದ ಸ್ವಾಮಿಜೀ ಅವರು, "ರಾಷ್ಟ್ರೋತ್ಥಾನ ಪರಿಷತ್ ಅಂತಾರಾಷ್ಟ್ರೀಯ ಮಟ್ಟದ ಸೇವೆ ಮಾಡುತ್ತಿದೆ" ಎಂದು ಹಾರೈಸಿದ್ದರು. 'ನ್ಯಗ್ರೋಧಬೀಜಂ ಕೆಲಂ ಸಿಡಿದುಂ ಪೆರ್ಮರವಾಗದೇ' ಎಂದ ಹಾಗೆ ಮೊದಲಿಗೆ ಕಂಡೂ ಕಾಣದ ಹಾಗೆ ಇರುವ ಬೀಜದಿಂದ ಮೊಳೆತು ಹರಡುವ ಆಲದ ಮರ ಎಷ್ಟು ವಿಶಾಲವಾಗಿ ಬಿಡುತ್ತದೆಂದರೆ ಅದೇ ಒಂದು ಪ್ರಪಂಚ ಎನಿಸಿಬಿಡುವಂತಾಗಿದೆ. ಇದಕ್ಕೆ ನೈಜ ಉದಾಹರಣೆ ರಾಷ್ಟ್ರೋತ್ಥಾನ ಪರಿಷತ್ – ಎಂದು ಹರಸಿದವರೂ ಹಲವರು.

ರಾಷ್ಟ್ರೋತ್ಥಾನ ಪರಿಷತ್ 2017–18ರ ಆರ್ಥಿಕ ವರ್ಷದಲ್ಲಿ ನಡೆಸಿದ ಪ್ರಮುಖ ಚಟುವಟಿಕೆಗಳ ಒಂದು ಹಿನ್ನೋಟ ಇಲ್ಲಿದೆ. ಮ್ಯಾಗ್ನೆಟ್ (**magnet**) ಗಾತ್ರದಲ್ಲಿ ನಾಲ್ಕೋ ಆರೋ ಅಂಗುಲ ಅಷ್ಟೆ ಇರಬಹುದು. ಆದರೆ ಅದರ **magnetic field** ನಾಲ್ಕೈದು ಅಡಿಗಳಷ್ಟು ಇರುತ್ತದೆ. ಅಂತೆಯೇ ಸಮಾಜದಲ್ಲಿನ ಅನೇಕ ಸವಾಲುಗಳ ನಡುವೆ ನಾವೊಂದು ಕಿರು ಹಣತೆಯನ್ನು ಬೆಳಗಿಸುವ ಪ್ರಯತ್ನ ಮಾಡಿದ್ದೇವೆ ಎಂಬುದು ನಮ್ಮ ನಂಬಿಕೆ.

ಬನ್ನಿ... ಜೊತೆಗೂಡಿ ಸಾಗೋಣ...

ನಾ. ದಿನೇಶ್ ಹೆಗ್ಡೆ
ಪ್ರಧಾನ ಕಾರ್ಯದರ್ಶಿ



# ವಿಷಯ ಸೂಚಿ


3 ರಾಷ್ಟ್ರೋತ್ಥಾನ ಬಳಗ
6 ಆರೋಗ್ಯಸೇವಾ ಕೇಂದ್ರ
12 ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ
17 ಜಾಗರಣ
27 ನಂದಗೋಕುಲ
29 ಗೋಶಾಲೆ
32 ಶೈಕ್ಷಣಿಕ ಸಂಸ್ಥೆಗಳು
48 ತಪಸ್ ಮತ್ತು ಸಾಧನಾ
53 ಫೌಂಡೇಷನ್ ಫಾರ್ ಇಂಡಿಕ್ ರಿಸರ್ಚ್ ಸ್ಟಡೀಸ್
57 ರಾಷ್ಟ್ರೋತ್ಥಾನ ವಾರ್ತಾ
58 ಕೇಂದ್ರ ಕಛೇರಿಯಲ್ಲಿ ನಡೆದ ಕಾರ್ಯಕ್ರಮಗಳು
59 ಸ್ವದೇಶಿ ಸುರಕ್ಷಾ ಅಭಿಯಾನ

# ರಾಷ್ಟ್ರೋತ್ಥಾನ ಬಳಗ

**ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತರಾದ ಸಮಾನಮನಸ್ಕರೆಲ್ಲ ಒಂದೆಡೆ ಸೇರಿ ಸಮಗ್ರ ಸಮಾಜಪರಿವರ್ತನೆಗಾಗಿ ಶ್ರಮಿಸುವುದಕ್ಕೆ ನಿರ್ಮಾಣಗೊಂಡ ವೇದಿಕೆಯೇ ರಾಷ್ಟ್ರೋತ್ಥಾನ ಬಳಗ. ಪರಿಷತ್‌ನ ಧ್ಯೇಯ-ಧೋರಣೆಗಳನ್ನು ಆಂದೋಲನದ ರೂಪದಲ್ಲಿ ರಾಜ್ಯದಾದ್ಯಂತ ಪಸರಿಸುವ ಕಾರ್ಯದಲ್ಲಿ ರಾಷ್ಟ್ರೋತ್ಥಾನ ಬಳಗಗಳು ಕಾರ್ಯನಿರತವಾಗಿವೆ. ಸದ್ಯ ರಾಷ್ಟ್ರೋತ್ಥಾನ ಬಳಗದ ಚಟುವಟಿಕೆಗಳು ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರು, ಸಾಗರ, ರಿಪ್ಪನ್‌ಪೇಟೆ, ಕಾರಣಗಿರಿ, ಶಿವಮೊಗ್ಗ ನಗರ ಹಾಗೂ ರಾಯಚೂರಿನ ಶಕ್ತಿನಗರ ಮೊದಲಾದ ಸ್ಥಳಗಳಲ್ಲಿ ಸಕ್ರಿಯವಾಗಿವೆ.**

## ಕಾರಣಗಿರಿ

**ಬರಹಗಾರರ ಕಾರ್ಯಾಗಾರ:** ಬರವಣಿಗೆಯಲ್ಲಿ ಆಸಕ್ತರಿಗೆ ಮಾರ್ಗದರ್ಶನ ಮಾಡುವ ಸಲುವಾಗಿ 9 ಏಪ್ರಿಲ್ 2017ರಂದು ಸದಭಿರುಚಿ ಪ್ರಕಾಶನದ ಸಹಯೋಗದಲ್ಲಿ ನಡೆದ ಬರಹಗಾರರ ಕಾರ್ಯಾಗಾರದಲ್ಲಿ ಹಿರಿಯ ಪತ್ರಕರ್ತ ದು.ಗು. ಲಕ್ಷ್ಮಣ ಮುಂತಾದವರು ಆಗಮಿಸಿ ಮಾರ್ಗದರ್ಶನ ಮಾಡಿದರು.



**ಕೋಟಿವೃಕ್ಷ ಅಭಿಯಾನ:** ಕಾರಣಗಿರಿಯ ಸರ್ಕಾರಿ ಪ್ರೌಢಶಾಲೆ ಮತ್ತು ಜಯನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಕೋಟಿ ವೃಕ್ಷ ಅಭಿಯಾನದ ಅಂಗವಾಗಿ ವೃಕ್ಷಾರೋಪಣ ಮತ್ತು ವೃಕ್ಷಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕ್ರಮದಲ್ಲಿ 5000ಕ್ಕೂ ಅಧಿಕ ಬೀಜದುಂಡೆಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ಈ ಬೀಜದುಂಡೆಗಳನ್ನು ವಿದ್ಯಾರ್ಥಿಗಳು ತಮ್ಮ ಶಾಲೆಯ ಹಾಗೂ ಮನೆಯ ಸುತ್ತಮುತ್ತಲಿರುವ ಖಾಲಿ ಜಾಗದಲ್ಲಿ ಎಸೆದರು.

**ಯಕ್ಷಗಾನ ತಾಳಮದ್ದಳೆ:** ಸಾಮಾಜಿಕ ಜಾಗೃತಿಯ ಮಾಧ್ಯಮವಾಗಿಯೂ ಕನ್ನಡ ಭಾಷೆಯ ಬೆಳವಣಿಗೆಯಲ್ಲಿಯೂ ಪ್ರಮುಖ ಪಾತ್ರ ವಹಿಸಿರುವ ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ರಾಷ್ಟ್ರೋತ್ಥಾನ ಬಳಗವು ಸ್ಥಳೀಯ ಇತರ ಸಂಘಟನೆಗಳ ಸಹಕಾರದಿಂದ ಹಲವು ವರ್ಷಗಳಿಂದ ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

2017ರ ಜುಲೈ ಮತ್ತು ನವೆಂಬರ್‌ನಲ್ಲಿ ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮ ನಡೆಯಿತು.

### ಸಾಮೂಹಿಕ ಸತ್ಯನಾರಾಯಣ ಪೂಜೆ ಮತ್ತು ಧರ್ಮಜಾಗರಣ ಸಭೆ

ಕಾರಣಗಿರಿಯ ಶ್ರೀಸಿದ್ಧಿವಿನಾಯಕಸ್ವಾಮಿಯ ಸನ್ನಿಧಿಯಲ್ಲಿ ಬಳಗದ ವತಿಯಿಂದ 26ನೇ ವರ್ಷದ ಸಹಸ್ರಾಧಿಕ ಸಾಮೂಹಿಕ ಸತ್ಯನಾರಾಯಣ ಪೂಜೆಯು 2018 ಫೆ. 24 ಮತ್ತು 25ರಂದು ನಡೆಯಿತು.

- **ಧರ್ಮಜಾಗರಣ ಸಭೆ:** ಸಾಮಾಜದಲ್ಲಿ ಧಾರ್ಮಿಕ ಜಾಗೃತಿ ಮೂಡಿಸುವ ಸಲುವಾಗಿ ನಡೆದ ಧರ್ಮಜಾಗರಣ ಸಭೆಯಲ್ಲಿ ಮೂಲೆಗದ್ದೆ ಶಿವಯೋಗಾಶ್ರಮದ ಶ್ರೀ ಮ। ನಿ। ಪ್ರ। ಚನ್ನಬಸವ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ವಿಶ್ವ ಹಿಂದು ಪರಿಷತ್ತಿನ ಶಿವಮೊಗ್ಗ ಜಿಲ್ಲಾ ಪ್ರಧಾನ






ಕಾರ್ಯದರ್ಶಿ ಡಾ॥ ದಿಲೀಪ್ ಕುಮಾರ್ ಪಾಂಡೆ, ಶಿಮೂಲ್ ಅಧ್ಯಕ್ಷ ಎಚ್. ಎನ್. ವಿದ್ಯಾಧರ ಅವರು ಮಾರ್ಗದರ್ಶನ ಭಾಷಣ ಮಾಡಿದರು. 5–6 ಸಾವಿರ ಜನರು ಸಹಭೋಜನ ಮಾಡಿದರು.

- **ಸಂಮಾನ:** ನಾಟಿವೈದ್ಯ ಕೊಡಸೆ ಕೊಲ್ಲನಾಯ್ಕರು, ಗ್ರಾಮೀಣ ಪ್ರಸೂತಿ ತಜ್ಞೆ ಲಕ್ಷ್ಮೀ ದೇವಮ್ಮ ಬಾಗಿಮನೆ, ಗಾಯಕ ಸುರೇಶ್‌ಕುಮಾರ್ ಹೊಸನಗರ ಮತ್ತು ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ರವಿ ಬಿದನೂರು ಅವರನ್ನು ಸಂಮಾನಿಸಲಾಯಿತು.

- **ಸಾಹಿತ್ಯ–ಸಂಸ್ಕೃತಿ ಉತ್ಸವ:** ಜನಸಾಮಾನ್ಯರಲ್ಲಿ ಸಾಹಿತ್ಯ ಜಾಗೃತಿ ಮೂಡಿಸುವ ಸಲುವಾಗಿ ನಡೆದ ಸಾಹಿತ್ಯ–ಸಂಸ್ಕೃತಿ ಉತ್ಸವವನ್ನು ಹಿರಿಯ ಪತ್ರಕರ್ತ ಹರಿಪ್ರಕಾಶ್ ಕೋಣೆಮನೆ ಅವರು ಉದ್ಘಾಟಿಸಿದರು. ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುನಂದನ ಭಟ್ಟ ಅವರು ಸ್ವಯಂಪ್ರಕಾಶ ಸ್ವಾಮಿಗಳ ಆತ್ಮಚರಿತ್ರೆ 'ಉದ್ಗೀತ ಮಹಾಕಂಪನ' ಪುಸ್ತಕವನ್ನು ಲೋಕಾರ್ಪಣೆಗೊಳಿಸಿದರು.

  ಸಾಹಿತ್ಯ ಗೋಷ್ಠಿಯಲ್ಲಿ ಉಪನ್ಯಾಸಕಿ ವಸುಧಾ ಚೈತನ್ಯ, ಸಾಹಿತಿ ಡಾ॥ ಶಾಂತಾರಾಮ ಪ್ರಭು, ಕಲಾದರ್ಶನ ಮಾಸಪತ್ರಿಕೆಯ ಪ್ರಧಾನ ಸಂಪಾದಕ ಡಾ॥ ಹಾದಿಗಲ್ಲು ಲಕ್ಷ್ಮೀನಾರಾಯಣ ಮಾತನಾಡಿದರು. ಉತ್ಥಾನ ಮಾಸಪತ್ರಿಕೆ ಸಂಪಾದಕ ಕಾಕುಂಜೆ ಕೇಶವ ಭಟ್ಟ ಅವರು ಸಮಾರೋಪ ಭಾಷಣ ಮಾಡಿದರು.

- ಎರಡು ದಿನಗಳ ಕಾಲ ಕನ್ನಡದ ಅಳಿದ–ಉಳಿದ ವೃತ್ತ ಪತ್ರಿಕೆಗಳ ಹಾಗೂ ನಾಣ್ಯಗಳ ಪ್ರದರ್ಶನ ಹಾಗೂ ಕನ್ನಡ ನಾಡು–ನುಡಿ ಕುರಿತಾದ 'ಗೀತ–ನೃತ್ಯ' ಕಾರ್ಯಕ್ರಮ ನಡೆಯಿತು.

ಸಾಮಾಜಿಕ ಸಾಮರಸ್ಯ ಮೂಡಿಸುವ ಸಲುವಾಗಿ ಕೃಷ್ಣಾಷ್ಟಮಿ, ತ್ಯಾಗರಾಜರ ಆರಾಧನೆ (ಸಂಗೀತೋತ್ಸವ) ಮುಂತಾದ ಕಾರ್ಯಕ್ರಮಗಳನ್ನು ಹಲವು ವರ್ಷಗಳಿಂದ ಆಯೋಜಿಸಲಾಗುತ್ತಿದೆ.



# ಶಿವಮೊಗ್ಗ

## ವಿಶೇಷ ಉಪನ್ಯಾಸ

- ಸಂಸ್ಕೃತಿ ಚಿಂತಕ, ಲೇಖಕ ಲಕ್ಷ್ಮೀಶ್ ತೋಳ್ಪಾಡಿ ಅವರಿಂದ ನವೆಂಬರ್ 19 ಮತ್ತು 20ರಂದು ಮಹಾಭಾರತದ ಶಾಂತಿಪರ್ವದ ಕುರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಯಿತು. ಪ್ರತೀ ದಿನ ಸುಮಾರು 200 ಮಂದಿ ಭಾಗವಹಿಸಿದ್ದರು.

- ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಭಾರತದ ವಿರುದ್ಧ ಚೀನಾ ನಡೆಸುತ್ತಿರುವ ಕುತಂತ್ರಗಳ ಬಗೆಗೆ ಜಾಗೃತಿ ಮೂಡಿಸುವ ಸಲುವಾಗಿ ನಡೆದ 'ಚೀನಾ ಸವಾಲು – ನಮ್ಮ ಉತ್ತರ' ಎಂಬ ಉಪನ್ಯಾಸ ಕಾರ್ಯಕ್ರಮದಲ್ಲಿ ಬಿಜೆಪಿಯ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಮುಖ್ಯ ಉಪನ್ಯಾಸಕರಾಗಿ ಆಗಮಿಸಿದರು. ಅವರು ನಮ್ಮ ಸುರಕ್ಷೆ, ನೀರು, ಸಂಸ್ಕೃತಿ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಚೀನಾ ಒಡ್ಡುತ್ತಿರುವ ಸವಾಲುಗಳು ಹಾಗೂ ಭಾರತದ ಪ್ರತಿಕ್ರಿಯೆಗಳನ್ನು ತಿಳಿಸಿಕೊಟ್ಟರು. 500ಕ್ಕೂ ಅಧಿಕ ಸಾರ್ವಜನಿಕರು ಭಾಗವಹಿಸಿದ್ದರು.




**ಕಾಲೇಜು ವಿದ್ಯಾರ್ಥಿಗಳಿಗಾಗಿ ಪ್ರಬಂಧ ಸ್ಪರ್ಧೆ :** ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಶಿವಮೊಗ್ಗದ ರಾಷ್ಟ್ರೋತ್ಥಾನ ಬಳಗದ ವತಿಯಿಂದ 'ಮಾಧ್ಯಮ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ' ಎಂಬ ವಿಷಯದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಲಾಯಿತು. ರಾಜ್ಯದ ವಿವಿಧ ಕಾಲೇಜುಗಳ 80ಕ್ಕೂ ಅಧಿಕ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಪ್ರಥಮ, ದ್ವಿತೀಯ, ತೃತೀಯ ಹಾಗೂ 3 ಮೆಚ್ಚುಗೆಯ ಬಹುಮಾನಗಳನ್ನು ವಿತರಿಸಲಾಯಿತು.

## ಕೋಣಂದೂರು

**ಯಕ್ಷಗಾನ ಬಯಲಾಟ:** ದಕ್ಷಿಣ ಭಾರತದ ಜನಪ್ರಿಯ ಕಲೆಗಳಲ್ಲಿ ಪ್ರಮುಖವಾಗಿರುವ ಯಕ್ಷಗಾನ ಬಯಲಾಟ ಕರ್ನಾಟಕದ ಅತ್ಯಂತ ವಿಶಿಷ್ಟ ಕಲೆ. ನಮ್ಮ ಸಂಸ್ಕೃತಿ, ಆಚರಣೆ ಮತ್ತು ಸಂಪ್ರದಾಯಗಳು ಮೈವೆತ್ತಿರುವ ನಮ್ಮ ನಾಡಿನ ವಿಶೇಷತೆಗಳಲ್ಲೊಂದಾದ ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಕೋಣಂದೂರಿನ ರಾಷ್ಟ್ರೋತ್ಥಾನ ಬಳಗದ ವತಿಯಿಂದ ಹಾದಿಗಲ್ಲಿನ ಅಭಯಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಯಕ್ಷಗಾನ ಬಯಲಾಟವನ್ನು ಆಯೋಜಿಸಲಾಯಿತು.

## ಹೊಳೆಹೊನ್ನೂರು

**ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ:** ಸಮಾಜದಲ್ಲಿ ಸಾಮರಸ್ಯ ಹಾಗೂ ಏಕತೆ ಮೂಡಿಸುವ ಉದ್ದೇಶದಿಂದ ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ಬಳಗದ ವತಿಯಿಂದ ಆಗಸ್ಟ್ 28ರಂದು ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ 22ನೇ ವರ್ಷದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಹಾಗೂ ಧರ್ಮಜಾಗರಣ ಸಭೆ ನಡೆಯಿತು.

ರಾಣಿಬೆನ್ನೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಪ್ರಕಾಶಾನಂದ ಮಹಾರಾಜ್ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. 1000ಕ್ಕೂ ಹೆಚ್ಚು ಜನರಿಂದ ವೈಯಕ್ತಿಕ ಪೂಜೆ ನಡೆಯಿತು. 2500ಕ್ಕೂ ಅಧಿಕ ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ರಾಯಚೂರಿನ ಶಕ್ತಿನಗರ

ರಾಯಚೂರಿನ ಶಕ್ತಿನಗರದ ರಾಷ್ಟ್ರೋತ್ಥಾನ ಬಳಗವು ಕಳೆದ 20ಕ್ಕೂ ಅಧಿಕ ವರ್ಷಗಳಿಂದ ವಿವಿಧ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

**ಶಿಶುಮಂದಿರ:** ರಾಯಚೂರಿನ ಶಕ್ತಿನಗರದ ರಾಷ್ಟ್ರೋತ್ಥಾನ ಬಳಗದ ವತಿಯಿಂದ ಹತ್ತಾರು ವರ್ಷಗಳಿಂದ ಶಿಶುಮಂದಿರ ನಡೆಯುತ್ತಿದೆ. ಇಲ್ಲಿ ಚಿಕ್ಕಮಕ್ಕಳಿಗೆ ಯೋಗಾಭ್ಯಾಸ, ನೃತ್ಯ, ದೇಶಭಕ್ತಿ ಗೀತೆ, ಶ್ಲೋಕಗಳು, ನೀತಿಕಥೆಗಳು, ವಿಶೇಷ ಬೌದ್ಧಿಕ ಆಟಗಳು, ಕರಕುಶಲ ತರಬೇತಿ (ಕಸದಿಂದ ರಸ), ನಿರಪಯುಕ ವಸ್ತುಗಳಿಂದ ಆಕರ್ಷಕ ವಸ್ತುಗಳ ತಯಾರಿ, ಚಿತ್ರಕಲೆ ಮುಂತಾದ ಮನೋವಿಕಾಸಕ್ಕೆ ಅಗತ್ಯವಾದ ವಿವಿಧ ಚಟುವಟಿಕೆಗಳನ್ನು ಕಲಿಸಲಾಗುತ್ತಿದೆ.

**ಬೇಸಿಗೆ ಶಿಬಿರ:** ಮಕ್ಕಳಲ್ಲಿ ಸಂಸ್ಕಾರ ಹಾಗೂ ಅವರಲ್ಲಿರುವ ಪ್ರತಿಭಾ ವಿಕಾಸಕ್ಕಾಗಿ ರಾಯಚೂರಿನ ಶಕ್ತಿನಗರದ ರಾಷ್ಟ್ರೋತ್ಥಾನ ಬಳಗದ ವತಿಯಿಂದ 2017ರ ಮಾರ್ಚ್ 3ರಿಂದ 15ರ ತನಕ 13 ದಿನಗಳ ಕಾಲ ಮಕ್ಕಳ ಬೇಸಿಗೆ ಶಿಬಿರ ನಡೆಯಿತು.

# ಆರೋಗ್ಯಸೇವಾ ಕೇಂದ್ರ

## ಅ) ರಾಷ್ಟ್ರೋತ್ಥಾನ ರಕ್ತನಿಧಿ

ಜನರ ನೋವು–ನಲಿವುಗಳಿಗೆ ಆಸರೆಯಾಗುವ ಸಲುವಾಗಿ ಮೇ 30, 1993ರಂದು 'ರಾಷ್ಟ್ರೋತ್ಥಾನ ರಕ್ತನಿಧಿ' ಪ್ರಾರಂಭವಾಯಿತು. ಸಾಮಾಜಿಕ ಕಳಕಳಿಯುಳ್ಳ ಸ್ವಯಂಸೇವಾ ಸಂಸ್ಥೆಗಳು, ಕಂಪೆನಿಗಳು ಹಾಗೂ ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ ರಾಜ್ಯದ ವಿವಿಧೆಡೆಗಳಲ್ಲಿ ಸ್ವಯಂಪ್ರೇರಿತವಾಗಿ ರಕ್ತದಾನಗಳನ್ನು ನಡೆಸಿ ರಕ್ತವನ್ನು ಸಂಗ್ರಹಿಸಲಾಗುತ್ತಿದೆ. ಹೀಗೆ ಸೇವೆಯ ಪಥದಲ್ಲಿ ಮುನ್ನಡೆದುಕೊಂಡು ಬರುತ್ತಿರುವ ಪರಿಷತ್ ಈವರೆಗೆ (ಮಾರ್ಚ್ 31, 2018) 3,851 ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ನಡೆಸಿದೆ. 3,41,675 ರಕ್ತದಾನಿಗಳಿಂದ ರಕ್ತ ಸಂಗ್ರಹಿಸಿ, 2,60,348 ರೋಗಿಗಳಿಗೆ ರಕ್ತ ಪೂರೈಸಲಾಗಿದೆ.

ಜನರ ನೋವಿಗೆ ದನಿಯಾಗುವ ರಾಷ್ಟ್ರೋತ್ಥಾನ ರಕ್ತನಿಧಿಯ ಚಟುವಟಿಕೆಗಳನ್ನು ಗುರುತಿಸಿದ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಹಾಗೂ ಕರ್ನಾಟಕ ರಾಜ್ಯ ರಕ್ತಚಾಲನಾ ಪರಿಷತ್ 2011–12ನೇ ಸಾಲಿನ ಕರ್ನಾಟಕದ ಅತ್ಯುತ್ತಮ ರಕ್ತನಿಧಿ (Best Blood Bank in Karnataka) ಎಂದು ಪ್ರಮಾಣಪತ್ರ ಹಾಗೂ ಪಾರಿತೋಷಕ ನೀಡಿ ಗೌರವಿಸಿದೆ.

**ವೈಶಿಷ್ಟ್ಯ:** ಸಾಮಾನ್ಯ ರಕ್ತನಿಧಿಗಿಂತ ಭಿನ್ನವಾದ ವಿಶಿಷ್ಟ ಕಾರ್ಯಶೈಲಿ, ಸೇವಾತತ್ಪರತೆ, ರಕ್ತಸಂಗ್ರಹ ಮತ್ತು ವಿತರಣೆಯಲ್ಲಿ ರಾಜಿಮಾಡಿಕೊಳ್ಳದ ಕ್ಷಮತೆ, ಕಾರ್ಯದಕ್ಷತೆ ಹಾಗೂ ರಕ್ತಚಾಲನಾ ಪರಿಷತ್ ನಿಗದಿಪಡಿಸಿರುವ ತಪಾಸಣಾ ಶುಲ್ಕಕ್ಕಿಂತಲೂ ಕಡಮೆ ಶುಲ್ಕ ಪಡೆದು ಮತ್ತು ಕೆಲ ಸಂದರ್ಭಗಳಲ್ಲಿ ಕಡುಬಡವರಿಗೆ ಉಚಿತವಾಗಿ ರಕ್ತ ಪೂರೈಸುವ ಸಾಮಾಜಿಕ ಕಾಳಜಿ ಹಾಗೂ ಬದ್ಧತೆಯ ಮೂಲಕ ರಾಷ್ಟ್ರೋತ್ಥಾನ ರಕ್ತನಿಧಿ ರಾಜ್ಯಾದ್ಯಂತ ಗುರುತಿಸಿಕೊಂಡಿದೆ.

| 2017–18 ನೇ ಸಾಲಿನ ವಿವರ | | | |
|---|---|---|---|
| ರಕ್ತದಾನ ಶಿಬಿರ | – 357 | ರಕ್ತದಾನಿಗಳು | – 31,415 |
| ರಕ್ತದ ಯುನಿಟ್ಸ್ | – 73,083 | ಫಲಾನುಭವಿಗಳು | – 25,399 |

### ಉಲ್ಲೇಖನೀಯ ಸಂಗತಿಗಳು:

- ಡಯಾಲಿಸಿಸ್‌ಗೆ ಒಳಪಟ್ಟ ಆರ್ಥಿಕವಾಗಿ ಹಿಂದುಳಿದ ನೂರಕ್ಕೂ ಹೆಚ್ಚು ರೋಗಿಗಳು ಹೆಸರನ್ನು ನೊಂದಾಯಿಸಿಕೊಂಡಿದ್ದಾರೆ. ಇವರಿಗೆ ನಿರಂತರವಾಗಿ ಅತ್ಯಂತ ಕಡಮೆ (ಕೇವಲ ಸಂಸ್ಕರಣ ಶುಲ್ಕ) ಬೆಲೆಯಲ್ಲಿ ರಕ್ತವನ್ನು ನೀಡಲಾಗುತ್ತಿದೆ.
- ಜೀವಮಾನವಿಡೀ ರಕ್ತಪೂರಣದ ಆವಶ್ಯಕತೆ ಇರುವ ತಲಸ್ಸೆಮಿಯಾದಿಂದ ಬಳಲುತ್ತಿರುವ 350ಕ್ಕೂ ಅಧಿಕ ಮಕ್ಕಳಿಗೆ ನಿರಂತರ ನಿಶ್ಶುಲ್ಕವಾಗಿ ರಕ್ತವನ್ನು ನೀಡಲಾಗುತ್ತಿದೆ.
- 2017ರ ಮೇ 27ರಂದು ಬೆಂಗಳೂರಿನ ಸಿಸ್ಕೋ ಕಂಪೆನಿಯಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ 867 ಮಂದಿ ದಾನಿಗಳಿಂದ ರಕ್ತ ಸಂಗ್ರಹಿಸಲಾಗಿದೆ. ಈ ಹಿಂದೆ ಒಂದು ದಿನದಲ್ಲಿ ಇದೇ ಕಂಪೆನಿಯಲ್ಲಿ 1041, 1078 ಹಾಗೂ 1159 ಮಂದಿ ರಕ್ತದಾನ ಮಾಡಿದ್ದರು.



- ರೋಗಿಗಳಿಗೆ ಗುಣಮಟ್ಟದ ರಕ್ತನೀಡುವುದಕ್ಕಾಗಿ 2015ರ ಸೆಪ್ಟೆಂಬರ್ 14ರಂದು ಸುಸಜ್ಜಿತ ಸುರಕ್ಷಿತ ಪ್ಲೇಟ್‌ಲೆಟ್ಸ್ ಫೆರೆಸಿಸ್ ಯಂತ್ರವನ್ನು ಅಳವಡಿಸಿಕೊಳ್ಳಲಾಗಿದೆ. ಈವರೆಗೆ ಒಟ್ಟು 3000ಕ್ಕೂ ಅಧಿಕ SDP Unitsಗಳನ್ನು ಸಂಗ್ರಹಿಸಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ. ಈ ವರ್ಷ 1066 SDP Unitsಗಳನ್ನು ಸಂಗ್ರಹಿಸಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ.
- ವಿಶೇಷವಾಗಿ ಡೆಂಗ್ಯೂ ಜ್ವರದ ಹಾವಳಿಯಿದ್ದಾಗ Single Donor Platelets (SDP)ಯ ಬೇಡಿಕೆ ಹೆಚ್ಚಾಗಿರುತ್ತದೆ. ಈ ವರ್ಷ ಸುಮಾರು 750ಕ್ಕೂ ಹೆಚ್ಚು ಡೆಂಗ್ಯೂ ರೋಗಿಗಳು ಇದರ ಪ್ರಯೋಜನ ಪಡೆದಿದ್ದಾರೆ.
- ರಕ್ತದ ಗುಣಮಟ್ಟ ಹೆಚ್ಚಿಸುವುದಕ್ಕೆ ಪೂರಕವಾಗಿ Automated ELISA, Automated Blood Grouping and Crossmatching ಯಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.
- ರಕ್ತನಿಧಿಯ ಫಲಾನುಭವಿಗಳಲ್ಲಿ ಹಾಗೂ ಶಿಬಿರ ಸಂಯೋಜಕರು ರಕ್ತನಿಧಿ ಸಿಬ್ಬಂದಿಯ ಸಹಕಾರ ಹಾಗೂ ರಕ್ತದ ಗುಣಮಟ್ಟದ ಬಗ್ಗೆ ಬಹಳ ಪ್ರಶಂಸೆಯ ಮಾತುಗಳನ್ನಾಡುತ್ತಿದ್ದಾರೆ.






**ಅಭ್ಯಾಸ ವರ್ಗಗಳು:** ರಕ್ತನಿಧಿಯ ಸಿಬ್ಬಂದಿಗಳ ತಾಂತ್ರಿಕ ಹಾಗೂ ಸೇವಾ ಗುಣಮಟ್ಟವನ್ನು ವೃದ್ಧಿಸುವ, ಕಾರ್ಯಕ್ಷಮತೆ ಹಾಗೂ ವೈಚಾರಿಕ ಬದ್ಧತೆಯನ್ನು ಮೂಡಿಸುವ ದೃಷ್ಟಿಯಿಂದ ಕಳೆದ 5 ವರ್ಷಗಳಿಂದ (ಆಗಸ್ಟ್ 2013) ತಿಂಗಳಿಗೊಮ್ಮೆ ಅಭ್ಯಾಸ ವರ್ಗವನ್ನು ನಡೆಸಲಾಗುತ್ತಿದೆ.

**ನೂತನ ಭವನ:** ರಾಷ್ಟ್ರೋತ್ಥಾನ ರಕ್ತನಿಧಿಯ ಚಟುವಟಿಕೆಯನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಬೆಂಗಳೂರಿನ ಶ್ರೀ ಗವಿಗಂಗಾಧರೇಶ್ವರ ದೇವಸ್ಥಾನದ ಸಮೀಪ ನೂತನ ಭವನವೊಂದು (ಶ್ರೀಮತಿ ಸುಭದ್ರಾ ಬೆನ್ ಜಯಂತಿಲಾಲ್ ನಗರ್ ದಾಸ್ ಷಾ ಭವನ) ನಿರ್ಮಾಣಗೊಳ್ಳಲಿದೆ. ಬರೋಡಾದ ಕೈಲಾಸ್ ಕ್ಯಾನ್ಸರ್ ಹಾಸ್ಪಿಟಲ್‌ನ ಅಧ್ಯಕ್ಷರಾದ ಡಾ. ವಿಕ್ರಮ ಪಟೇಲ್ ಹಾಗೂ ಕೇಂದ್ರ ಸಚಿವರಾದ ಅನಂತಕುಮಾರ್ ಅವರು ಭೂಮಿಪೂಜೆ ನಡೆಸಿರುವ ಈ ಕಟ್ಟಡದ ಕಾಮಗಾರಿ ಪ್ರಗತಿಯಲ್ಲಿದೆ.

## ಆಯುರ್ವೇದ ಚಿಕಿತ್ಸಾಲಯ

ಬೆಂಗಳೂರಿನ ರಾಷ್ಟ್ರೋತ್ಥಾನ ರಕ್ತನಿಧಿಯಿಂದ ವಿಶೇಷವಾಗಿ ಗಳಗಂಡ (ಥೈರಾಯ್ಡ್) ಸೇರಿದಂತೆ ವಿವಿಧ ರೋಗಗಳಿಗೆ ಆಯುರ್ವೇದ ಪದ್ಧತಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

2016–17ನೇ ಸಾಲಿನಲ್ಲಿ ಸುಮಾರು 173 ಮಂದಿ ಗಳಗಂಡ ರೋಗಿಗಳು ಚಿಕಿತ್ಸೆ ಪಡೆದಿದ್ದಾರೆ. ಇವರಿಗೆ ನಿರಂತರವಾಗಿ ಮಾರ್ಗದರ್ಶನ ಹಾಗೂ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಹಲವು ರೋಗಿಗಳ ಆರೋಗ್ಯ ಸುಧಾರಣೆಯಲ್ಲಿದ್ದು, ಹಲವರು ಈ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖರಾಗಿದ್ದಾರೆ.

# ಶಾ ದಾಮಜಿ ಜಾದವಜಿ ಛೇಡ ಮೆಮೋರಿಯಲ್ ರಾಷ್ಟ್ರೋತ್ಥಾನ ರಕ್ತನಿಧಿ, ಹುಬ್ಬಳ್ಳಿ

ಉತ್ತರ ಕರ್ನಾಟಕ ಭಾಗದ ಜನರಿಗೆ ನೆರವಾಗುವ ಉದ್ದೇಶದಿಂದ ಹುಬ್ಬಳಿಯಲ್ಲಿ ಜೂನ್ 2010ರಲ್ಲಿ ಶಾ ದಾಮಜಿ ಜಾದವಜಿ ಛೇಡ ಅವರ ನೆರವಿನಿಂದ ರಾಷ್ಟ್ರೋತ್ಥಾನ ರಕ್ತನಿಧಿಯನ್ನು ಪ್ರಾರಂಭಿಸಲಾಯಿತು.

ರಕ್ತನಿಧಿಯ ವತಿಯಿಂದ 2017–18ನೇ ಸಾಲಿನಲ್ಲಿ ಒಟ್ಟು 77 ರಕ್ತದಾನ ಶಿಬಿರಗಳನ್ನು ನಡೆಸಲಾಗಿದೆ. 10599 ಯೂನಿಟ್ ರಕ್ತಸಂಗ್ರಹಿಸಿ 7345 ಫಲಾನುಭವಿಗಳಿಗೆ ವಿತರಿಸಲಾಗಿದೆ.

## Automated ELISA Processor ಉದ್ಘಾಟನೆ

ಫಲಾನುಭವಿಗಳಿಗೆ ಗುಣಮಟ್ಟದ ರಕ್ತನೀಡುವ ಎಲ್ಲ ಪ್ರಯತ್ನಗಳನ್ನೂ ರಾಷ್ಟ್ರೋತ್ಥಾನ ರಕ್ತನಿಧಿ ನಿರಂತರವಾಗಿ ನಡೆಸುತ್ತಿದ್ದು. ರಕ್ತದಾನಿಗಳಿಂದ ಪಡೆಯುವ ರಕ್ತದಲ್ಲಿ HIV, Hepatitis B&C, VDRL ಸೋಂಕುಗಳಿರಬಹುದು.

## ರಕ್ತ ತುಲಾಭಾರ

ಹುಬ್ಬಳ್ಳಿಯ ರಾಷ್ಟ್ರೋತ್ಥಾನ ರಕ್ತನಿಧಿಯನ್ನು ಮೇಲ್ದರ್ಜೆಗೇರಿಸಲು ಅಂಗಾಂಶಗಳನ್ನು ಪ್ರತ್ಯೇಕಿಸುವ ಘಟಕವನ್ನು (ಇನ್ಫೋಸಿಸ್‌ನ ಸಹಯೋಗದಲ್ಲಿ) ಪ್ರಾರಂಭಿಸಲಾಗಿದೆ. ಇದರ ಲೋಕಾರ್ಪಣ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿದ್ದ ಮೂರು ಸಾವಿರ ಮಠದ ಶ್ರೀ ಗುರುಸಿದ್ಧರಾಜ ಯೋಗೀಂದ್ರ ಮಹಾಸ್ವಾಮಿಗಳು ಮಾತಿನ ಮಧ್ಯೆ, ತಮಗೆ ತುಲಾಭಾರ ಮಾಡಲು ಬಯಸುವ ಎಲ್ಲ ಭಕ್ತರಲ್ಲಿ, ಕೇವಲ ರಕ್ತದಾನದ ಮೂಲಕ ತಮ್ಮ ತೂಕದಷ್ಟು ರಕ್ತ ಸಂಗ್ರಹಿಸಿ ತುಲಾಭಾರ ನಡೆಸಿದಲ್ಲಿ ಮಾತ್ರ ತಾವು ತುಲಾಭಾರಕ್ಕೆ ಒಪ್ಪುವುದಾಗಿ ಹೇಳಿದರು. ಅದರಂತೆ ಸ್ವಾಮಿಜೀ ಅವರ ಶಿಷ್ಯರನ್ನೊಳಗೊಂಡ ಸ್ಥಳೀಯ ನಾಮದೇವ ಸೇವಾ ಸಂಸ್ಥೆಯವರು ರಾಷ್ಟ್ರೋತ್ಥಾನ ರಕ್ತನಿಧಿಯ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಿದರು. ರಕ್ತದಾನಿಗಳಿಂದ ಸಂಗ್ರಹವಾದ ರಕ್ತದಿಂದ ಶ್ರೀಗಳ ತುಲಾಭಾರ ಕಾರ್ಯಕ್ರಮ ನಡೆಸಿದರು. ಸುಮಾರು 140ಕ್ಕೂ ಅಧಿಕ ಮಂದಿ ರಕ್ತದಾನ ಮಾಡಿದರು.





ಇದನ್ನು ತಪಾಸಣೆ ಮಾಡುವುದಕ್ಕಾಗಿ ಹುಬ್ಬಳ್ಳಿಯ ರಕ್ತನಿಧಿಯಲ್ಲಿ Automated ELISA Processor ಅಳವಡಿಸಿಕೊಳ್ಳಲಾಗಿದೆ. ಈ ಯಂತ್ರವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಮೋಹನ್ ಭಾಗವತ್ ಅವರು 2017ರ ಆಗಸ್ಟ್ 19ರಂದು ಉದ್ಘಾಟಿಸಿದರು.

## ಆ) 'ಸಂರಕ್ಷಾ'–ತಲೆಸ್ಸೆಮಿಯಾ ಮಕ್ಕಳ ಆರೈಕೆ ಕೇಂದ್ರ

ಮಕ್ಕಳಲ್ಲಿ ಹುಟ್ಟುವಾಗಲೇ ಇರುವ ಆನುವಂಶಿಕನ್ಯೂನತೆಯಾದ ತಲೆಸ್ಸೆಮಿಯಾ ಬಾಧಿತ ಮಗುವಿನ ದೇಹದಲ್ಲಿ ಹಿಮೋಗ್ಲೋಬಿನ್‌ಯುಕ್ತ ಗುಣಮಟ್ಟದ ರಕ್ತದ ಉತ್ಪತ್ತಿಯಾಗುವುದಿಲ್ಲ. ಇಂತಹ ಮಕ್ಕಳು ಉಲ್ಲಾಸದಿಂದಿರಲು ನಿರಂತರ ರಕ್ತಪೂರಣ(Blood Transfusion) ಅನಿವಾರ್ಯ. ಈ ನ್ಯೂನತೆಯಿಂದ ಬಳಲುತ್ತಿರುವ ಮಕ್ಕಳಿಗೆ ಹಾಗೂ ಕುಟುಂಬಕ್ಕೆ ನೆರವಾಗುವ ಉದ್ದೇಶದಿಂದ 'ಸಂಕಲ್ಪ ಇಂಡಿಯಾ ಫೌಂಡೇಶನ್'ನ ಸಹಕಾರದೊಂದಿಗೆ 2013ರ ಆಗಸ್ಟ್ 19ರಂದು ಆರಂಭವಾದದ್ದು ತಲೆಸ್ಸಿಮಿಯಾ ಮಕ್ಕಳ ಆರೈಕೆ ಕೇಂದ್ರ – 'ಸಂರಕ್ಷಾ'.

- 21 ಮಕ್ಕಳ ದಾಖಲಾತಿಯಿಂದ ಆರಂಭಗೊಂಡು ಇದೀಗ 370ಕ್ಕೂ ಅಧಿಕ ಮಕ್ಕಳ ಆರೈಕೆ ಮಾಡಲಾಗುತ್ತಿದೆ. ಬೆಂಗಳೂರು ಮಾತ್ರವಲ್ಲದೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಹಾಗೂ ಇತರ ರಾಜ್ಯಗಳಿಂದ (ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು) ಮಕ್ಕಳು 'ಸಂರಕ್ಷಾ'ದಲ್ಲಿ ಆರೈಕೆಗಾಗಿ ಬರುತ್ತಿದ್ದಾರೆ.
- ರಕ್ತತಪಾಸಣೆ, ರಕ್ತಪೂರಣ ಮಾಡುವುದಲ್ಲದೇ ಫೋಲಿಕ್ ಆ್ಯಸಿಡ್, ಕ್ಯಾಲ್ಸಿಯಂ ಮತ್ತು ಬಿ–ಕಾಂಪ್ಲೆಕ್ಸ್ ಮುಂತಾದ ಅಗತ್ಯ ಔಷಧಗಳನ್ನು ಅವರ ಆರ್ಥಿಕ ಸ್ಥಿತಿಗತಿಯನ್ನು ಗಮನಿಸದೆ, ಎಲ್ಲರಿಗೂ ಉಚಿತವಾಗಿ ನೀಡಲಾಗುತ್ತಿದೆ.
- ಮಕ್ಕಳಿಗೆ ಗುಣಮಟ್ಟದ ತಪಾಸಣೆಗೆ ಒಳಪಟ್ಟ ರಕ್ತವನ್ನೇ ನೀಡಲಾಗುತ್ತಿದೆ.
- ಅಸ್ಥಿಮಜ್ಜೆ ಕಸಿಚಿಕಿತ್ಸೆ (Bone Marrow Transplantation) ಮೂಲಕ ತಲಸ್ಸೆಮಿಯಾ ನ್ಯೂನತೆಯಿಂದ ಗುಣಮುಖರಾಗಬಹುದು. ಸಂರಕ್ಷಾದಲ್ಲಿ ಅಸ್ಥಿಮಜ್ಜೆ ಕಸಿಚಿಕಿತ್ಸೆಯ ವಿಧಾನವನ್ನು ಕ್ರಮಪ್ರಕಾರ ನಡೆಸಲಾಗುತ್ತಿದೆ.
- ಅಸ್ಥಿಮಜ್ಜೆ ಕಸಿಚಿಕಿತ್ಸೆಗೆ ಪೂರ್ವದಲ್ಲಿ ಎಚ್‌ಎಲ್‌ಎ ಟೈಪಿಂಗ್ (Human Leukocyte Antigen)ನ್ನು ಉಚಿತವಾಗಿ ನೀಡಲಾಗುತ್ತಿದ್ದು, ಪ್ರತಿವಾರ 10–12 ಮಕ್ಕಳು ಸಲಹೆ ಮತ್ತು ಸಿದ್ಧತೆಯ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿದ್ದಾರೆ.

### ಉಪಲಬ್ಧಿ

- ಈ ವರ್ಷ ಒಟ್ಟು 13 ಮಕ್ಕಳಿಗೆ ಅಸ್ಥಿಮಜ್ಜೆ ಕಸಿಚಿಕಿತ್ಸೆ ಮಾಡಿಸಲಾಗಿದೆ.
- ಸಂರಕ್ಷಾದಲ್ಲಿ ಈವರೆಗೆ 50ಕ್ಕೂ ಹೆಚ್ಚು ಅಸ್ಥಿಮಜ್ಜೆ ಕಸಿಚಿಕಿತ್ಸೆ ಪಡೆಯುವ ತಲಸ್ಸೆಮಿಯಾ ಮಕ್ಕಳು ಚಿಕಿತ್ಸಾಪೂರ್ವ ಹಾಗೂ ಚಿಕಿತ್ಸಾನಂತರದ ಆರೈಕೆ ಪಡೆದಿದ್ದಾರೆ. ಪ್ರಸ್ತುತ ಆ ಎಲ್ಲರೂ ತಲಸ್ಸೆಮಿಯಾದಿಂದ ಮುಕ್ತರಾಗಿದ್ದಾರೆ.
- ಸಂರಕ್ಷಾದಲ್ಲಿ ಶುಶ್ರೂಷೆ ಪಡೆಯುತ್ತಿರುವ ಬಹುತೇಕ ಎಲ್ಲ ಮಕ್ಕಳಲ್ಲೂ ಇದೀಗ ಆರೋಗ್ಯದಲ್ಲಿ ಸ್ಥಿರತೆಯ ಚಿಹ್ನೆಗಳು ಕಂಡುಬರುತ್ತಿವೆ. ಗುಣಮಟ್ಟದ ಪರೀಕ್ಷಿತ ರಕ್ತವನ್ನು ನೀಡುತ್ತಿರುವುದರಿಂದ ಮಕ್ಕಳಲ್ಲಿ ಹಿಮೋಗ್ಲೋಬಿನ್ ಪ್ರಮಾಣ ಹೆಚ್ಚಾಗಿದೆ. ಇದರ ಪರಿಣಾಮವಾಗಿ ಅವರ ಪಿತ್ತಕೋಶ (Liver) ಮತ್ತು ಗುಲ್ಮ(ಸ್ಪ್ಲೀನ್–Spleen)ಗಳ ಗಾತ್ರದಲ್ಲಿ ಮಹತ್ತ್ವದ ಸುಧಾರಣೆಯಾಗುತ್ತಿದೆ. ಅವರ ಎತ್ತರ ಹಾಗೂ ತೂಕದಲ್ಲೂ ಸುಧಾರಣೆಯಾಗಿದೆ.
- ಉಚಿತವಾಗಿ Hydroxy Urea ಚಿಕಿತ್ಸೆ ನೀಡಲಾಗುತ್ತಿದ್ದು, ಇದರಿಂದ ರಕ್ತಪೂರಣದ ನಡುವಿನ ಅವಧಿಯು ಹೆಚ್ಚಿದೆ. ಇದರಿಂದ ಮಕ್ಕಳ ದೇಹದಲ್ಲಿ Iron Overload ಕಡಮೆಯಾಗಿ ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತಿವೆ.
- ಮಕ್ಕಳಿಗೆ ನೀಡುತ್ತಿರುವ ಆರೈಕೆ, ಪೋಷಕರಿಗೆ ನೀಡುತ್ತಿರುವ ಸಮಾಧಾನ ಹಾಗೂ ವಿಶ್ವಾಸದ ಪರಿಣಾಮವಾಗಿ ಬಹಳಷ್ಟು ಗುಣಾತ್ಮಕ ಪ್ರತಿಕ್ರಿಯೆ ಕಂಡುಬಂದಿದೆ. ಪೋಷಕರು ಈ ಮಕ್ಕಳ ಬಗ್ಗೆ ಅಗತ್ಯವಾದ ಕಾಳಜಿ ವಹಿಸುತ್ತಿದ್ದಾರೆ; ಮಕ್ಕಳು ಶಾಲೆಗೆ ಹೋಗಲು ಆರಂಭಿಸಿದ್ದಾರೆ. ಶಾಲೆ ಮತ್ತು ಮನೆಯಲ್ಲಿ ಅವರ ಸಾಧನೆ–ನಡವಳಿಕೆಗಳು ಉತ್ತಮಗೊಂಡಿವೆ.



## ಫಲಾನುಭವಿಗಳ ಅನಿಸಿಕೆ

- ಈ ಹಿಂದೆ ಬೇರೆ ಆಸ್ಪತ್ರೆಗಳಲ್ಲಿ ರಕ್ತ ಹಾಕಿಸಿಕೊಳ್ಳುತ್ತಿದ್ದೆವು. ಅಲ್ಲಿಗೆ ಹೋಗಲು ಮಕ್ಕಳು ಭಯಪಡುತ್ತಿದ್ದರು. ಆದರೆ ರಾಷ್ಟ್ರೋತ್ಥಾನದ ಈ ಕೇಂದ್ರಕ್ಕೆ ಖುಷಿಯಿಂದಲೇ ಬರುತ್ತಾರೆ. ಯಾಕೆಂದರೆ ಇಲ್ಲಿ ಮಗುವನ್ನು ಡಾಕ್ಟರ್–ನರ್ಸ್ ಆತ್ಮೀಯತೆಯಿಂದ ನಮಗಿಂತಲೂ ಪ್ರೀತಿಯಿಂದ ನೋಡಿಕೊಳ್ಳುತ್ತಾರೆ.
- ಬೇರೆ ಆಸ್ಪತ್ರೆಗಳಲ್ಲಿ ರಕ್ತ ಹಾಕಿಸಿಕೊಂಡ ನನ್ನ ಮಗನ ದೇಹವು ಕೆಲವೇ ದಿನಗಳಲ್ಲಿ ಮತ್ತೆ ಊದಿಕೊಳ್ಳುತ್ತಿತ್ತು, ಅಂದರೆ ಹಿಮೋಗ್ಲೋಬಿನ್ ಅಂಶದ ರಕ್ತದ ಕೊರತೆ 7–8 ದಿನಗಳಲ್ಲಿಯೇ ಕಂಡುಬರುತ್ತಿತ್ತು. ಆದರೆ ಈಗ 2 ರಕ್ತಪೂರಣದ ನಡುವಿನ ಅಂತರ ಹೆಚ್ಚಾಗುತ್ತಿದೆ. ಇದಕ್ಕೆ ರಾಷ್ಟ್ರೋತ್ಥಾನದಲ್ಲಿ ನೀಡುವ ಗುಣಮಟ್ಟದ ರಕ್ತವೇ ಕಾರಣ. ಬೇರೆಬೇರೆ ಸೈಡ್ ಎಫೆಕ್ಟ್‌ಗಳಿಂದಲೂ ಈಗ ನಮ್ಮ ಮಗು ಮುಕ್ತವಾಗಿದೆ.
- ನಮ್ಮನ್ನು ರೋಗಿಗಳಂತೆ ನೋಡದೆ ತಮ್ಮ ಮನೆಯವರಂತೆಯೇ ಇಲ್ಲಿ ನೋಡಿಕೊಳ್ಳಲಾಗುತ್ತಿದೆ.
- ಜೀವನ ನಡೆಸುವುದೇ ಕಷ್ಟವಾಗಿರುವ ನಮಗೆ ಸಾವಿರಾರು ರೂಪಾಯಿ ಖರ್ಚು ಮಾಡಿ ಚಿಕಿತ್ಸೆ ನೀಡುವ ಸಾಮರ್ಥ್ಯ ಇಲ್ಲ. ಉಚಿತ ಆರೈಕೆ ಕೇಂದ್ರ ಸ್ಥಾಪಿಸುವ ಮೂಲಕ ನಮಗೆ ನೆರವಾಗಿರುವ ರಾಷ್ಟ್ರೋತ್ಥಾನಕ್ಕೆ ಕೃತಜ್ಞತೆಗಳು. ಇಲ್ಲಿ ರಕ್ತವನ್ನು ಉಚಿತವಾಗಿ ನೀಡುವುದರ ಜೊತೆಗೆ ಬಹಳಷ್ಟು ಔಷಧಗಳನ್ನೂ ಉಚಿತವಾಗಿ ನೀಡುತ್ತಿದ್ದಾರೆ. ಇಷ್ಟು ಮಾತ್ರವಲ್ಲದೇ ಪ್ರೀತಿ–ಮಮತೆಯಿಂದ ಮಕ್ಕಳೊಂದಿಗೆ ಇರುತ್ತಾರೆ. ಇದು ಮಕ್ಕಳನ್ನು ಮಾನಸಿಕವಾಗಿ ಗಟ್ಟಿಗೊಳಿಸಿದೆ. ಮಕ್ಕಳ ಮುಖದಲ್ಲಿ ನಗು ಕಾಣುವಂತೆ ಮಾಡಿದೆ.

## ಇ) ಅಗ್ನಿವೇಶ ಆಯುರ್ವೇದ ಅನುಷ್ಠಾನ

ಅಗ್ನಿವೇಶ ಆಯುರ್ವೇದ ಅನುಷ್ಠಾನವು ರಾಷ್ಟ್ರೋತ್ಥಾನ ಆರೋಗ್ಯ ಸೇವಾ ಕೇಂದ್ರದ ಚಟುವಟಿಕೆಯಾಗಿದ್ದು ಕಳೆದ 25 ವರ್ಷಗಳಿಂದ ಆಯುರ್ವೇದ ವೈದ್ಯರ ನಡುವೆ ಕೆಲಸ ನಿರ್ವಹಿಸುತ್ತಿದೆ.

- ಬಳ್ಳಾರಿ, ಹಾವೇರಿ, ತುಮಕೂರು, ಬೆಳಗಾವಿ, ಗದಗ, ಬಾಗಲಕೋಟೆ, ಕಲಬುರಗಿ, ಚಿತ್ರದುರ್ಗ, ಮೈಸೂರು ಹಾಗೂ ಬೆಂಗಳೂರು ಸೇರಿದಂತೆ ರಾಜ್ಯದ 13 ಜಿಲ್ಲೆಗಳ ಒಟ್ಟು 350 ತಜ್ಞ ಆಯುರ್ವೇದ ವೈದ್ಯರು ಅಗ್ನಿವೇಶ ಆಯುರ್ವೇದ ಅನುಷ್ಠಾನದ ಸದಸ್ಯತ್ವ ಹೊಂದಿದ್ದಾರೆ.
- ಆಯುರ್ವೇದ ಪದ್ಧತಿಯನ್ನು ಪರಿಣಾಮಕಾರಿಯಾಗಿಸಲು ಪ್ರತಿ ತಿಂಗಳ ಕೊನೆಯ ಗುರುವಾರದಂದು ಉಪನ್ಯಾಸ ಕಾರ್ಯಕ್ರಮಗಳನ್ನು (ಮಾಸಿಕ ನಿರಂತರ ವೈದ್ಯಕೀಯ ಶಿಕ್ಷಣ – ಸಿ.ಎಂ.ಇ.) ನಡೆಸಲಾಗುತ್ತಿದೆ.
- ಸಾರ್ವಜನಿಕರಿಗಾಗಿ ಉಚಿತ ಆಯುರ್ವೇದ ವೈದ್ಯಕೀಯ ಸೇವೆ ಮತ್ತು ವಿಚಾರ ಸಂಕೀರ್ಣಗಳನ್ನು ನಡೆಸಲಾಗುತ್ತಿದೆ.
- ಡಯಾಬಿಟೀಸ್, ಆಮ್ಲಪಿತ್ತ ಸೇರಿದಂತೆ ದೇಹದ ವಿವಿಧ ಭಾಗಗಳಿಗೆದುರಾಗುವ ರೋಗಗಳಿಗೆ ಆಯುರ್ವೇದ ಚಿಕಿತ್ಸಾ ಕ್ರಮಗಳ ಕುರಿತು ಬಸವನಗುಡಿಯ ಅಮೃತ ಆಯುರ್ವೇದ ಸೆಂಟರ್‌ನ ಡಾ. ಪದ್ಮನಾಭನ್ ಅವರಿಂದ ತಿಂಗಳಿಗೊಮ್ಮೆ ಪ್ರತೀ 2ನೇ ಭಾನುವಾರ ತರಬೇತಿ ಶಿಬಿರವನ್ನು ನಡೆಸಲಾಗಿದೆ. 95 ಮಂದಿ ಆಯುರ್ವೇದ ವೈದ್ಯರು ಭಾಗವಹಿಸುತ್ತಿದ್ದಾರೆ.



ಆರೋಗ್ಯ ಸಂರಕ್ಷಣೆಗಾಗಿ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಆಯುರ್ವೇದ ಪದ್ಧತಿ ಜಾರಿಯಲ್ಲಿತ್ತು. ಯಾವುದೇ ಬಾಹ್ಯ ತೊಂದರೆಗಳಿಲ್ಲದೆ ರೋಗವನ್ನು ಪರಿಣಾಮಕಾರಿಯಾಗಿ ಹಾಗೂ ಸಂಪೂರ್ಣವಾಗಿ ಗುಣಪಡಿಸಬಲ್ಲ ಮತ್ತು ಆರೋಗ್ಯಸ್ಥಿತಿಯನ್ನು ಸ್ಥಿರವಾಗಿ ಕಾಪಾಡಬಲ್ಲ ಚಿಕಿತ್ಸಾ ಕ್ರಮ ಆಯುರ್ವೇದ ಪದ್ಧತಿಯದ್ದು. ತಾತ್ಕಾಲಿಕ ಪರಿಹಾರವನ್ನೇ ನೆಚ್ಚಿಕೊಂಡಿರುವ ಜನಸಾಮಾನ್ಯರ ಮನಃಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಇಂದು ಆಯುರ್ವೇದ ವೈದ್ಯರು ಇನ್ನಿತರ ವೈದ್ಯಕೀಯ ಪದ್ಧತಿಯಲ್ಲಿ ಚಿಕಿತ್ಸೆ ನೀಡುತ್ತಿದ್ದಾರೆ. ಹೀಗಾಗಿ ಆಯುರ್ವೇದ ವೈದ್ಯರನ್ನು ಸಂಘಟಿಸಿ, ಅವರಲ್ಲಿ ವಿಶ್ವಾಸ ತುಂಬುವ ಸಲುವಾಗಿ ಹಾಗೂ ಆಯುರ್ವೇದದ ವಿವಿಧ ಮಜಲುಗಳನ್ನು ಪರಿಚಯಿಸುವ ಮತ್ತು ಅನೇಕ ಸಮಸ್ಯೆಗಳಿಗೆ ಆಯುರ್ವೇದದ ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಹಂಚಿಕೊಳ್ಳುವ ಸಲುವಾಗಿ ಅಗ್ನಿವೇಶ ಆಯುರ್ವೇದ ಅನುಷ್ಠಾನ ಪ್ರಾರಂಭವಾಯಿತು.

- ವಿಶೇಷವಾಗಿ ಪಂಚಕರ್ಮ ಚಿಕಿತ್ಸೆಯ ಕುರಿತು ರಾಜರಾಜೇಶ್ವರಿ ನಗರದ ಪೂರ್ಣಾಯು ಆಯುರ್ವೇದ ಹೆಲ್ತ್ ಸೆಂಟರ್‌ನ ಡಾ. ಮುರುಳೀಧರ್ ಅವರಿಂದ ತಿಂಗಳಿಗೊಮ್ಮೆ ಪಂಚಕರ್ಮ ಸಂಬಂಧಿ ವಿಷಯಗಳ ಕುರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಪ್ರಸ್ತುತ 59 ಮಂದಿ ಆಯುರ್ವೇದ ವೈದ್ಯರು ಭಾಗವಹಿಸುತ್ತಿದ್ದಾರೆ.

## 2017–18ನೇ ಸಾಲಿನಲ್ಲಿ ನಡೆದ ಮಾಸಿಕ ಉಪನ್ಯಾಸ

ರಾಜ್ಯದ ಪ್ರತಿಷ್ಠಿತ ಆಯುರ್ವೇದ ವೈದ್ಯರು, ಪ್ರಾಧ್ಯಾಪಕರು ಆಗಮಿಸಿ ನೇತ್ರ ಚಿಕಿತ್ಸೆ, ಪಂಚಕರ್ಮ ಚಿಕಿತ್ಸೆ, ಆಮ್ಲವಾತ, ಬಸ್ತಿ ಚಿಕಿತ್ಸೆ ಮುಂತಾದವುಗಳಿಗೆ ಆಯುರ್ವೇದ ಚಿಕಿತ್ಸಾ ಕ್ರಮಗಳ ಪರಿಣಾಮಕಾರಿ ಬಳಕೆ ಹಾಗೂ ಎದುರಾಗುವ ಸಮಸ್ಯೆಗಳು ಮತ್ತು ಅದಕ್ಕಿರುವ ಪರಿಹಾರಗಳ ಕುರಿತು ಉಪನ್ಯಾಸ ನೀಡಿದರು. ಪ್ರತೀ ತಿಂಗಳು 70 ಮಂದಿ ಹಿರಿಯ ಮತ್ತು ಕಿರಿಯ ವೈದ್ಯರು ಭಾಗವಹಿಸಿದರು.

## ಅಗ್ನಿವೇಶ ಆಯುರ್ವೇದ ಅನುಷ್ಠಾನದ ರಜತಮಹೋತ್ಸವ

ಅಗ್ನಿವೇಶ ಆಯುರ್ವೇದ ಅನುಷ್ಠಾನದ ರಜತ ಮಹೋತ್ಸವ ಹಾಗೂ ಧನ್ವಂತರಿ ಜಯಂತಿ ಪ್ರಯುಕ್ತ ನವೆಂಬರ್ 25 ಮತ್ತು 26ರಂದು ಎರಡು ದಿನಗಳ ಕಾಲ ಬೆಂಗಳೂರಿನ ಕೆಂಪೇಗೌಡನಗರದ ಕೇಶವ ಶಿಲ್ಪ ಸಭಾಂಗಣದಲ್ಲಿ ಯಶಸ್ವೀ ಆಯುರ್ವೇದ ವೈದ್ಯರಾಗುವುದು ಹೇಗೆ? (How to become a successful Ayurvedic practitioner) ಮತ್ತು "ಫಲಿತಾಂಶ ದೃಢೀಕೃತ ಆಯುರ್ವೇದ ವೈದ್ಯ ವೃತ್ತಿ" (Protocol based Ayurveda practice) ಎಂಬ ವಿಷಯಗಳ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಲಾಯಿತು.

- ಎರಡು ದಿನಗಳ ಕಾಲ ವಿವಿಧ ಅವಧಿಗಳಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಕರ್ನಾಟಕದ 20ಕ್ಕೂ ಅಧಿಕ ಪ್ರತಿಷ್ಠಿತ ಆಯುರ್ವೇದ ವೈದ್ಯರು ಆಗಮಿಸಿ ಉಪನ್ಯಾಸ ನೀಡಿದರು.
- **ಸಂಮಾನ:** ಸಂಸ್ಥೆಯ ವತಿಯಿಂದ ಪ್ರತೀ ವರ್ಷ ಆಯುರ್ವೇದದಲ್ಲಿ ಗಣನೀಯ ಸೇವೆ ಸಲ್ಲಿಸಿದ ಹಿರಿಯ ವೈದ್ಯರನ್ನು ಗುರುತಿಸಿ, ಸಂಮಾನಿಸಿ ಗೌರವಿಸಲಾಗುತ್ತಿದೆ. ಈ ವರ್ಷ ಮೈಸೂರಿನ ಸರ್ಕಾರೀ ಆಯುರ್ವೇದ ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಅಶೋಕ್ ಸತ್ಪುಟೆ ಮತ್ತು ಡಾ. ಸತ್ಯನಾರಾಯಣ ಭಟ್ ಅವರನ್ನು ಸಂಮಾನಿಸಲಾಯಿತು.

# ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ

'ಸರ್ವೇ ಸಂತು ನಿರಾಮಯಾಃ' ಎಂಬ ಪಾರಂಪರಿಕ ಉಕ್ತಿಯಂತೆ ಪ್ರತಿಯೊಬ್ಬರೂ ಕಾಯಿಲೆಮುಕ್ತ ಆದರ್ಶ ಜೀವನ ನಡೆಸುವಂತಾಗಬೇಕೆಂಬ ಆಶಯದಿಂದ ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆಯು ಕಳೆದ 45 ವರ್ಷಗಳಿಂದ ನಿರಂತರ ಯೋಗ ಸಂಬಂಧಿತ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.

**ಪ್ರಸ್ತುತ ಬೆಂಗಳೂರಿನಲ್ಲಿ ಒಟ್ಟು 8 ಯೋಗಕೇಂದ್ರಗಳನ್ನು ನಡೆಸುತ್ತಿದೆ. ಪ್ರತಿದಿನ ಬೇರೆ ಬೇರೆ ಅವಧಿಗಳಲ್ಲಿ, ಬೇರೆ ಬೇರೆ ಸ್ತರಗಳಲ್ಲಿ (ಪ್ರವೇಶ, ಅಭ್ಯಾಸ, ಪ್ರಗತ, ಯೋಗ ಚಿಕಿತ್ಸೆ, ವಾರಾಂತ್ಯದ ಯೋಗ ತರಗತಿ, ಮಕ್ಕಳ ಯೋಗ ತರಗತಿಗಳು) ಒಟ್ಟು 126 ಯೋಗ ತರಗತಿಗಳು ನಡೆಯುತ್ತಿವೆ. ಸುಮಾರು 3000 ಯೋಗಬಂಧುಗಳು ಪ್ರತಿನಿತ್ಯ ಯೋಗತರಗತಿಗಳಲ್ಲಿ ಭಾಗವಹಿಸುತ್ತಿದ್ದಾರೆ.**

**ಯೋಗಾಭ್ಯಾಸದ ಜೊತೆಜೊತೆಗೆ ಯೋಗಬಂಧುಗಳಲ್ಲಿ ಹಾಗೂ ಶಿಕ್ಷಕರಲ್ಲಿ ಸಾಮಾಜಿಕ ಕಾಳಜಿ, ಸಾಂಸ್ಕೃತಿಕ ಪರಂಪರೆ ಬಗೆಗೆ ಜಾಗೃತಿ–ಹೆಮ್ಮೆ ಮೂಡಿಸುವ ಸಲುವಾಗಿ ಹಮ್ಮಿಕೊಂಡ ಕಾರ್ಯಕ್ರಮಗಳು**

## ಯೋಗಬಂಧುಗಳಿಗಾಗಿ

### ತಿಂಗಳಿಗೊಂದು ಉಪನ್ಯಾಸ

ಯೋಗಾಭ್ಯಾಸದ ಜೊತೆ ಜೊತೆಗೆ ಯೋಗಬಂಧುಗಳಲ್ಲಿ ಸಾಮಾಜಿಕ ಕಾಳಜಿಯನ್ನು ಬೆಳೆಸುವ, ಸಾಂಸ್ಕೃತಿಕ ಪರಂಪರೆ ಪರಿಚಯಿಸುವ ಮೂಲಕ ದೇಶದ ಬಗ್ಗೆ ಹೆಮ್ಮೆ ಮೂಡಿಸುವ, ಕುಟುಂಬದಲ್ಲಿ ಸಾಮರಸ್ಯವನ್ನು ಬೆಳೆಸುವ, ಆರೋಗ್ಯವಂತ ವ್ಯಕ್ತಿಗೆ ದೃಢ ಶರೀರ, ಸ್ವಸ್ಥ ಮನಸ್ಸು ಹಾಗೂ ವಿವಿಧ ಕಾಯಿಲೆಗಳು ಮತ್ತು ಅದಕ್ಕೆ ಪರಿಹಾರ ಮುಂತಾದ ವಿಷಯಗಳನ್ನಿಟ್ಟುಕೊಂಡು ಬೇರೆ ಬೇರೆ ಕ್ಷೇತ್ರದಲ್ಲಿ ಅಪಾರ ಸಾಧನೆಯನ್ನು ಮಾಡಿದ ಗಣ್ಯರಿಂದ ಉಪನ್ಯಾಸ ಕಾರ್ಯಗಳನ್ನು ಆಯೋಜಿಸಲಾಗುತ್ತಿದೆ.

ಕಳೆದ 9 ವರ್ಷಗಳಿಂದ ನಿರಂತರವಾಗಿ ಮಾಸಿಕ ಉಪನ್ಯಾಸ ಕಾರ್ಯಕ್ರಮ ನಡೆಯುತ್ತಿದ್ದು, ಪ್ರಸ್ತುತ ಜಯನಗರ, ಸದಾಶಿವನಗರ, ಕೇಶವಶಿಲ್ಪ, ಕುಂದಲಹಳ್ಳಿ, ಕಾಮಾಕ್ಷಿಪಾಳ್ಯ ಹಾಗೂ ಕಲ್ಯಾಣನಗರದ ಯೋಗಕೇಂದ್ರಗಳಲ್ಲಿ ನಿರಂತರವಾಗಿ ನಡೆಸಲಾಗುತ್ತಿದೆ. ಪ್ರತೀ ಉಪನ್ಯಾಸದಲ್ಲಿ 80ಕ್ಕೂ ಅಧಿಕ ಯೋಗಾಭ್ಯಾಸಿಗಳು ಭಾಗವಹಿಸಿದರು.





- ರಥಸಪ್ತಮಿಯ ಪ್ರಯುಕ್ತ ಸಾಮೂಹಿಕ ಸೂರ್ಯನಮಸ್ಕಾರ, ಸಾಮರಸ್ಯ ಹಾಗೂ ಏಕತೆಯ ಸಂಕೇತ ಸಾರುವ ರಕ್ಷಾಬಂಧನ, ಗುರುಪೂರ್ಣಿಮೆಯ ನಿಮಿತ್ತ ಪತಂಜಲಿ ನಮನ, ಆಯುಧಪೂಜೆ ಮುಂತಾದ ಕಾರ್ಯಕ್ರಮ/ಉತ್ಸವಗಳನ್ನು ಆಚರಿಸಲಾಗುತ್ತಿದೆ.

- **ರಕ್ತದಾನ ಶಿಬಿರ :** ಯೋಗಬಂಧುಗಳಲ್ಲಿ ಸಾಮಾಜಿಕ ಕಳಕಳಿ ಮೂಡಿಸುವ ಉದ್ದೇಶದಿಂದ ಕಳೆದ ಹಲವಾರು ವರ್ಷಗಳಿಂದ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಈ ವರ್ಷ ಕೇಶವಶಿಲ್ಪ, ಜಯನಗರ, ಕಲ್ಯಾಣನಗರ, ಕುಂದಲಹಳ್ಳಿ, ಸದಾಶಿವನಗರ ಯೋಗಕೇಂದ್ರಗಳಲ್ಲಿ ಎರಡು ಬಾರಿ (2017ರ ಜೂನ್ ಮತ್ತು 2018 ಫೆಬ್ರುವರಿ) ರಕ್ತದಾನ ಶಿಬಿರ ನಡೆಯಿತು. ಒಟ್ಟು 500ಕ್ಕೂ ಅಧಿಕ ಯೋಗಬಂಧುಗಳು ರಕ್ತದಾನ ಮಾಡಿದರು.

## ಶಿಕ್ಷಕರ ಸಾಮರ್ಥ್ಯವರ್ಧನೆಗಾಗಿ

- **ಸೇವಾಬಸ್ತಿ ವೀಕ್ಷಣೆ :** ಯೋಗಶಿಕ್ಷಕರಿಗೆ ಸಾಮಾಜಿಕ ಸ್ಥಿತಿಗತಿಗಳ ಅರಿವು ಮೂಡಿಸುವ ಸಲುವಾಗಿ 2017ರ ಮೇ 7 ಹಾಗೂ ಜುಲೈ 8ರಂದು ಸೇವಾದರ್ಶನ (ಸೇವಾಬಸ್ತಿ ವೀಕ್ಷಣೆ) ಕಾರ್ಯಕ್ರಮವನ್ನು ಆಯೋಜಿಸಲಾಯಿತು.

  ರಾಷ್ಟ್ರೋತ್ಥಾನ ಪರಿಷತ್ತಿನ ಜಾಗರಣ ಪ್ರಕಲ್ಪವು ಸೇವಾಬಸ್ತಿಯ ಜನರ ಜೀವನಮಟ್ಟವನ್ನು ಸುಧಾರಿಸುವ ಹಾಗೂ ಅವರಲ್ಲಿ ಸಾಮಾಜಿಕ ಜಾಗೃತಿ ಮೂಡಿಸುವ ಸಲುವಾಗಿ ಬೆಂಗಳೂರಿನ 200ಕ್ಕೂ ಅಧಿಕ ಸೇವಾಬಸ್ತಿ (ಸ್ಲಂ)ಗಳಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದೆ. ಇಂತಹ ಕೆಲವು ಸೇವಾಬಸ್ತಿಗೆ ಭೇಟಿ ನೀಡಿದ ಯೋಗಶಿಕ್ಷಕರು ಅಲ್ಲಿಯ ಸ್ಥಿತಿಗತಿ ಹಾಗೂ ಅವರ ಜೀವನವನ್ನು ಕಣ್ಣಾರೆ ಕಂಡರು. ಸ್ಥಳೀಯರೊಂದಿಗೆ ಚರ್ಚೆ ನಡೆಸಿದರು.

> ನಾನು ಸಿನಿಮಾಗಳಲ್ಲಿ ಕೊಳಗೇರಿ ಪ್ರದೇಶಗಳನ್ನು ನೋಡಿದ್ದೆ. ಸೇವಾದರ್ಶನದಿಂದ ಪ್ರತ್ಯಕ್ಷವಾಗಿ ನೋಡಲು ಸಾಧ್ಯವಾಯಿತು. ರೈಲುಹಳಿಗಳನ್ನು ದಾಟಿ ನೇತಾಜಿನಗರದ ತಗ್ಗು ಪ್ರದೇಶದಲ್ಲಿರುವ ಕೊಳೆಗೇರಿಯನ್ನು ತಲಪಿದಾಗ ಜೋರಾಗಿ ಮಳೆ ಬಂದು, ನೀರು ನಿಂತರೆ ಇವರು ಹೇಗಿರುತ್ತಾರೆ? ಎಂದೆನಿಸಿತು. ಇಕ್ಕಟ್ಟಾದ ಓಣಿಯಂತಹ ಆ ಪ್ರದೇಶದಲ್ಲಿ ಮನೆಗಳಿಗೆ ಕರ್ಟನ್‌ಗಳೇ ಗೋಡೆಗಳು. ಕರ್ಟನ್‌ಗಳಿಂದಲೇ ಪ್ರತ್ಯೇಕ ರೂಮ್. ಈ ಪ್ರದೇಶದಲ್ಲಿ ರಾಷ್ಟ್ರೋತ್ಥಾನ ಮಾಡುತ್ತಿರುವ ನಿಸ್ವಾರ್ಥ ಕಾರ್ಯಗಳನ್ನು ನೋಡಿದಂತೆ ಸಾಮಾಜದ ನೋವಿಗೆ ಸ್ಪಂದಿಸುವುದು, ನೆರವಾಗುವುದು ಸಮಾಜದ ಪ್ರತಿಯೊಬ್ಬರ ಜವಾಬ್ದಾರಿ ಎಂಬ ಅರಿವಾಯಿತು. ನನ್ನ ಪಾತ್ರ, ಪಾಲು ಏನು ಎಂದು ನನ್ನನ್ನು ಯೋಚಿಸುವಂತೆ ಮಾಡಿತು.
>
> – **ಶುಭಾ ಗುರುಪ್ರಸಾದ್**, ಯೋಗಶಿಕ್ಷಕಿ



- ಯೋಗವಿಭಾಗದಲ್ಲಿ ಸೇವೆಸಲ್ಲಿಸುವ ಶಿಕ್ಷಕ–ಶಿಕ್ಷಕಿಯರಲ್ಲಿ ಕೌಟುಂಬಿಕ ಭಾವನೆ ಮೂಡಿಸುವ ಸಲುವಾಗಿ ಈ ವರ್ಷ ಐತಿಹಾಸಿಕ ಸ್ಥಳಗಳಾದ ಸೋಮನಾಥಪುರ, ತಲಕಾಡು, ಘಾಟಿಗೋಶಾಲೆ, ಘಾಟಿ ಸುಬ್ರಮಣ್ಯ ದೇವಸ್ಥಾನ, ರಾಮನಗರ ಜಿಲ್ಲೆಯ ರೇವಣ ಸಿದ್ದೇಶ್ವರ ಬೆಟ್ಟ ಮುಂತಾದ ಪ್ರವಾಸಿತಾಣಗಳಿಗೆ ಒಂದು ದಿನದ ಸಹಲ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಒಟ್ಟು 300ಕ್ಕೂ ಅಧಿಕ ಯೋಗಬಂಧುಗಳು ಭಾಗವಹಿಸಿದರು.

- ಯೋಗ ಶಿಕ್ಷಕರ ಗುಣಮಟ್ಟ ಹೆಚ್ಚಿಸುವ ಮತ್ತು ಅವರಿಗೆ ಎದುರಾಗುವ ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳುವ ಹಾಗೂ ಅನ್ಯೋನ್ಯತೆ ಮೂಡಿಸುವ ಸಲುವಾಗಿ 2018ರ ಫೆಬ್ರುವರಿಯಲ್ಲಿ (24 & 25) ಕೇಶವಶಿಲ್ಪದಲ್ಲಿ ವಸತಿ ಸಹಿತ ಯೋಗ ಶಿಕ್ಷಕ–ಶಿಕ್ಷಕಿಯರ ಪ್ರಶಿಕ್ಷಣ ವರ್ಗವನ್ನು ಆಯೋಜಿಸಲಾಯಿತು. ಪ್ರಶಿಕ್ಷಣ ವರ್ಗದಲ್ಲಿ ಜೂನಿಯರ್, ಸೀನಿಯರ್ ಮತ್ತು ಥೆರಪಿ ಹೀಗೆ ಮೂರು ಗುಂಪುಗಳಲ್ಲಿ ಯೋಗಾಭ್ಯಾಸ ತರಬೇತಿ ನೀಡಲಾಯಿತು

- **ಚಿಂತನ–ಮಂಥನ:** ರಾಷ್ಟ್ರೋತ್ಥಾನ ಯೋಗ ವಿಭಾಗದ ಪೂರ್ಣಾವಧಿ ಶಿಕ್ಷಕರ ಚಿಂತನ ಶಕ್ತಿ ಹೆಚ್ಚಿಸುವ ಸಲುವಾಗಿ ಮತ್ತು ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ತಿಂಗಳಿಗೊಮ್ಮೆ ವಿಷಯ ತಜ್ಞರೊಂದಿಗೆ ಸಂವಾದಗಳನ್ನು ಆಯೋಜಿಸಲಾಗುತ್ತಿದೆ.

## ವಿದ್ಯಾರ್ಥಿಗಳಿಗಾಗಿ

- **ಮಕ್ಕಳ ಯೋಗ ತರಗತಿ:** ಮಕ್ಕಳ ದೈಹಿಕ ಹಾಗೂ ಮಾನಸಿಕ ವಿಕಾಸಕ್ಕಾಗಿ ಪ್ರತಿ ಭಾನುವಾರ ಜಯನಗರ, ಸದಾಶಿವನಗರ, ಕಲ್ಯಾಣನಗರ, ಕೇಶವಶಿಲ್ಪ ಯೋಗಕೇಂದ್ರಗಳಲ್ಲಿ 'ಮಕ್ಕಳ ವಾರಾಂತ್ಯದ ತರಗತಿ'ಗಳನ್ನು ನಡೆಸಲಾಗುತ್ತಿದೆ. 100ಕ್ಕೂ ಹೆಚ್ಚು ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

- **ಮಕ್ಕಳ ಸಹಲ್:** ಎಲ್ಲಾ ಯೋಗ ಕೇಂದ್ರದ ಮಕ್ಕಳಿಗಾಗಿ ಘಾಟಿ ಗೋಶಾಲೆ ಹಾಗೂ ಘಾಟಿ ಸುಬ್ರಮಣ್ಯ ದೇವಸ್ಥಾನಕ್ಕೆ ಒಂದು ದಿನದ ಸಹಲ್ (ಪ್ರವಾಸ) ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸುಮಾರು 80 ಮಕ್ಕಳು ಭಾಗವಹಿಸಿದ್ದರು.



- **ಮಕ್ಕಳ ಬೇಸಿಗೆ ಶಿಬಿರ:** ರಾಷ್ಟ್ರೋತ್ಥಾನ ಯೋಗ ವಿಭಾಗದ ವತಿಯಿಂದ ಕೇಶವಶಿಲ್ಪ, ಜಯನಗರ ಹಾಗೂ ಸದಾಶಿವನಗರ ಯೋಗಕೇಂದ್ರದಲ್ಲಿ ಏಕಕಾಲದಲ್ಲಿ 10 ದಿನಗಳ ಬೇಸಿಗೆ ಶಿಬಿರ ನಡೆಯಿತು.

  ಬೆಳಗ್ಗೆ 8 ರಿಂದ 12 ಗಂಟೆಯವರೆಗೆ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ಚಟುವಟಿಕೆಗಳನ್ನು ನಡೆಸುವ ಮೂಲಕ ಅದರಲ್ಲಿ ಬೌದ್ಧಿಕ, ಶಾರೀರಿಕ, ಮಾನಸಿಕ, ಸಾಮಾಜಿಕ, ನೈತಿಕ, ಆಧ್ಯಾತ್ಮಿಕ ಶಕ್ತಿಯ ಚಟುವಟಿಕೆಗಳನ್ನು ಆಯೋಜಿಸಲಾಯಿತು. ಮಕ್ಕಳಿಗೆ ಯೋಗ, ಪ್ರಾಣಾಯಾಮ ದೇಶಭಕ್ತರ ಜೀವನ ಚರಿತ್ರೆ, ರಾಮಾಯಣ, ಮಹಾಭಾರತ ಮುಂತಾದ ವಿವಿಧ ನೀತಿಕಥೆಗಳು ಹಾಗೂ ಭಜನೆ, ದೇಶಭಕ್ತಿ ಗೀತೆಗಳು ಮತ್ತು ಆಟಗಳ ಮೂಲಕ ಮಕ್ಕಳ ಸಮಗ್ರ ವಿಕಾಸಕ್ಕೆ ಪೂರಕವಾದಂತಹ ಚಟುವಟಿಕೆಗಳನ್ನು ಆಯೋಜಿಸಲಾಯಿತು. ಶಿಬಿರದಲ್ಲಿ ಕೇಶವಶಿಲ್ಪದಲ್ಲಿ 30 ಮಕ್ಕಳು, ಜಯನಗರದಲ್ಲಿ 50 ಮಕ್ಕಳು ಹಾಗೂ ಸದಾಶಿವನಗರದಲ್ಲಿ 24 ಮಕ್ಕಳು ಭಾಗವಹಿಸಿದ್ದರು.

## ಇತರ ಚಟುವಟಿಕೆಗಳು

### ನೃತ್ಯ–ಸಂಗೀತ ಕೇಂದ್ರ

ಸಂಗೀತಾಸಕ್ತರಿಗೆ ಸಂಗೀತದ ಕುರಿತು ತರಬೇತಿ ನೀಡುವ ಉದ್ದೇಶದಿಂದ ಜಯನಗರ (2013ರಲ್ಲಿ) ಮತ್ತು ಸದಾಶಿವನಗರದಲ್ಲಿ (2016) ರಾಷ್ಟ್ರೋತ್ಥಾನ ನೃತ್ಯ–ಸಂಗೀತ ಕೇಂದ್ರವನ್ನು ಪ್ರಾರಂಭಿಸಲಾಯಿತು. ತಬಲಾ, ಮೃದಂಗ, ಸುಗಮ ಸಂಗೀತ, ಕರ್ನಾಟಕ ಸಂಗೀತ, ಭರತನಾಟ್ಯ, ಕಥಕ್, ವೀಣೆ ಹಾಗೂ ಕೀಬೋರ್ಡ್ ತರಗತಿಗಳು ನಡೆಯುತ್ತಿವೆ. ಪ್ರಸ್ತುತ 150ಕ್ಕೂ ಅಧಿಕ ಮಂದಿ ಸಂಗೀತ ನೃತ್ಯ ಕೇಂದ್ರದ ಪ್ರಯೋಜನ ಪಡೆಯುತ್ತಿದ್ದಾರೆ.

2018ರಿಂದ ಸುಂಕೇನಹಳ್ಳಿ ಯೋಗಕೇಂದ್ರದಲ್ಲಿ ರಾಷ್ಟ್ರೋತ್ಥಾನ ನೃತ್ಯ–ಕಲಾ ಕೇಂದ್ರವನ್ನು ಆರಂಭಿಸಲಾಗಿದೆ.



## ಉಲ್ಲೇಖನೀಯ

- ಜಯನಗರದ ನೃತ್ಯಕಲಾ ಕೇಂದ್ರದಲ್ಲಿ ಕರ್ನಾಟಕ ಸಂಗೀತವನ್ನು ಅಭ್ಯಾಸ ಮಾಡುತ್ತಿರುವ ಕಲಾಭ್ಯಾಸಿ ಪದ್ಮಾ ಎನ್. ಪಲಾರ್ತಿ ಅವರು ಈ ವರ್ಷ ನಡೆದ ಕರ್ನಾಟಕ ಸಂಗೀತದ ಜ್ಯೂನಿಯರ್ ಪರಿಕ್ಷೆಯಲ್ಲಿ ಶೇ. 85 ಅಂಕವನ್ನು ಗಳಿಸಿದ್ದಾರೆ.
- 2018ರ ಮೇ ತಿಂಗಳಲ್ಲಿ ನಡೆಯುವ ಭರತನಾಟ್ಯ ಜ್ಯೂನಿಯರ್ ಪರಿಕ್ಷೆಯಲ್ಲಿ ಜಯನಗರ ಯೋಗಕೇಂದ್ರದ 16 ಭರತನಾಟ್ಯ ಕಲಾಭ್ಯಾಸಿಗಳು ಭಾಗವಹಿಸುತ್ತಿದ್ದಾರೆ.
- ಜಯನಗರ ಕೇಂದ್ರದ ನಾಲ್ವರು ತಬಲಾಭ್ಯಾಸಿಗಳು 2017–18ರ ಜ್ಯೂನಿಯರ್ ಪರೀಕ್ಷೆ ಬರೆದಿದ್ದಾರೆ.
- ಜಯನಗರ ಕೇಂದ್ರದ ಹತ್ತು ಮಂದಿ ತಬಲಾಭ್ಯಾಸಿಗಳು ಮೀರಜ್‌ನ ಅಖಿಲ ಭಾರತೀಯ ಗಂಧರ್ವ ಮಹಾ ವಿದ್ಯಾಲಯದ ವತಿಯಿಂದ ನಡೆಯುವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಪುರಂದರ ದಾಸರ ಆರಾಧನೆ : ಜಯನಗರ ನೃತ್ಯ ಸಂಗೀತ ಕೇಂದ್ರದ ವತಿಯಿಂದ ಜನವರಿ 19ರಂದು ಪುರಂದರ ದಾಸರ ಆರಾಧನಾ ಮಹೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸುಗಮ ಸಂಗೀತ, ತಬಲಾ ಹಾಗೂ ಇನ್ನಿತರ ಚಟುವಟಿಕೆಗಳು ನಡೆಯಿತು.

## ಫಿಟ್ನೆಸ್ ಸೆಂಟರ್




ಇಂದಿನ ಯಾಂತ್ರಿಕ ಮತ್ತು ವೇಗದ ಬದುಕಿನಿಂದ ಬದಲಾದ ಜೀವನಶೈಲಿಯಲ್ಲಿಯೂ ಸದೃಢ ದೇಹವನ್ನು ಹೊಂದುವ ಹಾಗೂ ಆರೋಗ್ಯವನ್ನು ಸುರಕ್ಷಿತವಾಗಿಡುವ ಕಳಕಳಿಯವರಿಗಾಗಿ ಆಧುನಿಕ ಜೀವನ ಶೈಲಿಗೆ ಸರಿಹೊಂದುವಂತಹ ಫಿಟ್ನೆಸ್ ಸೆಂಟರ್‌ಗಳು ಜಯನಗರ, ಸುಂಕೇನಹಳ್ಳಿ, ಸದಾಶಿವನಗರ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿವೆ. ಎಲ್ಲ ವಯೋಮಿತಿಯವರು ಬೇರೆ ಬೇರೆ ಅವಧಿಗಳಲ್ಲಿ ಇದರ ಲಾಭ ಪಡೆಯುತ್ತಿದ್ದಾರೆ.



- ಪ್ರಸಕ್ತ ವರ್ಷ ಮೂರು ಫಿಟ್ನೆಸ್ ಸೆಂಟರಿನಲ್ಲಿ ಒಟ್ಟು 1000ಕ್ಕೂ ಅಧಿಕ ಮಂದಿ ಇದರ ಲಾಭವನ್ನು ಪಡೆದಿದ್ದಾರೆ.
- **ವಿವಿಧ ಸ್ಪರ್ಧೆಗಳು:** ರಾಷ್ಟ್ರೋತ್ಥಾನ ಫಿಟ್‌ನೆಸ್ ಸೆಂಟರ್‌ಗೆ ಆಗಮಿಸುವ ಶಿಕ್ಷಾರ್ಥಿಗಳಿಗಾಗಿ ದೇಹ ಸಾಮರ್ಥ್ಯ, ಹೃದಯದ ಸಾಮರ್ಥ್ಯ, ಸ್ನಾಯುಗಳ ಸಾಮರ್ಥ್ಯ ಮತ್ತು ನಮ್ಯತೆ ಅಂದರೆ ಮುರಿಯದೆ ಬಗ್ಗುವಿಕೆ (Flexibility) ಮುಂತಾದವುಗಳನ್ನು ಪರೀಕ್ಷಿಸುವ ಸಲುವಾಗಿ ಫಿಟ್ ಮೆನ್ ಮತ್ತು ಫಿಟ್‌ವಿಮೆನ್ ಸ್ಪರ್ಧೆಯನ್ನು ಜಯನಗರ ಹಾಗೂ ಸದಾಶಿವನಗರ ಕೇಂದ್ರದಲ್ಲಿ ಆಯೋಜಿಸಲಾಯಿತು. ಪುರುಷರ ಹಾಗೂ ಮಹಿಳೆಯರ ವಿಭಾಗದಲ್ಲಿ ಪ್ರತ್ಯೇಕವಾಗಿ ನಡೆದ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನವನ್ನು ನೀಡಲಾಯಿತು.
- **ಚಾರಣ:** ಫಿಟ್‌ನೆಸ್ ಸೆಂಟರ್‌ನ ಬಂಧುಗಳಿಗಾಗಿ ಶಿವಗಂಗೆ ಮತ್ತು ಸಾವನದುರ್ಗಕ್ಕೆ ಚಾರಣವನ್ನು (Trekking) ಆಯೋಜಿಸಲಾಯಿತು. ಚಾರಣಕ್ಕೆ ಪೂರ್ವಭಾವಿಯಾಗಿ 30 ದಿನಗಳ ಕಾಲ ಸತತ ತರಬೇತಿಯನ್ನು ನೀಡಿದರು. 50ಕ್ಕೂ ಹೆಚ್ಚು ಫಿಟ್ನೆಸ್ ಶಿಕ್ಷಾರ್ಥಿಗಳು ಭಾಗವಹಿಸಿದ್ದರು.

## ಕರಾಟೆ ತರಗತಿಗಳು

ಆತ್ಮರಕ್ಷಣೆ ಕಲೆಯಾದ ಕರಾಟೆ ತರಗತಿಗಳು ಜಯನಗರ ಕೇಂದ್ರದಲ್ಲಿ ನಡೆಯುತ್ತಿವೆ. ಸ್ಕೂಲ್ ಆಫ್ ಇಂಡಿಯನ್ ಕರಾಟೆಯ ಮಾಸ್ಟರ್ ಸುರೇಶ್ ಎಸ್. ರಾವ್ ಅವರ ಮಾರ್ಗದರ್ಶನದಲ್ಲಿ ಜಯನಗರ ಯೋಗಕೇಂದ್ರದಲ್ಲಿ ಕಳೆದ ಹಲವಾರು ವರ್ಷಗಳಿಂದ ಕರಾಟೆ ತರಗತಿಗಳು ನಡೆಯುತ್ತಿವೆ. ಸಾವಿರಾರು ವಿದ್ಯಾರ್ಥಿಗಳು ಇದರ ಲಾಭ ಪಡೆದಿದ್ದಾರೆ.

- ಹಿರಿಯ (ಕಪ್ಪು ಬೆಲ್ಟ್) ಕರಾಟೆ ಬೋಧಕರಾದ ರೇಣುಪ್ರಸಾದ್ ಮತ್ತು ತಾರಾಕುಮಾರಿ ಅವರ ಮಾರ್ಗದರ್ಶನದಲ್ಲಿ ಕರಾಟೆ ಅಭ್ಯಾಸಿಗಳು ಪಾರಂಭದಿಂದ ವಿವಿಧ ಸ್ತರಗಳಲ್ಲಿ ಉತ್ತೀರ್ಣರಾಗಿ ವಿವಿಧ ಬೆಲ್ಟ್‌ಗಳನ್ನು

ಪಡೆದಿದ್ದಾರೆ. ಪ್ರತಿ ಆರು ತಿಂಗಳಿಗೊಮ್ಮೆ ಕರಾಟೆ ಪರೀಕ್ಷೆಗಳು ನಡೆಯುತ್ತಿದ್ದು ಮುಂದಿನ ಬೆಲ್ಟುಗಳಿಗೆ ಬಡ್ತಿ ನೀಡಲಾಗುತ್ತಿದೆ.

- ಈ ವರ್ಷ(2017) ಸುಂಕೇನಹಳ್ಳಿ ಯೋಗಕೇಂದ್ರದಲ್ಲಿ ಹೊಸ ಕರಾಟೆ ತರಗತಿಗಳನ್ನು ಆರಂಭಿಸಲಾಗಿದೆ. ಸುಮಾರು 30 ಮಂದಿ ಇದರ ಲಾಭವನ್ನು ಪಡೆಯುತ್ತಿದ್ದಾರೆ.
- ಪ್ರಸ್ತುತ ಜಯನಗರ ಕೇಂದ್ರದ ಹಲವು ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರೀಯ ಮಟ್ಟಗಳ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

### ಅಂಗಮರ್ದನ ಚಿಕಿತ್ಸೆ ಮತ್ತು ಉಗಿಸ್ನಾನ ಚಿಕಿತ್ಸಾ ಕೇಂದ್ರ

ಜಯನಗರದಲ್ಲಿರುವ ಅಜಿತಸ್ಮೃತಿಯಲ್ಲಿ ಕಳೆದ 15 ವರ್ಷಗಳಿಂದ ರಾಷ್ಟ್ರೋತ್ಥಾನ ಅಂಗಮರ್ದನ ಮತ್ತು ಉಗಿಸ್ನಾನ ಚಿಕಿತ್ಸಾ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.

- ಕಳೆದ ಒಂದು ವರ್ಷದ ಅವಧಿಯಲ್ಲಿ 1000 ಮಂದಿ ಅಂಗಮರ್ದನ ಮತ್ತು ಉಗಿಸ್ನಾನದ ಲಾಭವನ್ನು ಪಡೆದುಕೊಂಡಿದ್ದಾರೆ.
- ಪಾರ್ಶ್ವವಾಯು, ಪಾರ್ಕಿನ್ಸನ್, ಬೆನ್ನುನೋವು, ಗಂಟುನೋವು, ರಕ್ತದೊತ್ತಡ ಮುಂತಾದ ತೊಂದರೆಗಳಿಂದ ನರಳುತ್ತಿರುವವರೂ ಇದರ ಲಾಭಪಡೆದು, ತಮ್ಮ ದೈಹಿಕ ಬದಲಾವಣೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಉಲ್ಲೇಖನೀಯ ಕಾರ್ಯಕ್ರಮಗಳು

### ಪರಿಷತ್‌ನ ವಿವಿಧ ಚಟುವಟಿಕೆಗಳಿಗೆ ಯೋಗಬಂಧುಗಳ ಜೋಡಣೆ

ಯೋಗವಿಭಾಗದ ಸಂಪರ್ಕಕ್ಕೆ ಬರುವ ಯೋಗಬಂಧುಗಳಿಗೆ ರಾಷ್ಟ್ರೋತ್ಥಾನ ಪರಿಷತ್ ನಡೆಸುವ ಹಲವು ಸೇವಾ ಚಟುವಟಿಕೆಗಳ ಪರಿಚಯವನ್ನು ಮಾಡಿ ಅವರು ಸೇವಾ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುವುದು ಹಿಂದಿನಿಂದಲೂ ನಡೆದು ಬಂದಿದೆ. ಹಲವಾರು ಯೋಗಬಂಧುಗಳು ತಲೆಸ್ಸೆಮಿಯಾ (ಮಕ್ಕಳಲ್ಲಿ ಗುಣಮಟ್ಟದ ರಕ್ತ ಉತ್ಪತ್ತಿಯಾಗದಿರುವ ನ್ಯೂನತೆ), ರಕ್ತನಿಧಿ, ನಂದಗೋಕುಲ, ಗೋಶಾಲೆ, ಜಾಗರಣ ಪ್ರಕಲ್ಪಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

### ಹೊಸ ಸಹಾಯಕ ಶಿಕ್ಷಕರ ಸೇರ್ಪಡೆ

ಅಗತ್ಯಕ್ಕೆ ತಕ್ಕಂತೆ ಹೊಸ ಯೋಗಶಿಕ್ಷಕರನ್ನು ಸೇರ್ಪಡೆಗೊಳಿಸುವ ಸಲುವಾಗಿ ಸಂಸ್ಥೆಯ ಯೋಗಕೇಂದ್ರದಲ್ಲಿ ಹಲವು ವರ್ಷಗಳಿಂದ ನಿರಂತರವಾಗಿ ಯೋಗಾಭ್ಯಾಸ ಮಾಡುತ್ತ ಬಂದಿರುವ ಆಯ್ದ ಯೋಗಬಂಧುಗಳಿಗೆ ವಿಶೇಷ ಯೋಗತರಬೇತಿ ನೀಡಿ ಯೋಗಶಿಕ್ಷಕರನ್ನಾಗಿ ನೇಮಿಸಿಕೊಳ್ಳುವುದು ಹಲವು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ.

# ಜಾಗರಣ

ಒಂದೆಡೆ ಜಗದ್ವಿಖ್ಯಾತಿ ಗಳಿಸುತ್ತಿರುವ ಬೆಂಗಳೂರು ಇನ್ನೊಂದೆಡೆ ಮೂಲಭೂತ ಸೌಕರ್ಯಗಳ ಕೊರತೆಗಳಿಂದ ವಂಚಿತರಾಗಿರುವ 800ಕ್ಕೂ ಹೆಚ್ಚು ಸೇವಾಬಸ್ತಿ (ಸ್ಲಂ, ಕೊಳೆಗೇರಿ)ಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿವೆ. ಇಂತಹ ಸೇವಾಬಸ್ತಿಗಳಲ್ಲಿ ಆರ್ಥಿಕ ಕಾರಣಗಳಿಂದಾಗಿ ಶಾಲೆಯಿಂದ ಹೊರಗುಳಿದ ಮಕ್ಕಳಿಗಾಗಿ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ತೆರೆಯುವ ಉದ್ದೇಶದಿಂದ ಜಾಗರಣ ಪ್ರಕಲ್ಪವು 1989ರಲ್ಲಿ ಪ್ರಾರಂಭವಾಯಿತು. 1989ರಿಂದ 2007ರವರೆಗೆ ಅನೌಪಚಾರಿಕ ಶಿಕ್ಷಣ ಕೇಂದ್ರಗಳನ್ನು ನಡೆಸಿ ಆ ಕೇಂದ್ರಗಳಲ್ಲಿನ ಮಕ್ಕಳನ್ನು ಮುಖ್ಯವಾಹಿನಿಯಾದ ಶಾಲೆಗೆ ಸೇರಿಸುವ ಪ್ರಯತ್ನದಲ್ಲಿ ಯಶಕಂಡ ನಂತರ, ಇಂದು ಸೇವಾಬಸ್ತಿಯ ಸಂಪೂರ್ಣ ವಿಕಾಸಕ್ಕಾಗಿ ವಿವಿಧ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ.



ಶಿಕ್ಷಣ, ಆರೋಗ್ಯ, ಸ್ವಾವಲಂಬನೆ ಮತ್ತು ಸಂಸ್ಕಾರ – ಈ ನಾಲ್ಕು ಆಯಾಮಗಳಲ್ಲಿ 'ಜಾಗರಣ' ಪ್ರಕಲ್ಪವು ಕಳೆದ ಎರಡೂವರೆ ದಶಕಗಳಿಂದ ಬೆಂಗಳೂರಿನ ಸೇವಾಬಸ್ತಿಗಳಲ್ಲಿ ವಿವಿಧ ಸೇವಾಚಟುವಟಿಕೆಗಳನ್ನು ನಡೆಸುತ್ತಿದೆ. ಈ ಚಟುವಟಿಕೆಗಳ ಮೂಲಕ ಸೇವಾಬಸ್ತಿಯ ಸಾವಿರಾರು ಮಕ್ಕಳು, ನೂರಾರು ಮಹಿಳೆಯರು ಹಾಗೂ ಯುವಕ–ಯುವತಿಯರು ಸ್ವಾವಲಂಬೀ ಜೀವನ ರೂಪಿಸಿಕೊಂಡಿದ್ದಾರೆ. ಸೇವಾಬಸ್ತಿಯು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಸೇರಿದಂತೆ ಎಲ್ಲ ಮುಖಗಳಲ್ಲಿಯೂ ಪ್ರಗತಿ ಸಾಧಿಸುತ್ತಿರುವುದನ್ನು ಕಾಣಬಹುದಾಗಿದೆ.

ಒಟ್ಟು 210 ಸೇವಾಬಸ್ತಿಗಳಲ್ಲಿ 673 ಚಟುವಟಿಕೆಗಳು ನಡೆಯುತ್ತಿವೆ.

| | |
|---|---|
| 1. ವ್ಯಾಸಂಗ ಕೇಂದ್ರಗಳು | 225 |
| 2. ಶಿಶುಮಂದಿರ | 3 |
| 3. ಬಾಲಗೋಕುಲ | 200 |
| 4. ಅನೌಪಚಾರಿಕ ಶಿಕ್ಷಣ ಕೇಂದ್ರ | 1 |
| 5. ಹೈಸ್ಕೂಲ್ ವ್ಯಾಸಂಗ ಕೇಂದ್ರ | 15 |
| 6. ಜೋಳಿಗೆ ಪುಸ್ತಕಾಲಯ | 200 |
| 7. ಗ್ರಂಥಾಲಯ | 1 |
| 8. ಸರ್ಕಾರಿ ಶಾಲೆಗಳಲ್ಲಿ ಸಂಸ್ಕಾರ ಕೇಂದ್ರ | 8 |
| 9. ದೇವಸ್ಥಾನ ಕೇಂದ್ರಿತ ಚಟುವಟಿಕೆ | 1 |
| 10. ಕಂಪ್ಯೂಟರ್ ತರಬೇತಿ | 7 |
| 11. ಹೊಲಿಗೆ ತರಬೇತಿ | 2 |
| 12. ಉಚಿತ ಚಿಕಿತ್ಸಾಲಯ | 2 |
| 13. ಸ್ವಸಹಾಯ ಸಂಘಗಳು | 8 |

# ಶಿಕ್ಷಣ

## ಅ) ವ್ಯಾಸಂಗ ಕೇಂದ್ರಗಳು

ಸೇವಾಬಸ್ತಿಯಲ್ಲಿ (ಸ್ಲಂ, ಕೊಳಚೆಗೇರಿ) ವಾಸಿಸುತ್ತಿರುವ ಮಕ್ಕಳನ್ನು ಶಿಕ್ಷಣ ಕ್ಷೇತ್ರದಲ್ಲಿ ಇತರ ಮಕ್ಕಳಿಗೆ ಸರಿಸಮಾನವಾಗಿ ನಿಲ್ಲಿಸುವ ಹಾಗೂ ಸೇವಾಬಸ್ತಿಯಲ್ಲಿನ ಯುವತಿಯರ ಜೀವನಮಟ್ಟವನ್ನು ಸುಧಾರಿಸುವ ಪ್ರಯತ್ನ ಈ 'ವ್ಯಾಸಂಗ ಕೇಂದ್ರ'ಗಳ ಮೂಲಕ ನಡೆಯುತ್ತಿದೆ.

ಸೇವಾಬಸ್ತಿಯಲ್ಲಿರುವ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುವಂತಾಗಲು ಹಾಗೂ ಶಿಕ್ಷಣದ ಜೊತೆಜೊತೆಗೆ ಸಂಸ್ಕಾರ, ಸಾಮಾಜಿಕ ಜ್ಞಾನ–ಹೊಣೆಗಾರಿಕೆಯ ಅರಿವನ್ನೂ ವಿದ್ಯಾರ್ಥಿಗಳಲ್ಲಿ ಮೂಡಿಸುವ ದೃಷ್ಟಿಯಿಂದ ವ್ಯಾಸಂಗ ಕೇಂದ್ರಗಳು (Tution Center) ಕಾರ್ಯನಿರ್ವಹಿಸುತ್ತಿವೆ.

ಎಲ್ಲಿ ನಡೆಯುತ್ತವೆ? : ಸೇವಾಬಸ್ತಿಯಲ್ಲಿ ನಡೆಯುವ ಈ ವ್ಯಾಸಂಗ ಕೇಂದ್ರಗಳು ಹೆಚ್ಚಿನ ಕಡೆ ಸ್ಥಾನೀಯ ಶಿಕ್ಷಿತ ಯುವತಿಯರ ಮನೆಗಳಲ್ಲಿ, ಹಲವು ಕಡೆ ಅಂಗನವಾಡಿಗಳಲ್ಲಿ ನಡೆಯುತ್ತಿವೆ. ಕೆಂಪಾಪುರ ಅಗ್ರಹಾರ, ವಿ.ವಿ. ಗಿರಿ ಕಾಲೊನಿ, ಬೈಯ್ಯಪ್ಪನಹಳ್ಳಿ, ನ್ಯೂ ಗುರಪ್ಪನ ಪಾಳ್ಯ ಮತ್ತು ದೊಮ್ಮಲೂರು ಸೇವಾಬಸ್ತಿಗಳಲ್ಲಿ ಸ್ವಂತ ಕಟ್ಟಡವಿದೆ. ಇಲ್ಲಿ ವ್ಯಾಸಂಗ ಕೇಂದ್ರದ ಜೊತೆಗೆ ಚಿಕಿತ್ಸಾಲಯ, ಹೊಲಿಗೆ ಹಾಗೂ ಕಂಪ್ಯೂಟರ್ ತರಬೇತಿ, ಶಿಶುಮಂದಿರ ಇತ್ಯಾದಿ ಸೇವಾ ಚಟುವಟಿಕೆಗಳನ್ನು ಬೆಳಗ್ಗೆಯಿಂದ ಸಂಜೆಯವರೆಗೆ ನಡೆಸಲಾಗುತ್ತಿದೆ. ಸ್ಥಾನೀಯ ಜನರಿಗೆ ಸೇವಾಧಾಮಗಳೆಂದು ಪರಿಚಿತವಾಗಿರುವ ಇವುಗಳಿಂದ ದಿನನಿತ್ಯ 350ಕ್ಕೂ ಹೆಚ್ಚು ಜನರು ಸೇವೆಯನ್ನು ಪಡೆಯುತ್ತಿದ್ದಾರೆ.

ಸೇವಾಬಸ್ತಿಯ ಶಿಕ್ಷಿತ ಯುವತಿಯರೇ ಶಿಕ್ಷಕಿಯರು! : ವ್ಯಾಸಂಗ ಕೇಂದ್ರಗಳಿಗೆ ಅಗತ್ಯ ಶಿಕ್ಷಕಿಯರನ್ನು ಸೇವಾಬಸ್ತಿಯ ವಿದ್ಯಾವಂತರನ್ನೇ ಜೋಡಿಸಿಕೊಳ್ಳಬೇಕು, ತನ್ಮೂಲಕ ಅಲ್ಲಿನ ಮಹಿಳೆಯರ ಬದುಕಿಗೆ ಆಸರೆಯಾಗಬೇಕು ಎಂಬ ಆಶಯದಿಂದ ಸೇವಾಬಸ್ತಿಯಲ್ಲಿರುವ 10 ಮತ್ತು ಮೇಲ್ಪಟ್ಟ ತರಗತಿಗಳಲ್ಲಿ ಓದುತ್ತಿರುವ ಮತ್ತು ಓದುಮುಗಿಸಿರುವ ಹೆಣ್ಣುಮಕ್ಕಳನ್ನು ಶಿಕ್ಷಕಿಯರನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ. ಸೇವಾಬಸ್ತಿಯಲ್ಲಿಯೇ ವಾಸವಾಗಿರುವ ಹೆಣ್ಣುಮಕ್ಕಳನ್ನು ಗುರುತಿಸಿ, ಸೂಕ್ತ ತರಬೇತಿ ನೀಡಿ 'ಶಿಕ್ಷಕಿ'ಯರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಹಾಗೂ ಪ್ರತೀ ತಿಂಗಳು ತರಬೇತಿ ನೀಡಲಾಗುತ್ತದೆ. ಈ ಶಿಕ್ಷಕಿಯರು ತಮ್ಮ ಮನೆಯ ಸುತ್ತಮುತ್ತ ಶಾಲೆಗೆ ಹೋಗುತ್ತಿರುವ 15ಕ್ಕೂ ಅಧಿಕ ಮಕ್ಕಳನ್ನು ಜೋಡಿಸಿಕೊಂಡು, ಆ ಮಕ್ಕಳಿಗೆ ಪ್ರತಿದಿನ 2 1/2 ಗಂಟೆಗಳ ಕಾಲ ಕೋಚಿಂಗ್ (Tution) ನೀಡುತ್ತಾರೆ. ನಿಃಶುಲ್ಕವಾಗಿ ಕೋಚಿಂಗ್ ಪಡೆಯುವ ಇಲ್ಲಿನ ವಿದ್ಯಾರ್ಥಿಗಳು ಶಾಲೆಯಲ್ಲಿ ಹಾಗೂ ಅಧ್ಯಯನದ ಸಮಯದಲ್ಲಿ ಎದುರಾದ ಗೊಂದಲಗಳಿಗೆ ಇಲ್ಲಿನ ಶಿಕ್ಷಕಿಯರಿಂದ ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಪ್ರತೀ ವರ್ಷ ಸೇವಾಬಸ್ತಿಯ 5000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉಚಿತ ವ್ಯಾಸಂಗ ಕೇಂದ್ರಗಳ ಲಾಭ ಪಡೆಯುತ್ತಿದ್ದಾರೆ.

ವ್ಯಕ್ತಿತ್ವ ವಿಕಾಸಕ್ಕೆ ಒತ್ತು : ಕೇಂದ್ರದ ಮಕ್ಕಳಿಗೆ ಅಕ್ಕ/ಅಮ್ಮನಂತೆ ಇರುವ ಈ 'ಶಿಕ್ಷಕಿ' ಪ್ರತಿ ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಯ ಜೊತೆಜೊತೆಗೆ ಅವರಲ್ಲಿ ಒಳ್ಳೆಯ ಮೌಲ್ಯಗಳನ್ನು ಬೆಳೆಸುವ ಪ್ರಯತ್ನ ನಡೆಸುತ್ತಿದ್ದಾರೆ. ಈ ಮೂಲಕ ಸೇವಾಬಸ್ತಿಯಲ್ಲಿರುವ ವಿದ್ಯಾರ್ಥಿಗಳನ್ನು ಹಾಗೂ ಶಿಕ್ಷಕಿಯರಾಗಿರುವ ಯುವತಿಯರನ್ನು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಮೇಲ್ಮಟ್ಟಕ್ಕೇರಿಸುವ ಕಾರ್ಯದಲ್ಲಿ ಜಾಗರಣ ಪ್ರಕಲ್ಪ ಕಾರ್ಯನಿರ್ವಹಿಸುತ್ತಿದೆ.

ಯೋಜನಾಬದ್ಧ ಶಿಕ್ಷಣಕ್ರಮ: ವ್ಯಾಸಂಗ ಕೇಂದ್ರವು ವ್ಯವಸ್ಥಿತ ರೂಪದಲ್ಲಿ ನಡೆಯಲು ಮೇ ತಿಂಗಳಿನಲ್ಲಿ ವಾರ್ಷಿಕ ಯೋಜನೆಯನ್ನು ತಯಾರಿಸಲಾಗುತ್ತದೆ. ಈ ಯೋಜನೆಯಲ್ಲಿ ಪಾಠ್ಯ ಚಟುವಟಿಕೆಗಳು, ಸಂಸ್ಕಾರ ಶಿಕ್ಷಣ ಹಾಗೂ ಉತ್ಸವಗಳ ಆಚರಣೆ ಸೇರಿದಂತೆ ಅನೇಕ ವಿಷಯಗಳು ಅಡಕವಾಗಿರುತ್ತವೆ. ಇವುಗಳನ್ನು





ಕಾರ್ಯಗತಗೊಳಿಸಲು ಹಾಗೂ ಶಿಕ್ಷಕಿಯರ ಸಾಮರ್ಥ್ಯವರ್ಧನೆಗಾಗಿ ನಿರಂತರ ಮಾಸಿಕ ಪ್ರಶಿಕ್ಷಣ ವರ್ಗಗಳನ್ನು ನಡೆಸಲಾಗುತ್ತಿದೆ.

**ಸಂವಹನಕ್ಕಾಗಿ ಮೇಲ್ವಿಚಾರಕರು :** ವ್ಯಾಸಂಗಕೇಂದ್ರದ ಶಿಕ್ಷಕಿಯರ ಜೊತೆ ನಿರಂತರ ಸಂಪರ್ಕ ಏರ್ಪಡಿಸುವ ಉದ್ದೇಶದಿಂದ ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಹಲವು ವರ್ಷಗಳ ಕಾಲ ವ್ಯಾಸಂಗಕೇಂದ್ರದ ಶಿಕ್ಷಕಿಯರಾಗಿ ಕಾರ್ಯನಿರ್ವಹಿಸಿದ ಆಯ್ದ ಅನುಭವಿ ಶಿಕ್ಷಕಿಯರನ್ನು ಮೇಲ್ವಿಚಾರಕರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಇಂತಹ ಮೇಲ್ವಿಚಾರಕರು 6 ರಿಂದ 8 ಸೇವಾಬಸ್ತಿಗಳ ಸೇವಾ ಚಟುವಟಿಕೆಗಳನ್ನು ಗಮನಿಸುತ್ತಾರೆ.

- ಇವರಿಗೆ ನಿರಂತರ ಪ್ರಶಿಕ್ಷಣ ವರ್ಗ, ಧ್ಯಾನಶಿಬಿರ, ಪೌರಶಿಕ್ಷಣ ಶಿಬಿರ, ಜೀವನ ಕೌಶಲ್ಯ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.
- ಆಯ್ದ ವ್ಯಾಸಂಗ ಕೇಂದ್ರಗಳ ಶಿಕ್ಷಕಿಯರಿಗಾಗಿ ಸೆಪ್ಟೆಂಬರ್ 17ರಂದು ಅಗಸ್ತ್ಯ ಫೌಂಡೇಷನ್‌ನ ಸದಸ್ಯರು ವಿಜ್ಞಾನ ಪಾಠೋಪಕರಣಗಳನ್ನು ತಯಾರಿಸುವ ಕಾರ್ಯಾಗಾರವನ್ನು ನಡೆಸಿಕೊಟ್ಟರು. 50 ಶಿಕ್ಷಕಿಯರು ಭಾಗವಹಿಸಿದ್ದರು.

## ವ್ಯಾಸಂಗ ಕೇಂದ್ರಗಳಲ್ಲಿ ನಡೆದ ವಿವಿಧ ಚಟುವಟಿಕೆಗಳು

ದಿನನಿತ್ಯದ ಪಾಠಪ್ರವಚನಗಳ ಜೊತೆಗೆ ಸೇವಾಬಸ್ತಿಯ ಮಕ್ಕಳ ಹಾಗೂ ಸಮಾಜದ ವಿಕಾಸಕ್ಕಾಗಿ ವಿವಿಧ ಚಟುವಟಿಕೆಗಳನ್ನು ನಿರಂತರವಾಗಿ ಆಯೋಜಿಸಲಾಗುತ್ತಿದೆ.

- ಸೇವಾಬಸ್ತಿಯ ಜನರಲ್ಲಿ ಸಹೋದರತೆ ಮೂಡಿಸುವ ಹಾಗೂ ವ್ಯಾಸಂಗ ಕೇಂದ್ರದ ವಿದ್ಯಾರ್ಥಿಗಳ ಮನೋವಿಕಾಸಕ್ಕಾಗಿ ರಕ್ಷಾಬಂಧನ, ಸಂಕ್ರಾಂತಿ, ಭಾರತಮಾತಾ ಪೂಜನ (108 ಕ್ಲಸ್ಟರ್‌ಗಳಲ್ಲಿ), ದೀಪೋತ್ಸವ (200ಕ್ಕೂ ಹೆಚ್ಚು ಸ್ಥಾನ) ಶಿವರಾತ್ರಿ, ದೀಪಾವಳಿ, ವಿವೇಕಾನಂದ ಜಯಂತಿ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.
- ಪ್ರತಿವರ್ಷ ಸೇವಾಬಸ್ತಿಗಳಲ್ಲಿ ನಡೆಯುವ ಅಂಬೇಡ್ಕರ್ ಜಯಂತಿಯನ್ನು ಈ ವರ್ಷ **ಸ್ವಚ್ಛತಾ ದಿನ**ವನ್ನಾಗಿ ಆಚರಿಸಲಾಯಿತು. ಸೇವಾಬಸ್ತಿಯ ವ್ಯಾಸಂಗಕೇಂದ್ರವನ್ನು ಕೇಂದ್ರವಾಗಿಸಿಕೊಂಡು ಸ್ಥಳೀಯ ಸಾರ್ವಜನಿಕ ಸ್ಥಳಗಳನ್ನು (ದೇವಸ್ಥಾನ, ಬಸ್‌ನಿಲ್ದಾಣ, ಶಾಲಾ ಪರಿಸರ, ಸರ್ಕಾರೀ ಕಛೇರಿ) ಸ್ವಚ್ಛಗೊಳಿಸಿ ಜನರಲ್ಲಿ ಜಾಗೃತಿ ಮೂಡಿಸಲಾಯಿತು.



- ಅನೇಕ ಸ್ಥಾನಗಳಲ್ಲಿ ನಡೆದ ಯೋಗದಿನಾಚರಣೆಯಲ್ಲಿ (ಜೂನ್ 21) ವ್ಯಾಸಂಗ ಕೇಂದ್ರದ ಸಾವಿರಾರು ಮಕ್ಕಳು ಭಾಗವಹಿಸಿದರು.

- ಸೇವಾಬಸ್ತಿಯ ಜನರಲ್ಲಿ ಏಕತೆ ಮೂಡಿಸುವ ಸಲುವಾಗಿ ಕಳೆದ 15 ವರ್ಷಗಳಿಂದ ಸೇವಾಬಸ್ತಿಗಳಲ್ಲಿ ನಡೆಯುತ್ತಿರುವ ಶ್ರೀಕೃಷ್ಣಜನ್ಮಾಷ್ಟಮಿ ಉತ್ಸವವು ಇದೀಗ ಸೇವಾಬಸ್ತಿಯ ಎಲ್ಲ ಸಮುದಾಯದ ಜನರು ಉತ್ಸಾಹದಿಂದ ಪಾಲ್ಗೊಳ್ಳುವ ಮೂಲಕ ಊರಜಾತ್ರೆಯ ಸ್ವರೂಪ ಪಡೆದಿದೆ. ಎಲ್ಲ ಮನೆಯವರು ತಮ್ಮ ಮನೆಯಂಗಳದಲ್ಲಿ ರಂಗೋಲಿ ಹಾಕಿ ಕೃಷ್ಣ–ರಾಧೆಯರ ಮೆರವಣಿಗೆಯನ್ನು ಸ್ವಾಗತಿಸಿದರು. ತಾವಾಗಿಯೇ ವಿವಿಧ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತಿದ್ದಾರೆ. ಈ ವರ್ಷ ಒಟ್ಟು 65 ಕ್ಲಸ್ಟರ್‌ಗಳಲ್ಲಿ ಕೃಷ್ಣಾಷ್ಟಮಿ ನಡೆದಿದ್ದು, 8690 ಮಕ್ಕಳು ಕೃಷ್ಣ–ರಾಧೆಯರ ವೇಷಧರಿಸಿದರು. ವೇಷಧಾರಿಗಳಿಂದ ಸೇವಾಬಸ್ತಿಗಳಲ್ಲಿ ಮೆರವಣಿಗೆ, ಮೊಸರು–ಕುಡಿಕೆ ಒಡೆಯುವುದು ಮುಂತಾದ ಕಾರ್ಯಕ್ರಮಗಳು ನಡೆದವು.

- ಸಾಮಾಜಿಕ ಕಳಕಳಿ ಹೊಂದಿರುವ ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನಿಯರ್‌ಗಳ ತಂಡದವರು ಕಳೆದ 3 ವರ್ಷಗಳಿಂದ ದೀಪಾವಳಿ ಉತ್ಸವವನ್ನು ಸೇವಾಬಸ್ತಿಗಳಲ್ಲಿ ಆಚರಿಸುತ್ತಿದ್ದಾರೆ. ಪ್ರಸ್ತುತ 25ಕ್ಕೂ ಹೆಚ್ಚು ಸ್ಥಾನಗಳಲ್ಲಿ ನಡೆಯಿತು. ಸೇವಾಬಸ್ತಿಗೆ ಆಗಮಿಸಿದ ಎಂಜಿನಿಯರ್‌ಗಳ ತಂಡ ಅಲ್ಲಿನ ಮಕ್ಕಳಿಗೆ ಸಿಹಿ ವಿತರಿಸಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.





- ಸರಬಂಡೆಪಾಳ್ಯ ಮುಂತಾದ ವ್ಯಾಸಂಗಕೇಂದ್ರದ ಮಕ್ಕಳು ಮತ್ತು ಶಿಕ್ಷಕಿಯರು ಸ್ವತಃ ಮಣ್ಣಿನ ಶಿವಲಿಂಗ ನಿರ್ಮಿಸಿ, ಅದಕ್ಕೆ ಅಭಿಷೇಕ, ಪೂಜೆ ನೆರವೇರಿಸಿ ವಿಶಿಷ್ಟವಾಗಿ ಶಿವರಾತ್ರಿಯನ್ನು ಆಚರಿಸಿದರು.

- ವಿವೇಕಾನಂದ ಜಯಂತಿ ಪ್ರಯುಕ್ತ ಸರಬಂಡೆಪಾಳ್ಯ ಸೇವಾಬಸ್ತಿಯ ಮಕ್ಕಳು ವಿವೇಕಾನಂದರ ವೇಷಧರಿಸಿ ಮೆರವಣಿಗೆ ನಡೆಸಿದರು. ಸಂನ್ಯಾಸಿಕುಂಟೆ ಹಾಗೂ ಸತ್ಯನಗರ ಸೇವಾಬಸ್ತಿಯಲ್ಲಿ ವಿವೇಕಾನಂದರ ಕುರಿತು ಭಾಷಣ ಮತ್ತು ಹಾಡುಗಳ ಸ್ಪರ್ಧೆ ನಡೆಯಿತು. ಸಂನ್ಯಾಸಿಕುಂಟೆ ವ್ಯಾಸಂಗಕೇಂದ್ರದ ವರಲಕ್ಷ್ಮೀ ಎಂಬ ಹುಡುಗಿ ತನ್ನ ಶಾಲೆಯಲ್ಲಿ ವಿವೇಕಾನಂದರ ಕುರಿತು ಭಾಷಣ ಮಾಡಿ ಬಹುಮಾನ ಗಳಿಸಿದಳು.

- **ಗುರುವಂದನ:** ಮಕ್ಕಳಲ್ಲಿ ಗುರುಹಿರಿಯರ ಬಗೆಗೆ ಗೌರವ ಮೂಡಿಸುವ ದೃಷ್ಟಿಯಿಂದ ಗುರುಪೂರ್ಣಿಮೆಯ ಸಂದರ್ಭದಲ್ಲಿ ಸೇವಾಬಸ್ತಿಗಳಲ್ಲಿರುವ ವ್ಯಾಸಂಗಕೇಂದ್ರಗಳಲ್ಲಿ ಗುರುವಂದನ – ಮಕ್ಕಳು ತಾವು ಓದುವ ಶಾಲೆಯ ಶಿಕ್ಷಕರಿಗೆ ಗುರುವಂದನೆ ಸಲ್ಲಿಸುವ – ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

  ವ್ಯಾಸಂಗ ಕೇಂದ್ರ ಮಕ್ಕಳು ತಾವು ಓದುತ್ತಿರುವ ಶಾಲೆಯ ಶಿಕ್ಷಕರನ್ನು ಸಂಜೆ ಪ್ರಕಲ್ಪದಿಂದ ನಡೆಯುವ ವ್ಯಾಸಂಗ ಕೇಂದ್ರಗಳಿಗೆ ಆಹ್ವಾನಿಸಿ, ಅವರ

ಪಾದಪೂಜೆ ಮಾಡಿ ನಮಸ್ಕರಿಸಿ ಆಶೀರ್ವಾದ ಪಡೆಯುವ ಕಾರ್ಯಕ್ರಮವೇ ಗುರುವಂದನ ಕಾರ್ಯಕ್ರಮ. ಈ ಅವಿಸ್ಮರಣೀಯ ಕ್ಷಣಕ್ಕೆ ಸಾಕ್ಷಿಯಾದ ಶಿಕ್ಷಕರ ಕಣ್ಣುಗಳಲ್ಲಿ ಹನಿಯುಕ್ಕಿದ್ದು ಕಂಡುಬಂತು. ಇದು ತಮ್ಮ ವೃತ್ತಿ ಜೀವನದಲ್ಲಿಯೇ ಮರೆಯಲಾಗದ ದಿನ ಎಂದರು.

- **ಶೈಕ್ಷಣಿಕ ಪ್ರವಾಸ:** ವ್ಯಾಸಂಗ ಕೇಂದ್ರಗಳ ಶಿಕ್ಷಕಿಯರಿಗೆ ಮಾರ್ಚ್ 3ರಂದು ಬಾದಾಮಿ, ಬನಶಂಕರಿ, ಐಹೊಳೆ ಮತ್ತು ಪಟ್ಟದಕಲ್ಲು ಐತಿಹಾಸಿಕ ಸ್ಥಳಗಳಿಗೆ ಪ್ರವಾಸವನ್ನು ಏರ್ಪಡಿಸಲಾಯಿತು. ವ್ಯಾಸಂಗ ಕೇಂದ್ರಗಳ 153 ಶಿಕ್ಷಕಿಯರು ಭಾಗವಹಿಸಿದ್ದರು.

- **ಸೇವಾದರ್ಶನ:** ಪರಿಷತ್‌ನ ಯೋಗ ವಿಭಾಗದ ಕಾರ್ಯಕರ್ತರು, ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಘ ಶಿಕ್ಷಾ ವರ್ಗದ ಶಿಕ್ಷಾರ್ಥಿಗಳು (ಮೇ 6) ಮುಂತಾದವರು ಸೇವಾಬಸ್ತಿಗೆ ಭೇಟಿ ನೀಡಿ, ಅಲ್ಲಿ ರಾಷ್ಟ್ರೋತ್ಥಾನ ನಡೆಸುತ್ತಿರುವ ಸೇವಾ ಚಟುವಟಿಕೆಗಳನ್ನು ವೀಕ್ಷಿಸಿದರು.




- **ಬೇಸಿಗೆ ಶಿಬಿರ:** ಸೇವಾಬಸ್ತಿಯ ಮಕ್ಕಳ ಮನೋವಿಕಾಸಕ್ಕಾಗಿ ಹಾಗೂ ಅವರಲ್ಲಿರುವ ಪ್ರತಿಭೆಯನ್ನು ಗುರುತಿಸುವ ಸಲುವಾಗಿ ಶಾಲಾ ವಾರ್ಷಿಕ ರಜೆಯ ಸಂದರ್ಭದಲ್ಲಿ ಸೇವಾಬಸ್ತಿಗಳಲ್ಲಿ ಬೇಸಿಗೆ ಶಿಬಿರ (ಸಮ್ಮರ್ ಕ್ಯಾಂಪ್)ಗಳನ್ನು ಕಳೆದ ಹಲವು ವರ್ಷಗಳಿಂದ ಆಯೋಜಿಸಲಾಗುತ್ತಿದೆ.
  - ಈ ವರ್ಷ ಒಟ್ಟು 24 ಸ್ಥಾನಗಳಲ್ಲಿ 10 ದಿನಗಳ ಶಿಬಿರ ನಡೆಯಿತು. ಸುಮಾರು 1000ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದರು. ಸ್ಥಾನೀಯರೇ ಅಗತ್ಯ ವ್ಯವಸ್ಥೆ ಮಾಡಿದರು.
  - **ಶಿಬಿರಕ್ಕೆ ತಯಾರಿ:** ಶಿಕ್ಷಕಿಯರಿಗೆ ಈ ಶಿಬಿರ ನಡೆಸಲು ಪೂರಕ ಆಟ, ಹಾಡು, ಭಜನೆ, ಕರಕುಶಲ ಕಲೆ, ರಸಪ್ರಶ್ನೆ ಮೊದಲಾದ ವಿಷಯಗಳ ಕುರಿತು ಮಾರ್ಚ್ ತಿಂಗಳಲ್ಲಿ ನಡೆದ ಪ್ರಶಿಕ್ಷಣ ವರ್ಗದಲ್ಲಿ ತರಬೇತಿ ನೀಡಲಾಯಿತು.

## ವಿಶೇಷ ಚಟುವಟಿಕೆಗಳು

- **ಜೋಳಿಗೆ ಪುಸ್ತಕ:** ಮಕ್ಕಳಲ್ಲಿ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸುವ ದೃಷ್ಟಿಯಿಂದ ವ್ಯಾಸಂಗ ಕೇಂದ್ರಗಳಲ್ಲಿ ಜೋಳಿಗೆ ಪುಸ್ತಕ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ವ್ಯಾಸಂಗಕೇಂದ್ರದ ಮಕ್ಕಳೇ ಹಣ ನೀಡಿ ಪುಸ್ತಕ ಖರೀದಿಸಿ ಕೇಂದ್ರಕ್ಕೆ ಕೊಡಬೇಕು. ವಾರಕ್ಕೊಮ್ಮೆ ಎಲ್ಲ ಮಕ್ಕಳೂ ಒಂದೊಂದು ಪುಸ್ತಕವನ್ನು ತೆಗೆದುಕೊಂಡು ಹೋಗಿ ಅವುಗಳನ್ನು ಓದಬೇಕು ಮತ್ತು ಅದರ ಕುರಿತು



ಅವರ ಅಭಿಪ್ರಾಯ ತಿಳಿಸಬೇಕು, ಮಾತ್ರವಲ್ಲದೇ ಪುಸ್ತಕದ ವಿಶೇಷತೆಗಳನ್ನು ಪಟ್ಟಿಮಾಡಬೇಕು ಎಂಬ ಯೋಜನೆ ರೂಪಿಸಿ ಕಾರ್ಯಾರಂಬಿಸಲಾಗಿದೆ. ಪ್ರಾರಂಭಿಕ ಹಂತವಾಗಿ ಭಾರತ–ಭಾರತಿ ಪುಸ್ತಕ ಸಂಪದ ಪುಸ್ತಕಗಳನ್ನು ಮಕ್ಕಳು ಖರೀದಿಸಿದ್ದಾರೆ.

- **ಮಿನಿ ಭಾಲಭವನ:** ಬಡಮಕ್ಕಳ ಸೃಜನಾತ್ಮಕ–ಕ್ರಿಯಾತ್ಮಕ ವಿಕಾಸಕ್ಕಾಗಿ ಬೆಂಗಳೂರಿನ ಜಯನಗರ ಹಾಗೂ ಕೋಲ್ಸ್ ಪಾರ್ಕ್‌ನಲ್ಲಿ ಜಾಗರಣ ಪ್ರಕಲ್ಪದಿಂದ ಮಿನಿ ಭಾಲಭವನ ನಡೆಸಲಾಗುತ್ತಿದೆ. ಇಲ್ಲಿ ಬಡ ಮಕ್ಕಳಿಗೆ ಸಂಗೀತ, ನೃತ್ಯ, ಭರತನಾಟ್ಯ, ಕ್ರೀಡೆ, ಇಂಗ್ಲಿಷ್ ಸ್ಪೀಕಿಂಗ್ ತರಬೇತಿ ಮುಂತಾದ ಸೃಜನಾತ್ಮಕ–ಕ್ರಿಯಾತ್ಮಕ ಚಟುವಟಿಕೆಗಳನ್ನು ಕಲಿಸಲಾಗುತ್ತಿದೆ. ಸರ್ಕಾರೀ ಸ್ವಾಮ್ಯದ ಬೆಂಗಳೂರಿನ ಕಬ್ಬನ್ ಪಾರ್ಕ್‌ನ ಬಾಲಭವನ ಸೊಸೈಟಿ ಸಹಯೋಗದಲ್ಲಿ ಈ ಭಾಲಭವನವನ್ನು ನಡೆಸಲಾಗುತ್ತಿದೆ.

ಕಬ್ಬನ್‌ಪಾರ್ಕ್‌ನ ಬಾಲಭವನ ಸೊಸೈಟಿ ವತಿಯಿಂದ ಹಲವು ವರ್ಷಗಳಿಂದ ನಡೆಯುತ್ತಿದ್ದ ಭಾಲಭವನವನ್ನು ಸಶಕ್ತಗೊಳಿಸಲು ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಧಿಕಾರಿಗಳಾದ ದಿವ್ಯ ನಾರಾಯಣಪ್ಪ ಅವರು ರಾಷ್ಟ್ರೋತ್ಥಾನ ಪರಿಷತ್‌ನ ಸಹಕಾರ ಕೋರಿದರು. ಜಾಗರಣ ಪ್ರಕಲ್ಪವು ಈ ಮಿನಿ ಬಾಲಭವನದ ಚಟುವಟಿಕೆಗಳನ್ನು ನಡೆಸಲು ನಿರ್ಧರಿಸಿದ್ದು, ಜಯನಗರದ ದೀಪಕ್ ಆಸ್ಪತ್ರೆಯ ಹಿಂಭಾಗದ ಮಿನಿ ಬಾಲಭವನವನ್ನು ಪರಿಷತ್‌ನ



ಉಪಾಧ್ಯಕ್ಷರಾದ ಎ. ಗೋಪಾಲಕೃಷ್ಣ ನಾಯಕ್ ಹಾಗೂ ಕೋಲ್ಸ್‌ಪಾರ್ಕ್‌ನ ಭಾಲಭವನವನ್ನು ಆಡಳಿತ ಮಂಡಳಿ ಸದಸ್ಯ ದ್ವಾರಕಾನಾಥ್ ಉದ್ಘಾಟಿಸಿದರು. ಬಾಲಭವನ ಸೊಸೈಟಿಯ ರಾಜ್ಯ ಪದಾಧಿಕಾರಿಗಳಾದ ರಾಜೇಶ್ವರಿ, ರಮೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ದಿವ್ಯ ನಾರಾಯಣಪ್ಪ ಮುಂತಾದವರು ಉಪಸ್ಥಿತರಿದ್ದರು.

ಪ್ರಸ್ತುತ ಶನಿವಾರ ಮತ್ತು ಭಾನುವಾರಗಳಂದು ನೃತ್ಯ, ಸಂಗೀತ, ಕರಾಟೆ, ಯೋಗ, ದೇಶಿ ಆಟಗಳು, ಕರಕುಶಲ ಕಲೆ ಮೊದಲಾದ ವಿವಿಧ ಪ್ರಕಾರದ ಸೃಜನಾತ್ಮಕ ಚಟುವಟಿಕೆಗಳನ್ನು ನುರಿತ ಸಂಪನ್ಮೂಲ ವ್ಯಕ್ತಿಗಳು ನಡೆಸಿಕೊಡುತ್ತಿದ್ದಾರೆ.

ಜಯನಗರ ಮತ್ತು ಕೋಲ್ಸ್‌ಪಾರ್ಕ್‌ಗಳಲ್ಲಿನ ಮಿನಿ ಬಾಲಭವನಗಳಲ್ಲಿ 100ಕ್ಕೂ ಅಧಿಕ ಮಕ್ಕಳು ಈ ಚಟುವಟಿಕೆಗಳ ಲಾಭ ಪಡೆಯುತ್ತಿದ್ದಾರೆ.

## ಆ) ಶಿಶುಮಂದಿರ

ಸೇವಾಬಸ್ತಿಗಳಲ್ಲಿ ವಾಸಿಸುವ ಜನರು ತಮ್ಮ ಆರ್ಥಿಕ ಸ್ಥಿತಿಯ ಸುಧಾರಣೆಗಾಗಿ ಮನೆಯ ಎಲ್ಲ ಸದಸ್ಯರು ದುಡಿಮೆಗೆ ಹೋಗುತ್ತಾರೆ. ಇದು ತುತ್ತಿನ ಚೀಲ ತುಂಬಲು ಅನಿವಾರ್ಯ ಕೂಡ. ಸಹಜವಾಗಿ ಮಹಿಳೆಯರೂ ಕೂಡಾ ಕೆಲಸಕ್ಕೆ ಹೋಗಬೇಕಾಗುತ್ತದೆ. ಮನೆಗೆಲಸ, ಬೀದಿ ಕಸಗುಡಿಸಲು, ಊದುಬತ್ತಿ ಫ್ಯಾಕ್ಟರಿ ಮುಂತಾದ ಕೆಲಸಗಳಿಗೆ ಹೋಗುವ ತಾಯಂದಿರು ಬೆಳಗ್ಗೆಯಿಂದ ಸಂಜೆಯವರೆಗೆ ಮನೆಯಿಂದ ಹೊರಗಿರುವ ಪರಿಸ್ಥಿತಿಯಿದೆ. ಇಂತಹ ಸಂದರ್ಭದಲ್ಲಿ ಅವರ ಮಕ್ಕಳು?

ಇಂತಹವರಿಗೆ ನೆರವಾಗುವ ಉದ್ದೇಶದಿಂದ ಬೆಂಗಳೂರಿನ ವಿ.ವಿ.ಗಿರಿ ಕಾಲೋನಿ, ಕೆಂಪಾಪುರ ಅಗ್ರಹಾರ, ನ್ಯೂಗುರಪ್ಪನ ಪಾಳ್ಯ, ಕಾಮಾಕ್ಷಿಪಾಳ್ಯ ಮೊದಲಾದೆಡೆ ರಾಷ್ಟ್ರೋತ್ಥಾನ ಪರಿಷತ್ ಜಾಗರಣ ಪ್ರಕಲ್ಪದ ಮೂಲಕ ಶಿಶುಮಂದಿರಗಳನ್ನು ಪ್ರಾರಂಬಿಸಲಾಗಿದೆ. ಇಲ್ಲಿ ಎರಡೂವರೆ ಯಿಂದ 5 ವರ್ಷದೊಳಗಿನ ಮಕ್ಕಳಿರುವ ತಾಯಂದಿರು ತಮ್ಮ ಮಕ್ಕಳನ್ನು ಈ ಶಿಶುಮಂದಿರಗಳಲ್ಲಿ ಬಿಟ್ಟು ಹೋಗುತ್ತಾರೆ. ಅಲ್ಲಿ ಆ ಮಕ್ಕಳಿಗೆ ಹಾಡು, ಆಟ, ಊಟವ್ಯವಸ್ಥೆಯ ಜೊತೆಗೆ ತಾಯಿಯಂತೆ ಪ್ರೀತಿತೋರುವ ಶಿಕ್ಷಕಿಯರು ಮಕ್ಕಳನ್ನು ನೋಡಿಕೊಳ್ಳುತ್ತಾರೆ.

ಪ್ರಸ್ತುತ 3 ಶಿಶುಮಂದಿರಗಳಲ್ಲಿ 151 ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ.

**ರಾಷ್ಟ್ರೋತ್ಥಾನ ಶಿಶುಮಂದಿರ, ಕಾಮಾಕ್ಷಿಪಾಳ್ಯ:** ಕಾಮಾಕ್ಷಿಪಾಳ್ಯದ ಸುತ್ತಮುತ್ತಲಿನ ಜನರಿಗೆ ನೆರವು ನೀಡುವ ಸಲುವಾಗಿ 2015ರ ಜೂನ್‌ನಲ್ಲಿ ಕಾಮಾಕ್ಷಿಪಾಳ್ಯದಲ್ಲಿ ನೂತನ ಕಟ್ಟಡದವೊಂದನ್ನು ನಿರ್ಮಿಸಲಾಯಿತು. ಪ್ರಸ್ತುತ ಈ ಕಟ್ಟಡದಲ್ಲಿ ಶಿಶುಮಂದಿರ, ಯೋಗ ಕೇಂದ್ರ ಮತ್ತು ಮಕ್ಕಳ ಮಂದಿರ, ಕಂಪ್ಯೂಟರ್ ತರಬೇತಿ ಕೇಂದ್ರಗಳು ನಡೆಯುತ್ತಿವೆ.

### ಉಲ್ಲೇಖನೀಯ ಸಂಗತಿಗಳು

- ಶಿಶುಮಂದಿರದಲ್ಲಿ ಕಲಿತವರು ಇಂದು ಶಿಕ್ಷಕಿಯರಾಗಿ ಅಥವಾ ವಾರಕ್ಕೊಮ್ಮೆ ತಾನು ಕಲಿತ ಶಿಶುಮಂದಿರಕ್ಕೆ ಬಂದು ಆಟ, ಹಾಡು, ನೃತ್ಯಗಳನ್ನು ಮಕ್ಕಳಿಗೆ ಕಲಿಸುತ್ತಿದ್ದಾರೆ.
- ಶಿಶುಮಂದಿರದ ಮಾತಾಜಿ ಸೇವಾಬಸ್ತಿಯ ಜನರ ಗೌರವ ಆದರಕ್ಕೆ ಪಾತ್ರರಾಗಿದ್ದಾರೆ.

## ಸ್ವಾವಲಂಬನೆ

ಸೇವಾಬಸ್ತಿಯಲ್ಲಿರುವ ಮಹಿಳೆಯರ, ಯುವಕ-ಯುವತಿಯರ ಕೈಗಳಿಗೆ ವೃತ್ತಿಪರ ತರಬೇತಿ ನೀಡಿ ಸ್ವಾವಲಂಬೀ ಬದುಕನ್ನು ಕಟ್ಟಿಕೊಡುವ ಉದ್ದೇಶದಿಂದ ವಿವಿಧ ವೃತ್ತಿತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.




"ಮನೆಯ ಆರ್ಥಿಕ ಸಂಕಷ್ಟದಿಂದಾಗಿ ಪಿ.ಯು.ಸಿ ನಂತರ ಮುಂದೆ ಓದಲು ಆಗಲಿಲ್ಲ. ಆದರೆ ಕೆ.ಪಿ. ಅಗ್ರಹಾರದ ಸೇವಾಧಾಮ ನಮ್ಮ ಜೀವನದ ದಿಕ್ಕನ್ನೇ ಬದಲಿಸಿದೆ. ಇಲ್ಲಿ ಕಂಪ್ಯೂಟರ್ ತರಬೇತಿ ಪಡೆದ ನಮಗೆ, ಇದೀಗ Premier League Solutionsನಲ್ಲಿ ಕೆಲಸ ದೊರಕಿದೆ. ನಮ್ಮ ಕುಟುಂಬಕ್ಕೆ ನಾವೀಗ ಹೊರೆಯಾಗುವ ಬದಲಾಗಿ ಆಸರೆಯಾಗಿ ನಿಂತಿದ್ದೇವೆ. ಬದುಕು ಬದಲಿಸಿದ ಸೇವಾಧಾಮದ ಯಾವುದೇ ಚಟುವಟಿಕೆಗಳಲ್ಲಿ ಜೋಡಿಕೊಳ್ಳಲು ನಾವು ಸದಾ ಸಿದ್ಧರಿದ್ದೇವೆ."

– ಸೇವಾಬಸ್ತಿಯ ಭಗಿನಿ ಮೋನಿಷಾ, ಪವಿತ್ರಾ ಹಾಗೂ ದೇವಿ


### ಅ) ಹೊಲಿಗೆ ತರಬೇತಿ ಕೇಂದ್ರ

ಕೆ.ಪಿ. ಅಗ್ರಹಾರ ಮತ್ತು ವಿ.ವಿ. ಗಿರಿ ಕಾಲೋನಿಗಳಲ್ಲಿ ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. 2017–18ರ ವರ್ಷದಲ್ಲಿ ಒಟ್ಟು 150ಕ್ಕೂ ಅಧಿಕ ಮಹಿಳೆಯರು ಹೊಲಿಗೆ ತರಬೇತಿ ಪಡೆದಿದ್ದಾರೆ. ಪ್ರಸ್ತುತ 70 ಮಹಿಳೆಯರು ವಿವಿಧ ತಂಡಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ.

### ಆ) ಕಂಪ್ಯೂಟರ್ ತರಬೇತಿ ಕೇಂದ್ರ

ಬಾಪೂಜಿನಗರ, ಕಾಮಾಕ್ಷಿಪಾಳ್ಯ, ಬ್ಯೆಯ್ಯಪ್ಪನಹಳ್ಳಿ, ಹೊಂಗಸಂದ್ರ, ಕೆ.ಪಿ. ಅಗ್ರಹಾರ, ಶೇಷಾದ್ರಿಪುರಂನ ವಿ.ವಿ.ಗಿರಿ ಕಾಲೋನಿ, ಉಲ್ಲಾಳ ಉಪನಗರ(ಯೂತ್ ಫಾರ್ ಸೇವಾದ ವಿದ್ಯಾಚೇತನ ಯೋಜನೆಯ ಸಹಯೋಗ) ಹಾಗೂ ದೊಮ್ಮಲೂರು(ಅಕಾರ್ಡ್ ಸಾಫ್ಟ್‌ವೇರ್ ಕಂಪೆನಿಯ ಸಹಯೋಗ) – ಒಟ್ಟು 7 ಕಂಪ್ಯೂಟರ್ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. 2017–18ರಸಾಲಿನಲ್ಲಿ 500ಕ್ಕೂ ಅಧಿಕ ಮಂದಿ ಕಂಪ್ಯೂಟರ್ ತರಬೇತಿ ಪಡೆದಿದ್ದಾರೆ.

3 ತಿಂಗಳ ಅವಧಿಯ ಕೋರ್ಸ್‌ಗಳಲ್ಲಿ ಬೇಸಿಕ್ ಮತ್ತು ಟ್ಯಾಲಿ ವಿಷಯಗಳನ್ನು ಕಲಿಸಿ, ನಂತರ ವಿವಿಧ ಕಂಪೆನಿಗಳಲ್ಲಿ ಉದ್ಯೋಗ ಒದಗಿಸಲು ಸಹಾಯ ಮಾಡುವ ಮೂಲಕ ಯುವಕ-ಯುವತಿಯರಿಗೆ ಸ್ವಾವಲಂಬೀ ಬದುಕನ್ನು ಕಟ್ಟಿಕೊಳ್ಳಲು ನೆರವು ನೀಡಲಾಗುತ್ತದೆ.




### ಇ) ಸ್ವಸಹಾಯ ಸಂಘಗಳು

ಸೇವಾಬಸ್ತಿಯ ವಿಕಾಸ ಹಾಗೂ ಸೇವಾಬಸ್ತಿಯ ಜನರು ಆರ್ಥಿಕ ಪ್ರಗತಿ ಸಾಧಿಸುವ ಸಲುವಾಗಿ 8 ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಈ ವರ್ಷ ಕಮಲಾ ನಗರದ ಸುತ್ತಮುತ್ತಲಿನ ಸೇವಾಬಸ್ತಿಗಳಲ್ಲಿ ಸ್ವಸಹಾಯ ಸಂಘಗಳನ್ನು ಪ್ರಾರಂಭಿಸುವ ಯೋಜನೆ ರೂಪಿಸಲಾಯಿತು. 30 ಮಹಿಳೆಯರನ್ನೊಳಗೊಂಡ 2 ಮತ್ತು 12 ಪುರುಷರನ್ನೊಳಗೊಂಡ 1 ಸ್ವಸಹಾಯ ಸಂಘಗಳು ಪ್ರಾರಂಭಗೊಂಡಿವೆ. ಸ್ಥಳೀಯ ಕೆನರಾಬ್ಯಾಂಕ್‌ನಲ್ಲಿ ಉಳಿತಾಯ ಖಾತೆಯನ್ನು ತೆರೆಯಲಾಗಿದೆ.

### ಈ) ಮುದ್ರಾ ಯೋಜನೆಯ ಸಹಾಯ

ಚಿಕ್ಕ ಉದ್ಯಮಿಗಳಿಗಾಗಿ ಪ್ರಧಾನ ಮಂತ್ರಿಗಳು ಜಾರಿಗೆ ತಂದ ಮುದ್ರಾ ಯೋಜನೆಯ ಸೌಲಭ್ಯವನ್ನು 3 ಮಹಿಳೆಯರು ಪಡೆದುಕೊಳ್ಳಲು ಜಾಗರಣ ಪ್ರಕಲ್ಪ ಸಹಾಯ ಮಾಡಿದೆ. ಕೆಂಪಾಪುರ ಅಗ್ರಹಾರದ ನಾಗಮ್ಮನಗರ ಸೇವಾಬಸ್ತಿಯ ಶಾಂತಿ, ಸಿದ್ಧಾಪುರದ ಬಳಿಯ ಹೊಂಬೇಗೌಡ ಸೇವಾಬಸ್ತಿಯ ಮುನಿಯಮ್ಮ (ಹೊಲಿಗೆ ಅಂಗಡಿ ಪ್ರಾರಂಭಿಸಲು) ಮತ್ತು ಬಿ.ವಿ. ವೆಂಕಟರೆಡ್ಡಿ ನಗರ ಸೇವಾಬಸ್ತಿಯ ರಾಮತುಳಸಿ ಅವರಿಗೆ (ದಿನಸಿ ಅಂಗಡಿ ತೆರೆಯಲು) ಮುದ್ರಾ ಯೋಜನೆಯಡಿಯಲ್ಲಿ 50,000 ರೂ.ಗಳ ಸಾಲವನ್ನು ಬಸವನಗುಡಿಯ ಕಾರ್ಪೋರೇಷನ್ ಬ್ಯಾಂಕ್ ಮಂಜೂರು ಮಾಡಿದೆ.

#### ಪರಿಣಾಮ

- ಇಲ್ಲಿ ತರಬೇತಿ ಪಡೆದ ಅನೇಕ ಯುವತಿಯರು ತಮ್ಮ ಕುಟುಂಬಗಳಿಗೆ ಆಸರೆಯಾಗಿದ್ದಾರೆ.
- ಸ್ವಂತ ಅಂಗಡಿಗಳನ್ನು ಪ್ರಾರಂಭಿಸಿದ್ದಾರೆ.
- ವಿವಿಧೆಡೆಗಳಲ್ಲಿ ಕೆಲಸಕ್ಕೆ ಸೇರಿ, ಉತ್ತಮ ಸಂಬಳ ಪಡೆಯುತ್ತಿದ್ದಾರೆ
- ಸೇವಾಬಸ್ತಿಯ ಇತರ ನಿರುದ್ಯೋಗಿಗಳಿಗೆ ಮಾದರಿಯಾಗಿದ್ದಾರೆ

## ಆರೋಗ್ಯ

### ಅ) ಆರೋಗ್ಯ ರಕ್ಷಕಿಯರು

ಸೇವಾಬಸ್ತಿಗಳ ಮಹಿಳೆಯರಿಗೆ ತಮ್ಮ ವೈಯಕ್ತಿಕ ಆರೋಗ್ಯದ ಸಮಸ್ಯೆಗಳನ್ನು ಹೇಳಿಕೊಳ್ಳಲು ಯಾರೂ ಇರುವುದಿಲ್ಲ. ಆರೋಗ್ಯದ ಸಮಸ್ಯೆ ಉಂಟಾದಾಗ ಎಲ್ಲಿಗೆ ಹೋಗಬೇಕು ಎಂಬುದೂ ಅವರಿಗೆ ತಿಳಿದಿರುವುದಿಲ್ಲ. ಇಂತಹವರಿಗೆ ನೆರವಾಗುವ ಉದ್ದೇಶದಿಂದ ಸೇವಾಬಸ್ತಿಯಲ್ಲಿರುವ ಆಸಕ್ತ ಮಹಿಳೆಯನ್ನು 'ಆರೋಗ್ಯ ರಕ್ಷಕಿ'ಯಾಗಿ ಗುರುತಿಸಲಾಗುತ್ತದೆ. ಆರೋಗ್ಯ ರಕ್ಷಕಿಯರು ಅವರಿಗೆ ಸಹಾಯ ಮಾಡುತ್ತಾರೆ. ಹತ್ತಿರದ ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಿ ಸೂಕ್ತ ಚಿಕಿತ್ಸೆ ಒದಗಿಸುತ್ತಾರೆ.

ಸೇವಾಬಸ್ತಿಗಳಲ್ಲಿ ಆರೋಗ್ಯ ಜಾಗೃತಿ, ಆರೋಗ್ಯ ತಪಾಸಣಾ ಶಿಬಿರ, ಗಂಭೀರ ಕಾಯಿಲೆಗಳಿಗೆ ಹೆಚ್ಚಿನ ಚಿಕಿತ್ಸೆಯ ನೆರವು ದೊರಕಿಸುವ ಮತ್ತು ಮಾನಸಿಕವಾಗಿ ನೊಂದಿರುವವರಿಗೆ ಆಪ್ತ ಸಲಹೆ ನೀಡುವ ವಿವಿಧ ಕಾರ್ಯಗಳನ್ನು ಆರೋಗ್ಯ ರಕ್ಷಕಿಯರು ನಡೆಸುತ್ತಿದ್ದಾರೆ. ಅನೇಕ ಬಡ ಗರ್ಭಿಣಿ ಹೆಂಗಸರು ಇವರ ಸಹಾಯದಿಂದ ಉತ್ತಮ ಆಸ್ಪತ್ರೆಗಳಲ್ಲಿ ಉಚಿತ ಹೆರಿಗೆ ಸೌಲಭ್ಯವನ್ನು ಪಡೆದಿದ್ದಾರೆ. ಈವರೆಗೆ ಸಾವಿರಾರು ಮಹಿಳೆಯರು ತಮ್ಮ ಆರೋಗ್ಯದ ಸಮಸ್ಯೆಗಳನ್ನು ಇವರ ಮುಂದೆ ಹಂಚಿಕೊಂಡು ಪರಿಹರಿಸಿಕೊಂಡಿದ್ದಾರೆ. ಇವರ ಮೂಲಕ ಸೇವಾಬಸ್ತಿಯ ಮನೆಗಳ ಸರ್ವೇಕ್ಷಣೆ ನಡೆಸಿ ಅನಾರೋಗ್ಯದ ಕಾರಣವನ್ನು ಪತ್ತೆ ಹಚ್ಚಲಾಗುತ್ತಿದೆ. ನಿರಂತರವಾಗಿ ವಿವಿಧ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಲಾಗುತ್ತಿದೆ. ಅನಾರೋಗ್ಯಕ್ಕೆ ಕಾರಣವಾದ ಅನೈರ್ಮಲ್ಯ ವಾತಾವರಣವನ್ನು ದೂರಗೊಳಿಸಲು ಜನರಲ್ಲಿ ಜಾಗೃತಿ ಮೂಡಿಸುವ ಸಂವಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಪ್ರಸ್ತುತ ಕೆ.ಪಿ. ಅಗ್ರಹಾರದ ಸುತ್ತಲಿನ 5 ಸೇವಾಬಸ್ತಿಗಳಲ್ಲಿ ಹಾಗೂ ಸಿದ್ಧಾಪುರ ಸುತ್ತಲಿನ 6 ಸೇವಾಬಸ್ತಿಗಳ ಮಾತೆಯರ ಆರೋಗ್ಯ ಸಮಸ್ಯೆಗೆ ಪರಿಹಾರ ನೀಡಲು ಆರೋಗ್ಯ ರಕ್ಷಕಿಯರು ಶ್ರಮಿಸುತ್ತಿದ್ದಾರೆ.

ಈ ವರ್ಷ ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ 80ಕ್ಕೂ ಹೆಚ್ಚು ಮಹಿಳೆಯರಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಆರೋಗ್ಯ ರಕ್ಷಕಿಯರ ಈ ಕಾರ್ಯಕ್ಕೆ BGS ಗ್ಲೋಬಲ್ ಆಸ್ಪತ್ರೆ, ರಂಗದೊರೈ ಆಸ್ಪತ್ರೆ, ಮಹಾವೀರ್ ಜೈನ್ ಆಸ್ಪತ್ರೆಗಳು ನಿರಂತರವಾಗಿ ಸಹಕಾರ ನೀಡುತ್ತಿವೆ.

## ಕಿಶೋರಿಯರ ಜಾಗೃತಿ ಕಾರ್ಯಕ್ರಮ

ಸೇವಾಬಸ್ತಿಗಳ ಕಿಶೋರಿಯರಲ್ಲಿ ಉಂಟಾಗುವ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ಸಮಾಧಾನ ನೀಡುವ, ಸಮಾಲೋಚನೆ ಮಾಡುವ ಮತ್ತು ಆ ಬಗ್ಗೆ ಅವರಲ್ಲಿ ಅರಿವು ಮೂಡಿಸುವ ಸಲುವಾಗಿ ಜನವರಿ 28ರಂದು ಆಯ್ದ ಮಹಿಳಾ ಮೇಲ್ವಿಚಾರಕರು ಮತ್ತು ವ್ಯಾಸಂಗ ಕೇಂದ್ರಗಳ ಶಿಕ್ಷಕಿಯರಿಗಾಗಿ ಕಾರ್ಯಾಗಾರವನ್ನು ಆಯೋಜಿಸಲಾಯಿತು.

ಯೂತ್ ಫಾರ್ ಸೇವಾದ ಶಶಿಕಲಾ ಅವರು ಕಾರ್ಯಾಗಾರವನ್ನು ನಡೆಸಿಕೊಟ್ಟರು. ತರಬೇತಿ ಪಡೆದ ಸಮಾಲೋಚಕರು ಸತ್ಯನಗರ, ಹೊಂಬೇಗೌಡ ಸ್ಲಂ, ಬೈಯ್ಯಪ್ಪನಹಳ್ಳಿ, ಮಹಾಲಕ್ಷ್ಮೀ ಲೇಔಟ್, ನಂದಿನಿ ಲೇಔಟ್, ಕುಂತಿಗ್ರಾಮ ಮೊದಲಾದ ಸೇವಾಬಸ್ತಿಗಳಲ್ಲಿ ಕಿಶೋರಿಯರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ.

## ಆ) ಉಚಿತ ಚಿಕಿತ್ಸಾಲಯ

ಕೆಂಪಾಪುರ ಅಗ್ರಹಾರ ಮತ್ತು ವಿ.ವಿ. ಗಿರಿ ಸೇವಾಬಸ್ತಿಗಳಲ್ಲಿ ಉಚಿತ ಚಿಕಿತ್ಸಾ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಆರೋಗ್ಯ ಸಮಸ್ಯೆಯಿರುವವರು ಇದರ ಸದುಪಯೋಗ ಪಡೆಯುತ್ತಿದ್ದಾರೆ. 2016–17ರ ಸಾಲಿನಲ್ಲಿ 1,500ಕ್ಕೂ ಅಧಿಕ ರೋಗಿಗಳು ಚಿಕಿತ್ಸೆ ಪಡೆದಿದ್ದಾರೆ.

## ಇ) ಆರೋಗ್ಯ ಮತ್ತು ನೇತ್ರ ತಪಾಸಣಾ ಶಿಬಿರಗಳು

ವಿವಿಧ ಆಸ್ಪತ್ರೆಗಳ, ಸಂಸ್ಥೆಗಳ ಸಹಯೋಗದೊಂದಿಗೆ (ಲಯನ್ಸ್ ಕಣ್ಣಾಸ್ಪತ್ರೆ, ಬಿಜಿಎಸ್ ಗ್ಲೋಬಲ್ ಆಸ್ಪತ್ರೆ, ಡಾಕ್ಟರ್ಸ್ ಫಾರ್ ಸೇವಾ, ರೋಟರಿ ಕ್ಲಬ್, ಮದನ ಮೋಹನ ಮಾಳವೀಯ ಮಿಷನ್ ಇತ್ಯಾದಿ) ವಿವಿಧ ಸೇವಾಬಸ್ತಿಗಳಲ್ಲಿ ನಿಯಮಿತವಾಗಿ ಉಚಿತ ಸ್ವಾಸ್ಥ್ಯ ಸಂಬಂಧಿ ಶಿಬಿರಗಳನ್ನು ನಡೆಸಲಾಗುತ್ತಿದೆ.

## ಪರಿಣಾಮ

ಈ ಪ್ರದೇಶಗಳ ಜನರಲ್ಲಿ ಆರೋಗ್ಯದ ಕುರಿತು ಜಾಗೃತಿ ಮೂಡಿದೆ ಹಾಗೂ ಸೂಕ್ತ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆಯುವ ಬಗ್ಗೆ ಜಾಗೃತಿ ಮೂಡುತ್ತಿದ್ದಾರೆ.

| | ಶಿಬಿರ ಸಂಖ್ಯೆ | ಮಾತೆಯರು | ಪುರುಷರು | ಒಟ್ಟು | ಕನ್ನಡಕ ಪಡೆದವರು | ಚಿಕಿತ್ಸೆ ಪಡೆದವರು |
|---|---|---|---|---|---|---|
| ನೇತ್ರ ತಪಾಸಣಾ ಶಿಬಿರ | 4 | 349 | 276 | 616 | 353 | 55 |
| ಆರೋಗ್ಯ ತಪಾಸಣಾ ಶಿಬಿರ | 2 | 576 | 420 | 898 | – | 36 |
| ಮಹಿಳಾ ಆರೋಗ್ಯ ತಪಾಸಣೆ ಶಿಬಿರ | 1 | 80 | – | 80 | – | 26 |











## ಸಂಸ್ಕಾರ

- **ಬಾಲಗೋಕುಲ:** ಬಾಲಗೋಕುಲಗಳ ಮೂಲಕ ಸೇವಾಬಸ್ತಿಯಲ್ಲಿರುವ ಮಕ್ಕಳಲ್ಲಿ ಉತ್ತಮ ಗುಣಗಳನ್ನು ಬೆಳೆಸುವ ಕಾರ್ಯವನ್ನು ನಡೆಸಲಾಗುತ್ತಿದೆ. ಪ್ರಸ್ತುತ 200 ಬಾಲಗೋಕುಲಗಳು ನಡೆಯುತ್ತಿದ್ದು, ನಾಲ್ಕು ಸಾವಿರಕ್ಕೂ ಅಧಿಕ ಮಕ್ಕಳು ಭಾಗವಹಿಸುತ್ತಿದ್ದಾರೆ.

- **ದೇವಸ್ಥಾನ ಕೇಂದ್ರಿತ ಚಟುವಟಿಕೆ:** ಸೇವಾಬಸ್ತಿಯಲ್ಲಿರುವ ದೇವಸ್ಥಾನವನ್ನು ಕೇಂದ್ರಿತವಾಗಿರಿಸಿ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಈ ಮೂಲಕ ಸೇವಾಬಸ್ತಿಯ ಜನರಲ್ಲಿ ಸಂಸ್ಕಾರ ನೀಡುವ ಪ್ರಯತ್ನ ನಡೆಯುತ್ತಿದೆ.

ಕೆಂಪಾಪುರ ಅಗ್ರಹಾರದ ರಾಷ್ಟ್ರೋತ್ಥಾನ ಸೇವಾಧಾಮದಲ್ಲಿರುವ ಶ್ರೀ ಗಣೇಶ ದೇವಸ್ಥಾನದ ಮೂಲಕ ಸುತ್ತಲಿನ ಜನರಿಗೆ ಧಾರ್ಮಿಕ ಭಾವನೆ ಜಾಗೃತಗೊಳಿಸುವ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ.





*ಪರಿಷತ್ತಿನ ಉಪಾಧ್ಯಕ್ಷರಾದ ಎ.ಜಿ.ಕೆ. ನಾಯಕ್ ಹಾಗೂ ಪರಿಷತ್ತಿನ ಜಾಗರಣ ಪ್ರಕಲ್ಪದ ಪ್ರಮುಖರು ಅಗಸ್ತ್ಯ ಫೌಂಡೇಷನ್ನಿಗೆ ಭೇಟಿ ನೀಡಿ, ಅಲ್ಲಿನ ಸೇವಾಚಟುವಟಿಕೆಗಳನ್ನು ವೀಕ್ಷಿಸಿದರು. ಅಗಸ್ತ್ಯ ಫೌಂಡೇಷನ್ನಿನ ಪ್ರಮುಖರೊಂದಿಗೆ ಮಾತುಕತೆ ನಡೆಸಿದರು.*

### ಪ್ರಕಲ್ಪದ ಚಟುವಟಿಕೆಗಳ ಪರಿಣಾಮ

- ಸೇವಾಬಸ್ತಿಯ ಸಹಸ್ರಾರು ಮನೆಗಳೊಂದಿಗೆ ಸಂಪರ್ಕ ಏರ್ಪಟ್ಟಿದೆ.
- ಸೇವಾಬಸ್ತಿಯಲ್ಲಿ ಭಾರತೀಯ ಮೌಲ್ಯಗಳ ಜಾಗೃತಿ ಹಾಗೂ ಧಾರ್ಮಿಕ–ಹಿಂದುತ್ವ ವಿಚಾರಗಳಿಗೆ ಪ್ರಾಧಾನ್ಯತೆ ಮೂಡುತ್ತಿದೆ.
- ಸೇವಾಬಸ್ತಿಯ ಅನೇಕ ಪ್ರಮುಖರು ಪ್ರಕಲ್ಪದ ಕಾರ್ಯದಲ್ಲಿ ಜೋಡಿಕೊಂಡಿದ್ದಾರೆ.
- ಬದ್ಧತೆಯುಳ್ಳ ನೂರಾರು ಕಾರ್ಯಕರ್ತರು ತೊಡಗಿಕೊಂಡಿದ್ದಾರೆ.

# ನಂದಗೋಕುಲ

ಈ ಮಕ್ಕಳಿಗೆ ಊಟ, ವಸತಿ ಹಾಗೂ ಶಿಕ್ಷಣದ ಜೊತೆಗೆ ಅವರ ಸರ್ವತೋಮುಖ ವಿಕಾಸಕ್ಕಾಗಿ ಹಲವು ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

## ಅ) ರಾಷ್ಟ್ರೋತ್ಥಾನ ಮಕ್ಕಳ ಮಂದಿರ

ಕಾಮಾಕ್ಷಿಪಾಳ್ಯದಲ್ಲಿರುವ 'ರಾಷ್ಟ್ರೋತ್ಥಾನ ಮಕ್ಕಳ ಮಂದಿರ'ದಲ್ಲಿ 20 ಮಕ್ಕಳು ಆಶ್ರಯ ಪಡೆದಿದ್ದಾರೆ. ಧಾರವಾಡ, ಚಾಮರಾಜನಗರ, ಮಂಡ್ಯ, ಗುಬ್ಬಿ, ದೊಡ್ಡಬಳ್ಳಾಪುರ, ಬೆಂಗಳೂರು – ಮುಂತಾದ ಸ್ಥಳಗಳ ಈ ಮಕ್ಕಳಿಗೆ ಉಚಿತವಾಗಿ ಊಟ, ವಸತಿ ಮತ್ತು ಶಿಕ್ಷಣ ವ್ಯವಸ್ಥೆ ಒದಗಿಸಲಾಗುತ್ತಿದೆ.

ಈ ಮಕ್ಕಳಿಗೆ ಬೆಳಗ್ಗೆ 5.30ರಿಂದ ರಾತ್ರಿ 10.30ರ ವರೆಗೆ ಶಾಲಾ ಪಾಠ್ಯದ ಜೊತೆಗೆ ಜೀವನ ಕೌಶಲಗಳ ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಮಕ್ಕಳ ವಿಕಾಸಕ್ಕಾಗಿ ಕಾಮಾಕ್ಷಿಪಾಳ್ಯದ ಅನೇಕರು ಹಿತೈಷಿಗಳಾಗಿ ಕೈಜೋಡಿಸಿದ್ದಾರೆ.

- **ನೂತನ ಕಟ್ಟಡದ ಭೂಮಿ ಪೂಜನ:** ನಾಗರಬಾವಿಯಲ್ಲಿ ನಂದಗೋಕುಲದ ನೂತನ ಕಟ್ಟಡಕ್ಕೆ ಭೂಮಿ ಪೂಜೆ ಜೂನ್‌ನಲ್ಲಿ ನಡೆಯಿತು. ಪರಿಷತ್‌ನ ಆಡಳಿತ ಮಂಡಳಿ ಸದಸ್ಯರಾದ ನಾರಾಯಣ ಅವರು ಭೂಮಿಪೂಜೆ ನೆರವೇರಿಸಿದರು.
- **ಕಾರ್ಯಕ್ರಮಗಳು:** ಮಕ್ಕಳ ಮನೋವಿಕಾಸಕ್ಕಾಗಿ ಗುರುವಂದನ, ಗಣೇಶೋತ್ಸವ, ದೀಪಾವಳಿ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.
  - ಮಕ್ಕಳಲ್ಲಿ ಗುರುಹಿರಿಯರ ಬಗೆಗೆ ಗೌರವ ಮೂಡಿಸುವ ದೃಷ್ಟಿಯಿಂದ ಗುರುಪೂರ್ಣಿಮೆಯಂದು ನಂದಗೋಕುಲದಲ್ಲಿ ಮಕ್ಕಳು ತಾವು ಓದುವ ಶಾಲೆಯ ಶಿಕ್ಷಕರಿಗೆ ವಂದನೆ ಸಲ್ಲಿಸುವ



ತಂದೆ/ತಾಯಿಯರ ಪಾಲನೆ–ಪೋಷಣೆಯಿಂದ ವಂಚಿತ ಮಕ್ಕಳಿಗೆ ಆಶ್ರಯ ನೀಡುವ ಸಲುವಾಗಿ ರಾಷ್ಟ್ರೋತ್ಥಾನ ಪರಿಷತ್‌ನಿಂದ 'ನಂದಗೋಕುಲ'ವನ್ನು ನಡೆಸಲಾಗುತ್ತಿದೆ. ಕಾಮಾಕ್ಷಿಪಾಳ್ಯದ ರಾಷ್ಟ್ರೋತ್ಥಾನ ಶಿಶುಮಂದಿರದಲ್ಲಿ ಹಾಗೂ ಬನಶಂಕರಿಯಲ್ಲಿ ಬಾಡಿಗೆ ಕಟ್ಟಡದಲ್ಲಿ ನಂದಗೋಕುಲದ ಚಟುವಟಿಕೆಗಳು ನಡೆಯುತ್ತಿದ್ದು ಒಟ್ಟು 28 ಮಕ್ಕಳು ಆಶ್ರಯ ಪಡೆದಿದ್ದಾರೆ.

'ಗುರುವಂದನ' ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ ಶಿಕ್ಷಕರನ್ನು ವ್ಯಾಸಂಗ ಕೇಂದ್ರದ ವಿದ್ಯಾರ್ಥಿಗಳು ಸ್ವಾಗತಿಸಿ ಪಾದಪೂಜೆ ಮಾಡಿ ನಮಸ್ಕರಿಸಿದರು.

➢ ನಂದಗೋಕುಲದ ಮಕ್ಕಳು ರಕ್ಷಾಬಂಧನ ದಿನದಂದು ಸುತ್ತಲಿನ ಮನೆಗಳಿಗೆ ತೆರಳಿ ರಕ್ಷೆಕಟ್ಟಿ ಅವರಿಂದ ಆಶೀರ್ವಾದ ಪಡೆದರು. 200ಕ್ಕೂ ಹೆಚ್ಚು ಮನೆಗಳ ಸಂಪರ್ಕ ಮಾಡಿದರು.

- **ವಿಜ್ಞಾನ ವಸ್ತು ಪ್ರದರ್ಶನ:** ಶಾಲೆಯಿಂದ ನಡೆದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ನಂದಗೋಕುಲದ ಮಕ್ಕಳು ಹಲವು ವಿಜ್ಞಾನ ಪ್ರಾತ್ಯಕ್ಷಿಕೆಗಳನ್ನು ತಯಾರಿಸಿ ಪ್ರದರ್ಶಿಸಿದರು.
- **ಪ್ರವಾಸ:** ನಂದಗೋಕುಲದ ಮಕ್ಕಳನ್ನು ಬೆಂಗಳೂರಿನ ತಾರಾಲಯ, ಬೆಂಗಳೂರಿನ ಖ್ಯಾತ ಅಂಬೇರ್‌ರೋಡ್ ಸಾಫ್ಟ್‌ವೇರ್ ಕಂಪೆನಿಗೆ ಕರೆದೊಯ್ದು ಅಲ್ಲಿನ ಚಟುವಟಿಕೆಗಳ ಬಗೆಗೆ ಮಾಹಿತಿ ನೀಡಲಾಯಿತು.
- ರಾಷ್ಟ್ರೀಯ ಸ್ವಯಂಸೇವಕ ಸಂಘದ 7 ದಿನಗಳ ಶಿಬಿರ ಪ್ರಾಥಮಿಕ ಶಿಕ್ಷಾ ವರ್ಗದಲ್ಲಿ ನಾಲ್ಕು ವಿದ್ಯಾರ್ಥಿಗಳು ಭಾಗವಹಿಸಿದರು.

## ಅರಳಿದ ಪ್ರತಿಭೆಗಳು

- **ಎಸ್‌ಎಸ್‌ಎಲ್‌ಸಿಯಲ್ಲಿ 94% ಅಂಕ:** ಮೂಲತಃ ಮಂಡ್ಯದ ಚಂದಗಾಲ ಗ್ರಾಮದವನಾದ ಜೋಗಿಗೌಡನ ತಂದೆ ಚನ್ನಗೌಡ ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆಹಿಡಿದು ದಶಕಗಳೇ ಕಳೆದಿದೆ. ತಾಯಿ ದೇವಮ್ಮ ಕೂಲಿ ಮಾಡಿ ತನ್ನ ಕುಟುಂಬದ ಜೀವನ ಸಾಗಿಸುತ್ತಿದ್ದಾರೆ. ಅತ್ಯಂತ ಹಿಂದುಳಿದ ಈ ಕುಟುಂಬಕ್ಕೆ ದಿನದ ಹೊಟ್ಟೆತುಂಬಿಸಿಕೊಳ್ಳುವುದೇ ಕಷ್ಟವಾಗಿತ್ತು. ಹೀಗಾಗಿ ಜೋಗಿಗೌಡನನ್ನು ಶಾಲೆಯಿಂದ ಬಿಡಿಸಲಾಯಿತು. ಇದನ್ನು ಗಮನಿಸಿ, ಅವನನ್ನು ನಂದಗೋಕುಲಕ್ಕೆ ಸೇರಿಸಿಕೊಂಡು ಶಿಕ್ಷಣ ನೀಡಲಾಯಿತು. ಜೋಗಿಗೌಡ ಕಳೆದ 8 ವರ್ಷಗಳಿಂದ ನಂದಗೋಕುಲದಲ್ಲಿ ಉಚಿತ ವಸತಿ, ಊಟ ಹಾಗೂ ಶಿಕ್ಷಣ ಪಡೆಯುತ್ತಿದ್ದಾನೆ. ಬೆಂಗಳೂರಿನ ಗೋವಿಂದರಾಜನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದಿದ ಜೋಗಿಗೌಡ ಇದೀಗ 2017ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಮಾಜವಿಜ್ಞಾನದಲ್ಲಿ 99 ಹಾಗೂ ಕನ್ನಡದಲ್ಲಿ 121 ಅಂಕಗಳೊಂದಿಗೆ ಒಟ್ಟು 585 (ಶೇ. 93.6) ಅಂಕ ಗಳಿಸಿದ್ದಾನೆ.



ನಂದಗೋಕುಲದ 6 ಮಂದಿ ವಿದ್ಯಾರ್ಥಿಗಳು ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದು ಎಲ್ಲ ಮಕ್ಕಳೂ ಉತ್ತೀರ್ಣರಾಗಿದ್ದಾರೆ. ಜೋಗೀಗೌಡ 585, ವಿಶಾಲ್ ಕೆ. 495 ಅಂಕ, ಗೋಪಿಕುಮಾರ್ 485 ಅಂಕ, ರಮೇಶ್ ಎನ್. 441 ಅಂಕ, ಅನಿಲ್‌ಕುಮಾರ್ ಕೆ.ಜೆ. 491 ಅಂಕ, ಯಶವಂತ ಎಂ. 428 ಅಂಕಗಳನ್ನು ಗಳಿಸಿದ್ದಾರೆ.

## ಆ) ಬನಶಂಕರಿಯ ನಂದಗೋಕುಲ:

ಬನಶಂಕರಿಯಲ್ಲಿ ಬಾಡಿಗೆ ಕಟ್ಟಡದಲ್ಲಿ ತಂದೆ/ತಾಯಿಯರ ಪಾಲನೆ–ಪೋಷಣೆಯಿಂದ ವಂಚಿತರಾದ ಮಕ್ಕಳಿಗೆ ಆಶ್ರಯ ನೀಡುವ ಸಲುವಾಗಿ 'ನಂದಗೋಕುಲ' ನಡೆಸಲಾಗುತ್ತಿದೆ. ಒಟ್ಟು 8 ಮಂದಿ ಮಕ್ಕಳು ಇಲ್ಲಿ ಪ್ರಯೋಜನ ಪಡೆಯುತ್ತಿದ್ದಾರೆ. ಈ ಮಕ್ಕಳಿಗೆ ಉಚಿತವಾಗಿ ಊಟ, ವಸತಿ ಮತ್ತು ಶಿಕ್ಷಣ ವ್ಯವಸ್ಥೆ ಒದಗಿಸಲಾಗುತ್ತಿದೆ.

- ನಂದಗೋಕುಲದ ಎಲ್ಲ ಮಕ್ಕಳು ಅವರ ಶಾಲೆಯಲ್ಲಿ ವಾರ್ಷಿಕೋತ್ಸವದ ಪ್ರಯುಕ್ತ ನಡೆದ ಕ್ರೀಡೋತ್ಸವದಲ್ಲಿ ಬಹುಮಾನ ಗಳಿಸಿದ್ದಾರೆ. ಶಾಲೆಯ ಆಡಳಿತ ಮಂಡಳಿ ಮಕ್ಕಳ ಪ್ರತಿಭೆಗೆ ಮೆಚ್ಚುಗೆ ವ್ಯಕ್ತಪಡಿಸಿದೆ.
- ಮಕ್ಕಳ ನಡವಳಿಕೆಯ ಕುರಿತು ಶಾಲೆಯಲ್ಲಿ ಮೆಚ್ಚುಗೆ ವ್ಯಕ್ತವಾಗುತ್ತಿದೆ.



# ರಾಷ್ಟ್ರೋತ್ಥಾನ ಗೋಶಾಲೆ

## ಭಾರತೀಯ ದೇಶಿ ತಳಿಗಳ ಸಂರಕ್ಷಣೆ ಮತ್ತು ಸಂವರ್ಧನೆ

ಅನಾದಿಕಾಲದಿಂದಲೂ ಭಾರತದಲ್ಲಿ ಗೋವಿಗೆ ಪೂಜ್ಯಸ್ಥಾನವನ್ನು ನೀಡಲಾಗಿದೆ. ಗೋವು ಕೇವಲ ಹಾಲು ಕೊಡುವ ಪ್ರಾಣಿಯಲ್ಲ. ಮಾನವ ಜೀವನದ ವಿಕಾಸದ ಪ್ರತಿಹಂತದಲ್ಲೂ ಗೋವಿಗೆ ಪ್ರಮುಖವಾದ ಸ್ಥಾನವನ್ನು ನೀಡಿ, ಅದನ್ನು ದೇವತೆಗಳ ಮೂಲಸ್ಥಾನ ಎಂದು ನಂಬಿದವರು ಭಾರತೀಯರು. ಆದರೆ ವಿದೇಶೀ ಮಾನಸಿಕತೆಯ ಪರಿಣಾಮದಿಂದಾಗಿ ಗೋವನ್ನು ಹಾಲು ಕೊಡುವ ಯಂತ್ರವಾಗಿ ಚಿತ್ರಿಸಲಾಗುತ್ತಿದೆ. ಈ ಮಾನಸಿಕತೆಯ ಭರಾಟೆಯಲ್ಲಿ ಗೋವಿನ ಮಹಾನತೆ ಮರೆಯಾಗುತ್ತಿದೆ. ಹಸುವನ್ನು ಕೇವಲ ಹಾಲಿನ ಮೂಲವೆಂದು ಪರಿಗಣಿಸಿ, ಭಾರತೀಯ ಗೋತಳಿಗಳನ್ನು ಅಲಕ್ಷಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ದೇಶೀಯ (ಭಾರತೀಯ) ತಳಿಗಳ ಸಂರಕ್ಷಣೆ, ಸಂವರ್ಧನೆ ಮತ್ತು ಸಂಶೋಧನೆಗಾಗಿ ದೊಡ್ಡಬಳ್ಳಾಪುರ ಸಮೀಪದ ಶ್ರೀ ಘಾಟಿಸುಬ್ರಹ್ಮಣ್ಯ ಕ್ಷೇತ್ರದ ತಪ್ಪಲಿನ 'ಶ್ರೀಮಾಧವ ಸೃಷ್ಟಿ'ಯಲ್ಲಿ ಗೋಶಾಲೆಯನ್ನು ನಡೆಸಿಕೊಂಡು ಬರುತ್ತಿದೆ.

- ಗೋಪಾಲನೆಗೆ ಯೋಗ್ಯವಾದ ಈ ಪರಿಸರದಲ್ಲಿ ಗುಜರಾತಿನ ಗೀರ್, ಹರ್ಯಾಣದ ಸಾಹೀವಾಲ್, ರಾಜಸ್ಥಾನದ ಕಾಂಕ್ರೆಜ್, ರಾಜಸ್ಥಾನ–ಹರ್ಯಾಣದ ಕಾರ್‌ಪಾರ್ಕರ್, ಮಹಾರಾಷ್ಟ್ರದ ದೇವನಿ, ದಕ್ಷಿಣ ಒಳನಾಡಿನ ಹಳ್ಳಿಕಾರ್, ಮಲೆನಾಡಿನ ಗಿಡ್ಡ, ಹೊಂಗೋಲ್, ಜವಾರಿ, ಅಮೃತಮಹಲ್ ಸೇರಿದಂತೆ 10 ತಳಿಗಳ ಸಂರಕ್ಷಣೆ ಮಾಡಲಾಗುತ್ತಿದೆ.
- ಎತ್ತು, ಹೋರಿ, ದನ ಹಾಗೂ ಕರುಗಳು ಸೇರಿದಂತೆ ಒಟ್ಟು 500ಕ್ಕೂ ಅಧಿಕ ಜಾನುವಾರುಗಳಿಗೆ ಆಶ್ರಯ ನೀಡಲಾಗಿದೆ.
- ತಳಿಗಳ ಅಭಿವೃದ್ಧಿಗೆ ವಿಶೇಷ ಪ್ರಯತ್ನ ನಡೆಸಲಾಗುತ್ತಿದೆ.
- ಸಗಣಿಯನ್ನು ಬಳಸಿ ಕಾಂಪೋಸ್ಟ್, ಎರೆಗೊಬ್ಬರ ಹಾಗೂ ಅಗ್ನಿಹೋತ್ರಗಳನ್ನು ತಯಾರಿಸಲಾಗುತ್ತಿದೆ. ಸುತ್ತಮುತ್ತಲಿನ ರೈತರಿಗೆ ನೀಡಲಾಗುತ್ತಿದೆ.
- ಗೋಸಾಕಣೆ, ಹೈನುಗಾರಿಕೆ, ಸಾವಯವ ಕೃಷಿ, ಪ್ರಕೃತಿಚಿಕಿತ್ಸೆ ಇವುಗಳಲ್ಲಿ ಸಮನ್ವಯ ಸಾಧಿಸುವ ಕಾರ್ಯಯೋಜನೆ ರೂಪಿಸಲಾಗಿದೆ.
- 40 ಮಂದಿ ಗೋಪಾಲಕರು ಕೆಲಸ ನಿರ್ವಹಿಸುತ್ತಿದ್ದಾರೆ.



## ವಿಶೇಷ ಕಾರ್ಯಚಟುವಟಿಕೆ

- **ಗಿಡ ನೆಡುವ ಅಭಿಯಾನ:** ಸ್ವಚ್ಛ ಸುಂದರ ಪರಿಸರ ನಿರ್ಮಿಸುವ ಸಲುವಾಗಿ ಗೋಶಾಲೆಯ ಪರಿಸರದ 5 ಎಕರೆ ಜಾಗದಲ್ಲಿ 5,000 ಗಿಡಗಳನ್ನು ನೆಡುವ ಅಭಿಯಾನ ನಡೆಸಲು ನಿರ್ಧರಿಸಲಾಗಿದೆ. 2017ರ ಜೂನ್ 18ರಂದು ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಈ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಉದ್ಘಾಟನಾ ಕಾರ್ಯಕ್ರಮ ಮತ್ತು ಅಭಿಯಾನದಲ್ಲಿ ವಿವಿಧ ಸಂಘಸಂಸ್ಥೆಗಳ ಯುವಕರು ಹಾಗೂ ಸಾರ್ವಜನಿಕರು ಕೈಜೋಡಿಸಿದ್ದಾರೆ. 500ಕ್ಕೂ ಅಧಿಕ ಗಿಡಗಳನ್ನು ಈಗಾಗಲೇ ನೆಡಲಾಗಿದೆ.
- **ಸ್ವಾವಲಂಬೀ ವಿದ್ಯುತ್ ವ್ಯವಸ್ಥೆ:** ಗೋಶಾಲೆಯಲ್ಲಿ ಸೌರಶಕ್ತಿ ಮತ್ತು ಗೋಬರ್ ಗ್ಯಾಸ್ ಬಳಕೆಗೆ ಆದ್ಯತೆ ನೀಡಲಾಗುತ್ತಿದೆ. ಎಲ್ಲ ಬೋರ್‌ವೆಲ್‌ಗಳಿಗೆ ಸೌರವಿದ್ಯುತ್ ಅಳವಡಿಸಲಾಗಿದೆ. ಗೋಶಾಲೆಗಳ ಬೆಳಕಿನ ವ್ಯವಸ್ಥೆ ಸಂಪೂರ್ಣ ಸೌರಶಕ್ತಿಯಿಂದಲೇ ನಡೆಯುತ್ತಿದೆ.





- ಎರೆಗೊಬ್ಬರ ಘಟಕದ ಮೂಲಕ ಎರೆಗೊಬ್ಬರವನ್ನು ತಯಾರಿಸಲಾಗುತ್ತಿದೆ. ಸುತ್ತಮುತ್ತಲಿನ ರೈತರಿಗೆ ಈ ಎರೆಗೊಬ್ಬರವನ್ನು ನೀಡಲಾಗುತ್ತಿದೆ. 22 ತೊಟ್ಟಿಗಳಿರುವ ಎರೆಗೊಬ್ಬರ ಘಟಕವನ್ನು ಪರಿಷತ್ತಿನ ಆಡಳಿತ ಮಂಡಳಿ ಸದಸ್ಯರಾದ ಕೆ.ಎಸ್. ನಾರಾಯಣ ಅವರು ಉದ್ಘಾಟಿಸಿದರು.
- ಗೋಶಾಲೆಯಲ್ಲಿ ಗೋಮೂತ್ರ ಅರ್ಕ, ಧೂಪ, ಜೀವಾಮೃತ, ಘನ ಜೀವಾಮೃತ, ಕೀಟ ನಿಯಂತ್ರಕ, ಭರಣಿ, ದಂತಮಂಜನ, ಗೋಚೂರ್ಣ, ಗೋಮಯ ಭಸ್ಮಗಳನ್ನು ತಯಾರಿಸಲಾಗುತ್ತಿದೆ.
- **ಉಚಿತ ಹೋರಿ/ಎತ್ತು ವಿತರಣೆ:** ಸುತ್ತಮುತ್ತಲಿನ ಹಳ್ಳಿಗಳ ರೈತರಿಗೆ ನೆರವಾಗುವ ಉದ್ದೇಶದಿಂದ ಉಚಿತ ಹೋರಿ ಹಾಗೂ ಎತ್ತುಗಳನ್ನು ನೀಡುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಈ ವರ್ಷ ಒಟ್ಟು 35 ಜೊತೆ ಹೋರಿ/ಎತ್ತುಗಳನ್ನು ರೈತರಿಗೆ (ಮಂಡ್ಯ, ದೊಡ್ಡಬಳ್ಳಾಪುರ, ಗೌರಿಬಿದನೂರು, ಪಾಂಡವಪುರ, ಮೇಲುಕೋಟೆ, ಹಿರಿಯೂರು, ಮದ್ದೂರು ಮುಂತಾದ ಗ್ರಾಮೀಣ ಭಾಗದವರಿಗೆ) ನೀಡಲಾಗಿದೆ. ರೈತರು ತಮ್ಮ ಗದ್ದೆಗಳ ಉಳುಮೆಗಾಗಿ ಇವುಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಆರೈಕೆ ಮಾಡಲು ಅಸಾಧ್ಯವಾದಾಗ ಪುನಃ ಗೋಶಾಲೆಗೆ ಹಿಂತಿರುಗಿಸಬೇಕು. ಯಾವುದೇ ಕಾರಣಕ್ಕೂ ಮಾರಾಟ ಮಾಡುವಂತಿಲ್ಲ ಎಂಬ ಒಪ್ಪಂದದ ಮೇರೆಗೆ ಇವುಗಳನ್ನು ನೀಡಲಾಗುತ್ತಿದೆ.
- **ಇತರ ಗೋಶಾಲೆಗಳಿಗೆ ಹೋರಿ ವಿತರಣೆ:** ದೇಶಿ ಗೋವುಗಳ ರಕ್ಷಣೆಗಾಗಿ ಹಾಗೂ ತಳಿ ಅಭಿವೃದ್ಧಿಗಾಗಿ ಅನೇಕ ಗೋಶಾಲೆಗಳಿಗೆ ದೇಶಿ ಹೋರಿಯನ್ನು ನೀಡಲಾಗುತ್ತಿದೆ. 5 ಗೋಶಾಲೆಗಳಿಗೆ ಉತ್ತಮ ಗುಣಮಟ್ಟದ ಹೋರಿಗಳನ್ನು ನೀಡಲಾಗಿದೆ.
- ಮಣ್ಣಿನ ಸಂಪರ್ಕವಿಲ್ಲದೆ, ಕಡಮೆ ನೀರು, ಕಡಮೆ ಜಾಗದಲ್ಲಿ ಅಧಿಕ ಇಳುವರಿ ಪಡೆಯುವ ಹೈಡ್ರೋಫೋನಿಕ್ ಮೇವು ಉತ್ಪಾದನೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ. ನಿರುಪಯುಕ್ತ ಶೀಟ್‌ಗಳಿಂದ ತಯಾರಿಸಿದ ಕ್ರೇಟ್‌ಗಳನ್ನು ಬಳಸಿ, ವರ್ಷವಿಡೀ ಮೇವು ಲಭ್ಯವಿರುವಂತೆ ಮಾಡಲಾಗುತ್ತಿದೆ

## ಉತ್ಸವಗಳು

ಗೋಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಲ್ಲಿ ಸಹೋದರತೆ ಮೂಡಿಸುವ ಹಾಗೂ ನಮ್ಮ ಪರಂಪರೆ ಸಂಸ್ಕೃತಿಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಶ್ರೀರಾಮನವಮಿ, ರಕ್ಷಾಬಂಧನ, ಕೃಷ್ಣಜನ್ಮಾಷ್ಟಮಿ, ಗಣೇಶಚತುರ್ಥಿ, ಆಯುಧಪೂಜೆ, ದೀಪಾವಳಿ, ಮಕರಸಂಕ್ರಾಂತಿ, ಯುಗಾದಿ, ವಿವೇಕಾನಂದ ಜಯಂತಿ ಮುಂತಾದ ಉತ್ಸವಗಳನ್ನು ನಿರಂತರವಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

## ತರಬೇತಿ

- ರಾಜ್ಯದ ವಿವಿಧ ಭಾಗಗಳಿಂದ ಜನ ಗೋ ಸಾಕಣೆಯ ಕುರಿತು ಅಧ್ಯಯನಕ್ಕಾಗಿ ಭೇಟಿ ನೀಡುತ್ತಿದ್ದಾರೆ.
- ಗೋಶಾಲೆಯಲ್ಲಿನ ಗೋ ಸಾಕಣೆಯ ಕುರಿತು ರಾಜ್ಯದ ವಿವಿಧ ಭಾಗಗಳ ರೈತರು ಹಾಗೂ ಹೈನುಗಾರಿಕಾ ಇಲಾಖೆಯವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.
- ರಾಜ್ಯದ ವಿವಿಧೆಡೆಗಳಲ್ಲಿ ನಡೆಯುವ ಗೋಶಾಲೆ ಸಂಬಂಧಿತ ಕಾರ್ಯಾಗಾರ, ಉತ್ಸವಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಲಾಗುತ್ತಿದೆ.

# ಶೈಕ್ಷಣಿಕ ಸಂಸ್ಥೆಗಳು




ಸಾಮಾಜಿಕ ವ್ಯವಸ್ಥೆಯ ಉಪಕ್ರಮದ ಮೇಲೆ ಪ್ರಭಾವ ಬೀರಬಲ್ಲ ಬಹುಪ್ರಮುಖ ಅಂಗ ಶೈಕ್ಷಣಿಕ ಕ್ಷೇತ್ರ. ಸುಶಿಕ್ಷಿತ, ಸುಸಂಸ್ಕೃತ ಸಮಾಜದ ನಿರ್ಮಾಣಕ್ಕಾಗಿಯೇ ಹುಟ್ಟಿಕೊಂಡ ರಾಷ್ಟ್ರೋತ್ಥಾನ ಪರಿಷತ್, ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಹೆಸರಿನಲ್ಲಿ ಮಹತ್ವದ ಮೈಲಿಗಲ್ಲುಗಳನ್ನಿಡುತ್ತಿದೆ. ವಿದ್ಯಾರ್ಥಿಗಳನ್ನು ಸಮರ್ಥ, ಸುಯೋಗ್ಯ ನಾಗರಿಕರನ್ನಾಗಿ ರೂಪಿಸುವ ಉದ್ದೇಶದಿಂದ 1972ರಲ್ಲಿ ಬಳ್ಳಾರಿಯ ಹಗರಿಬೊಮ್ಮನಹಳ್ಳಿಯಲ್ಲಿ ಶಿಶುಮಂದಿರದೊಂದಿಗೆ ಪ್ರಾರಂಭಗೊಂಡ ಪರಿಷತ್‌ನ ಶೈಕ್ಷಣಿಕ ಚಟುವಟಿಕೆಗಳು ಇಂದು 25 ಶಿಶುಮಂದಿರಗಳು, 13 ಪ್ರಾಥಮಿಕ ಶಾಲೆಗಳು, 13 ಪ್ರೌಢಶಾಲೆ ಹಾಗೂ ಒಂದು ವಸತಿ ಶಾಲೆಯೂ ಸೇರಿದಂತೆ ಒಟ್ಟು 6 ಕೇಂದ್ರೀಯ ಪಠ್ಯಕ್ರಮಾಧಾರಿತ (CBSE) ಶಾಲೆ ಹಾಗೂ 2 ಪದವಿಪೂರ್ವ ಕಾಲೇಜುಗಳ ಮೂಲಕ ರಾಜ್ಯಾದ್ಯಂತ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿವೆ.



## ಶಿಶುಮಂದಿರಗಳು

| ಕ್ರ.ಸಂ | ಶಿಶುಮಂದಿರಗಳು | ಸಂಖ್ಯೆ |
|---|---|---|
| 1 | ರಾಷ್ಟ್ರೋತ್ಥಾನ ಶಿಶುಮಂದಿರ, ಕಲಬುರ್ಗಿ | 1 |
| 2 | ರಾಷ್ಟ್ರೋತ್ಥಾನ ಶಿಶುಮಂದಿರ, ಕೆರೂರು ಗ್ರಾಮಾಂತರ | 1 |
| 3 | ರಾಷ್ಟ್ರೋತ್ಥಾನ ಶಿಶುಮಂದಿರ, ಧಾರವಾಡ ಗ್ರಾಮಾಂತರ | 8 |
| 4 | ರಾಷ್ಟ್ರೋತ್ಥಾನ ಶಿಶುಮಂದಿರ, ಹುಬ್ಬಳ್ಳಿ | 1 |
| 5 | ರಾಷ್ಟ್ರೋತ್ಥಾನ ಶಿಶುಮಂದಿರ, ದಾವಣಗೆರೆ | 1 |
| 6 | ಶಾರದಾ ಶಿಶುಮಂದಿರ, ಹಗರಿಬೊಮ್ಮನಹಳ್ಳಿ | 1 |
| 7 | ಸರಸ್ವತಿ ಶಿಶುಮಂದಿರ, ಹಗರಿಬೊಮ್ಮನಹಳ್ಳಿ | 1 |
| 8 | ಜ್ಞಾನಭಾರತಿ ಶಿಶುಮಂದಿರ, ಚಿತ್ರದುರ್ಗ | 1 |
| 9 | ಲಯನ್ಸ್ ಸೇವಾಭಾರತಿ ಶಿಶುಮಂದಿರ, ಬೆಂಗಳೂರು | 1 |
| 10 | ಸಾಂದೀಪನ ಶಿಶುಮಂದಿರ, ಬೆಂಗಳೂರು | 1 |
| 12 | ರಾಷ್ಟ್ರೋತ್ಥಾನ ಶಿಶುಮಂದಿರ, ಹೊಳೆಹೊನ್ನೂರು & ಗ್ರಾಮಾಂತರ | 8 |
| 13 | ಜೈ ಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ಶಿಶುಮಂದಿರ, ಬೆಂಗಳೂರು | 1 |
| | **ಒಟ್ಟು ಸಂಖ್ಯೆ** | **26** |

## ರಾಷ್ಟ್ರೋತ್ಥಾನ ಪರಿಷತ್ತಿನ ಕೇಂದ್ರ ಪಠ್ಯಕ್ರಮ ಶಾಲೆಗಳು

1 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಧಾರವಾಡ (ಗಂಡು ಮಕ್ಕಳ ವಸತಿ ಶಾಲೆ)
2 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಥಣಿಸಂದ್ರ, ಬೆಂಗಳೂರು
3 ಜೈಗೋಪಾಲ್ ಗರೋಡಿಯಾ, ರಾ.ವಿ.ಕೇಂ. ರಾ.ಮೂ.ನಗರ, ಬೆಂಗಳೂರು
4 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಬನಶಂಕರಿ, ಬೆಂಗಳೂರು
5 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹಗರಿಬೊಮ್ಮನಹಳ್ಳಿ
6 ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ದಾವಣಗೆರೆ

## ರಾಜ್ಯ ಪಠ್ಯಕ್ರಮ ಪ್ರಾಥಮಿಕ ಶಾಲೆಗಳು

1. ರಾಷ್ಟ್ರೋತ್ಥಾನ ವಿದ್ಯಾಲಯ, ಕಲಬುರ್ಗಿ
2. ರಾಮಕೃಷ್ಣ ವಿದ್ಯಾಮಂದಿರ, ಕೆರೂರು
3. ರಾಷ್ಟ್ರೋತ್ಥಾನ ವಿದ್ಯಾಲಯ, ಧಾರವಾಡ
4. ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹುಬ್ಬಳ್ಳಿ
5. ರಾಷ್ಟ್ರೋತ್ಥಾನ ವಿದ್ಯಾಲಯ, ದಾವಣಗೆರೆ
6. ರಾಷ್ಟ್ರೋತ್ಥಾನ ಹಿರಿಯ ಪ್ರಾಥಮಿಕ ಶಾಲೆ, ಹಗರಿಬೊಮ್ಮನಹಳ್ಳಿ
7. ರಾಷ್ಟ್ರೋತ್ಥಾನ ವಿದ್ಯಾಲಯ, ಹೊಳೆಹೊನ್ನೂರು
8. ಸಾಂದೀಪನ ವಿದ್ಯಾಭವನ, ಶ್ರೀರಾಂಪುರ, ಬೆಂಗಳೂರು
9. ಲಯನ್ಸ್ ಸೇವಾಭಾರತಿ ವಿದ್ಯಾಲಯ, ಉಲ್ಲಾಳು ಉಪನಗರ, ಬೆಂಗಳೂರು
10. ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಲಯ, ಕಲ್ಯಾಣನಗರ, ಬೆಂಗಳೂರು
11. ಜ್ಞಾನಭಾರತಿ ವಿದ್ಯಾಮಂದಿರ, ಚಿತ್ರದುರ್ಗ
12. ಶಾರದಾ ಆಂಗ್ಲ ಮಾಧ್ಯಮಿಕ ವಿದ್ಯಾಲಯ, ಹಗರಿಬೊಮ್ಮನಹಳ್ಳಿ

## ರಾಜ್ಯ ಪಠ್ಯಕ್ರಮ ಪ್ರೌಢ ಶಾಲೆಗಳು

1. ರಾಷ್ಟ್ರೋತ್ಥಾನ ಪ್ರೌಢಶಾಲೆ, ಹಗರಿಬೊಮ್ಮನಹಳ್ಳಿ
2. ರಾಷ್ಟ್ರೋತ್ಥಾನ ಪ್ರೌಢಶಾಲೆ, ದಾವಣಗೆರೆ
3. ರಾಷ್ಟ್ರೋತ್ಥಾನ ಪ್ರೌಢಶಾಲೆ, ಹೊಳೆಹೊನ್ನೂರು
4. ವಿಕಾಸ ಪ್ರೌಢಶಾಲೆ, ರಾಮಮೂರ್ತಿನಗರ, ಬೆಂಗಳೂರು
5. ಪತ್ತಿ ಆದಿನಾರಣಯ್ಯ ರಾಮಲಕ್ಷ್ಮಮ್ಮ ಪ್ರೌಢಶಾಲೆ, ಮುಂಗಾನಹಳ್ಳಿ, (ಚಿಂತಾಮಣಿ) (2)
6. ಶಾರದಾ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಹಗರಿಬೊಮ್ಮನಹಳ್ಳಿ
7. ಜ್ಞಾನಭಾರತಿ ವಿದ್ಯಾಮಂದಿರ, ಚಿತ್ರದುರ್ಗ
8. ಸಾಂದೀಪನ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಶ್ರೀರಾಂಪುರ, ಬೆಂಗಳೂರು
9. ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ಪ್ರೌಢಶಾಲೆ, ಕಲ್ಯಾಣನಗರ, ಬೆಂಗಳೂರು
10. ಶ್ರೀ ಬೀರೇಶ್ವರ ಗ್ರಾಮಾಂತರ ಪ್ರೌಢಶಾಲೆ, ಅಬ್ಬೂರುದೊಡ್ಡಿ, ಚನ್ನಪಟ್ಟಣ

## ಪದವಿ ಪೂರ್ವ ಕಾಲೇಜುಗಳು

1. ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜು, ಹಗರಿಬೊಮ್ಮನಹಳ್ಳಿ
2. ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜು, ಥಣಿಸಂದ್ರ

## ಸಂಕಲ್ಪನಾ –2020

ಭಾರತವನ್ನು ಪರಮ ವೈಭವ ಸ್ಥಿತಿಗೆ ಕೊಂಡೊಯ್ಯುವುದರಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರ ಪಾತ್ರ ಮಹತ್ತ್ವದ್ದು ಎಂಬುದನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೋತ್ಥಾನ ಪರಿಷತ್ ಸಂಕಲ್ಪನಾ 2020 ಎಂಬ ಹೆಸರಿನಲ್ಲಿ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದೆ.

### ಅ) ಶಿಕ್ಷಕರಿಗಾಗಿ

ಶಿಕ್ಷಕರಿಗೆ ಕಾರ್ಯಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಾಗೂ ಗುಣಮಟ್ಟವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಪರಿಣಾಮಕಾರಿಯಾಗಿಸುವ ಸಲುವಾಗಿ ಶಿಕ್ಷಕರಿಗಾಗಿ ವಿವಿಧ ಕಾರ್ಯಾಗಾರ, ಪ್ರಶಿಕ್ಷಣ ವರ್ಗಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**ಯೋಜನಾ ಬೈಠಕ್ :** 2018–19 ಶೈಕ್ಷಣಿಕ ವರ್ಷದ ಯೋಜನಾ ಬೈಠಕ್ ಫೆಬ್ರುವರಿ 25ರಂದು ಬೆಂಗಳೂರಿನ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆಯಿತು.

- ಮುಖ್ಯ ಶಿಕ್ಷಕರು 5 ಅಂಶಗಳ (ಶಿಕ್ಷಣ, ಸಂಸ್ಕಾರ, ಸಾಮಾಜಿಕ ಚಟುವಟಿಕೆಗಳು, ದಾಖಲೆಗಳು, ಮೂಲಭೂತ ಸೌಕರ್ಯಗಳು) ಆಧಾರದ ಮೇಲೆ ಈ ವರ್ಷ ನಡೆಸಬಹುದಾದ 43 ಯೋಜನೆಗಳ ಪಟ್ಟಿ ತಯಾರಿಸಲಾಯಿತು.
- ಶಾಲೆಯು ಸಾಮಾಜಿಕ ಪರಿವರ್ತನಾ ಕೇಂದ್ರವಾಗಿ ಹೇಗೆ ಕಾರ್ಯ ನಿರ್ವಹಿಸಬೇಕು, ಅದಕ್ಕಾಗಿ ನಮ್ಮ ಶಾಲೆಯಲ್ಲಿ ಅಳವಡಿಸಿಕೊಳ್ಳಬೇಕಾದ ಚಟುವಟಿಕೆಗಳು ಹಾಗೂ ಶಾಲೆಗಳ ಸಂಖ್ಯಾತ್ಮಕ ಮತ್ತು ಗುಣಾತ್ಮಕವಾಗಿ ದಾಖಲೆ ನಿರ್ವಹಣೆಯ ಕುರಿತು ತರಬೇತಿ ನೀಡಲಾಯಿತು.

**ಮುಖ್ಯಶಿಕ್ಷಕರ ಬೈಠಕ್ :** ರಾಜ್ಯ ಪಠ್ಯಕ್ರಮ ಶಾಲೆಗಳ ಮುಖ್ಯಶಿಕ್ಷಕರ ಬೈಠಕ್ 2018ರ ಜನವರಿ 11ರಂದು ಹುಬ್ಬಳ್ಳಿಯ ರೇಣುಕಾ ನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆಯಿತು. ಎಲ್ಲ ರಾಷ್ಟ್ರೋತ್ಥಾನ ಶಾಲೆಗಳ ಮುಖ್ಯಶಿಕ್ಷಕರು ಉಪಸ್ಥಿತರಿದ್ದರು.

- ಮಕ್ಕಳ ಗುಣಮಟ್ಟವನ್ನು ಹೆಚ್ಚಿಸಲು ಶಾಲೆಗಳಲ್ಲಿ ಕೈಗೊಳ್ಳಬಹುದಾದ ಚಟುವಟಿಕೆಗಳ (ನಿರಂತರ ಮಾದರಿ ಪರೀಕ್ಷೆ, ವಿದ್ಯಾರ್ಥಿಯ ಸಾಮರ್ಥ್ಯವಾರು ಪಟ್ಟಿ ತಯಾರಿಕೆ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುಂಪುಗಳನ್ನಾಗಿಸಿ ವಿಶೇಷ ತರಗತಿ ಮುಂತಾದವು) ಹಾಗೂ ದಾಖಲಾತಿ ಹೆಚ್ಚಳಕ್ಕಾಗಿ ಮನೆ ಸಂಪರ್ಕ, ಕರಪತ್ರ ಹಾಗೂ ಬೀದಿನಾಟಕ ಮುಂತಾದವುಗಳ ಅಳವಡಿಕೆಗೆ ಕುರಿತು ಚರ್ಚೆ ನಡೆಸಲಾಯಿತು.

**ಶಿಕ್ಷಕರ ಪ್ರಶಿಕ್ಷಣ ವರ್ಗ:** ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ 2017ರ ಮೇ 23ರಿಂದ 27ರ ವರೆಗೆ ಶಿಕ್ಷಕರ ಪ್ರಶಿಕ್ಷಣ ವರ್ಗ ನಡೆಯಿತು.

- ಮಕ್ಕಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಶಿಕ್ಷಕರ ಪಾತ್ರ, ಆದರ್ಶ ಶಿಕ್ಷಕ ಹಾಗೂ ಶಾಲೆ ಮತ್ತು ಮಕ್ಕಳ ಜೊತೆಗೆ ಸಮಾಜದಲ್ಲಿ ಜನಜಾಗೃತಿ ಮೂಡಿಸುವ ಬಗ್ಗೆ ಶಿಕ್ಷಕರು ಹೇಗೆ ತೊಡಗಿಕೊಳ್ಳಬಹುದು ಎಂಬುದನ್ನು ತಿಳಿಸಿಕೊಡಲಾಯಿತು.
- ವಿವಿಧ ಅವಧಿಗಳಲ್ಲಿ ಪಂಚಮುಖಿ ಶಿಕ್ಷಣ, ಭಾರತದ ಶ್ರೇಷ್ಠತೆ–ಸಾಧನೆ, ನಮ್ಮ ಜೀವನ ಪದ್ಧತಿ ಹಾಗೂ ಮಾದರಿ ಶಾಲೆ, ಗುಂಪು ಚಟುವಟಿಕೆಯ ಮಹತ್ತ್ವ, ಶಿಕ್ಷಕರಾಗಿ ಯೋಜನೆ ತಯಾರಿ, ವಿಷಯ ನಾವೀನ್ಯ ಹಾಗೂ ವೃತ್ತಿ ಸಮಸ್ಯೆಗಳ ನಿವಾರಣೆ ಮುಂತಾದ ವಿಷಯಗಳ ಕುರಿತು ಮಾಹಿತಿ ನೀಡಲಾಯಿತು
- ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹ.ರಾ. ನಾಗರಾಜಾಚಾರ್ಯ (ಉತ್ತಮ ಶಿಕ್ಷಕರಲ್ಲಿ ಇರಬೇಕಾದ ಗುಣಗಳು), ಖ್ಯಾತ ವೈದ್ಯರಾದ ಸಮಾಜಸೇವಕಿ ಡಾ. ವಿಜಯ ಲಕ್ಷ್ಮೀ ಬಾಳೆಕುಂದ್ರಿ (ಸಕರಾತ್ಮಕ ಯೋಚನೆಗಳು), ಹಿಂದೂ ಸೇವಾ ಪ್ರತಿಷ್ಠಾನದ ಶಿಶು ಶಿಕ್ಷಣ ಸಂಶೋಧನ ವಿಭಾಗದ ಚಿಂತಕಿ ಅನ್ನಪೂರ್ಣ (ಶಿಶು ಶಿಕ್ಷಣದ ಮಹತ್ತ್ವ) ಅವರು ಆಗಮಿಸಿ ಮಾರ್ಗದರ್ಶನ ಮಾಡಿದರು.

**ಸಂವರ್ಧನಾ ಕಾರ್ಯಾಗಾರ:** ಜೂನ್ 10ರಂದು ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಹಾಗೂ ಆಗಸ್ಟ್ 3 ರಿಂದ 8ರ ತನಕ ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಶಿಕ್ಷಕರಿಗಾಗಿ ಸಂವರ್ಧನಾ ಕಾರ್ಯಕ್ರಮ ನಡೆಯಿತು.

- ಯೋಗತಜ್ಞ ಹಾಗೂ ಆಯುರ್ವೇದ ಪಂಡಿತರಾದ ಡಾ॥ ರಂಗರಾಜು (ಥಣಿಸಂದ್ರ), ಪಾಂಡಿಚೇರಿಯ ಅರವಿಂದೋ ಆಶ್ರಮದ ಶ್ರದ್ಧಾಳು ರಾನಡೆ ಹಾಗೂ ಸಾಮಾಜಿಕ ಕಾರ್ಯಕರ್ತೆ ಅಪರ್ಣ ಆತ್ರೆ (ಒಂದರಿಂದ ಮೂರನೇ ತರಗತಿಯ ಮಕ್ಕಳಿಗೆ ಪರಿಣಾಮಕಾರಿ ಶಿಕ್ಷಣ; ರಾಮಮೂರ್ತಿನಗರ) ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾರ್ಗದರ್ಶನ ಮಾಡಿದರು.

- ಸಂಪನ್ಮೂಲ ವ್ಯಕ್ತಿಗಳು ವಿಷಯವಾರು ಎದುರಾಗುವ ಸಮಸ್ಯೆಗಳು ಹಾಗೂ ಪರಿಹಾರ ಮತ್ತು ಸರಳ ಬೋಧನೆಯ ವಿಧಾನಗಳನ್ನು ತಿಳಿಸಿದರು.

**ಗಣಿತ ವಿಜ್ಞಾನ ಶಿಕ್ಷಕರ ಕಾರ್ಯಾಗಾರ:** ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ 7 ಮಂದಿ ಶಿಕ್ಷಕರು ಕುಪ್ಪಂನ ಅಗಸ್ತ್ಯ ಇಂಟರ್ ನ್ಯಾಷನಲ್ ಫೌಂಡೇಷನ್‌ನಲ್ಲಿ ನಡೆದ ಗಣಿತ ವಿಜ್ಞಾನ ಶಿಕ್ಷಕರ ಕಾರ್ಯಾಗಾರದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಗಣಿತ ವಿಜ್ಞಾನವನ್ನು ಸುಲಭವಾಗಿ ಅರ್ಥೈಸಬಹುದಾದ ಪರಿಕಲ್ಪನೆಗಳ ಬಗೆಗೆ ಚರ್ಚೆ–ವಿಮರ್ಶೆ ನಡೆಸಿದರು.

**ಶಿಕ್ಷಕರ ಪುನಶ್ಚೇತನ ಕಾರ್ಯಾಗಾರ :** ಅಕ್ಟೋಬರ್ 3 ಮತ್ತು 4ರಂದು ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ದಾವಣಗೆರೆ ಹಾಗೂ ಹಗರಿಬೊಮ್ಮನಹಳ್ಳಿಯ ಶಿಕ್ಷಕರಿಗಾಗಿ ಶಿಕ್ಷಕರ ಪುನಶ್ಚೇತನ ಕಾರ್ಯಾಗಾರ ನಡೆಯಿತು.

- ಬೆಂಗಳೂರಿನ ರಾಮಕೃಷ್ಣ ಆಶ್ರಮದ ಪೂಜ್ಯ ಶ್ರೀ ತ್ಯಾಗೇಶ್ವರಾನಂದ ಸ್ವಾಮೀಜಿ ಹಾಗೂ ರಾಣೆಬೆನ್ನೂರಿನ ರಾಮಕೃಷ್ಣ ಆಶ್ರಮದ ಪೂಜ್ಯ ಶ್ರೀ ಪ್ರಕಾಶಾನಂದ ಸ್ವಾಮಿಜೀ ಅವರು ದಿವ್ಯ ಸಾನ್ನಿಧ್ಯ ವಹಿಸಿ ಮಾರ್ಗದರ್ಶನ ಮಾಡಿದರು.



- ಸಾಹಿತಿ ಹಾಗೂ ನಿವೃತ್ತ ಪ್ರಾಂಶುಪಾಲರಾದ ಭಿಕ್ಷಾವರ್ತಿಮಠ್ (ಬೋಧನೆಯಲ್ಲಿ ಸಂವಹನ ಕೌಶಲಗಳು), ದಾವಣಗೆರೆಯ ಸರ್ಕಾರಿ ಶಾಲೆಯ ನಿವೃತ್ತ ಪ್ರಾಂಶುಪಾಲರಾದ ವಾಮದೇವಪ್ಪ (ಕಲಿಕೆ ಎಂದರೇನು?, ಮಗುವಿನ ಕಲಿಕೆ ಹಾಗೂ ಮನೆಯ ವಾತಾವರಣ), ಆರೆಸ್ಸೆಸ್‌ನ ಹಿರಿಯ ಪ್ರಚಾರಕರಾದ ಸು. ರಾಮಣ್ಣ ಮುಂತಾದವರು ಮಾರ್ಗದರ್ಶನ ಮಾಡಿದರು.
- ಅತಿಥಿಗಳು ಹಾಗೂ ದಾವಣಗೆರೆ ಮತ್ತು ಹಗರಿಬೊಮ್ಮನಹಳ್ಳಿಯ ಶಿಕ್ಷಕರು ವಿದ್ಯಾರ್ಥಿಗಳ ಮನೆ ಸಂಪರ್ಕ ಕೈಗೊಂಡರು.

**ಅವಲೋಕನ ಬೈಠಕ್:** ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಿಕ್ಷಕರಿಗಾಗಿ ನವೆಂಬರ್ 25 ಮತ್ತು 26ರಂದು ಶಿರಸಿಯ ಸೋಂದೆ ಸ್ವರ್ಣವಲ್ಲಿ ಮಠದ ಯಾತ್ರಾ ನಿವಾಸದಲ್ಲಿ ಅವಲೋಕನ ಬೈಠಕ್ ನಡೆಯಿತು.

ಮಗುವಿನ ಸರ್ವತೋಮುಖ ವಿಕಾಸಕ್ಕೆ ಪೂರಕ ವಾರ್ಷಿಕ ಯೋಜನೆ, ಕೌಶಲವೃದ್ಧಿ ಯೋಜನೆ ಹಾಗೂ ಉಪಕರಣಗಳ ಮೂಲಕ ಪಾಠ್ಯಬೋಧನೆ ಮುಂತಾದ ವಿಷಯಗಳ ಕುರಿತು ಚರ್ಚಿಸಲಾಯಿತು.

**ಇಂಗ್ಲಿಷ್ ಕಲಿಕಾ ಶಿಬಿರ:** ರಾಜ್ಯ ಪಠ್ಯಕ್ರಮ ಶಾಲೆಗಳ ಶಿಕ್ಷಕರಿಗಾಗಿ ಮೇ 8ರಿಂದ 22ರ ತನಕ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ English Communication Skills ತರಬೇತಿ ಶಿಬಿರ ನಡೆಯಿತು.

- ವಿವಿಧ ಅವಧಿಗಳಲ್ಲಿ ನಡೆದ ಈ ಶಿಬಿರದಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ವಿವಿಧ ವಿದ್ಯಾಲಯಗಳ 48 ಇಂಗ್ಲಿಷ್ ಶಿಕ್ಷಕ/ಕಿಯರು ಭಾಗವಹಿಸಿದ್ದರು.
- ವಿಷಯ ತಜ್ಞರು ಮಾರ್ಗದರ್ಶಕರಾಗಿ ಆಗಮಿಸಿ ಇಂಗ್ಲಿಷ್ ಭಾಷೆಯನ್ನು ಪರಿಣಾಮಕಾರಿಯಾಗಿ ಬೋಧಿಸುವ ಹತ್ತಾರು ವಿಷಯಗಳ ಕುರಿತು ಮಾರ್ಗದರ್ಶನ ಮಾಡಿದರು.
- ಚರ್ಚಾಸ್ಪರ್ಧೆ, ಪತ್ರ ಬರೆಯುವುದು, ಆಶುಭಾಷಣ, ನಾಟಕ ರಚನೆ ಮತ್ತು ಪ್ರದರ್ಶನ ಮುಂತಾದ ಚಟುವಟಿಕೆಯ ಮೂಲಕ ಇಂಗ್ಲಿಷ್ ಕಲಿಕೆಯ ಕುರಿತು ತರಬೇತಿ ನೀಡಲಾಯಿತು.

## ಆ) ಪೋಷಕರಿಗಾಗಿ

ಶಾಲೆ ಹಾಗೂ ಶಾಲಾ ಸಂಬಂಧಿತರ ನಡುವೆ ಕೌಟುಂಬಿಕ ಮನೋಭಾವ ಮೂಡಿಸುವ ಸಲುವಾಗಿ ಹಾಗೂ ಮಕ್ಕಳ ವಿಕಾಸಕ್ಕೆ ಶಿಕ್ಷಕರು ಹಾಗೂ ಪೋಷಕರು

ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಬೇಕು ಎಂಬ ಚಿಂತನೆಯಿಂದ ಪರಿಷತ್ ಕಾರ್ಯನಿರ್ವಹಿಸುತ್ತಿದೆ. ಇದಕ್ಕಾಗಿ ಪೋಷಕರೊಂದಿಗೆ ನಿರಂತರ ಸಂಪರ್ಕವಿಟ್ಟುಕೊಳ್ಳುವ ವಿವಿಧ ಚಟುವಟಿಕೆಗಳನ್ನು ರಾಷ್ಟ್ರೋತ್ಥಾನ ಪರಿಷತ್‌ನ ಶೈಕ್ಷಣಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ನಡೆಸಲಾಗುತ್ತಿದೆ.

**ಪೋಷಕರ ಸಭೆ:** ಶಾಲಾ ಚಟುವಟಿಕೆಗಳು ಹಾಗೂ ಮಕ್ಕಳ ವಿದ್ಯಾಭ್ಯಾಸದ ಗುಣಮಟ್ಟವನ್ನು ಪರಿಚಯಿಸುವ ಸಲುವಾಗಿ ನಿರ್ದಿಷ್ಟ ದಿನಗಳಿಗೊಮ್ಮೆ ರಾಷ್ಟ್ರೋತ್ಥಾನ ಪರಿಷತ್‌ನ ವಿವಿಧ ವಿದ್ಯಾಕೇಂದ್ರಗಳಲ್ಲಿ ಪೋಷಕರ ಸಭೆಯನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ.

**ಪೋಷಕರ ರಕ್ತದಾನ ಶಿಬಿರ:** ಹಲವು ಶಾಲೆಗಳಲ್ಲಿ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಪೋಷಕರು ಹಾಗೂ ಸಾರ್ವಜನಿಕರು ರಕ್ತದಾನ ಮಾಡುತ್ತಾರೆ. ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆದ ಶಿಬಿರದಲ್ಲಿ (ಜುಲೈ 29) ಒಟ್ಟು 303 ಮಂದಿ ರಕ್ತದಾನ ಮಾಡಿದರು.

**ಪೋಷಕರ ಅಭ್ಯಾಸ ವರ್ಗ :** ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಲಯದಲ್ಲಿ 2017ರ ಏಪ್ರಿಲ್‌ನಲ್ಲಿ ಪೋಷಕರ ಅಭ್ಯಾಸ ವರ್ಗ ನಡೆಯಿತು. ಮಕ್ಕಳ ಪ್ರಗತಿಯಲ್ಲಿ ಹಾಗೂ ಅವರ ಆರೋಗ್ಯ ಕಾಪಾಡಲು ಪೋಷಕರು ಗಮನಿಸಬೇಕಾದ ವಿಷಯಗಳ ಬಗೆಗೆ ಮಾಹಿತಿ ನೀಡಲಾಯಿತು. ಸುಮಾರು 150ಕ್ಕೂ ಹೆಚ್ಚು ಪಾಲಕರು ಭಾಗವಹಿಸಿದರು.



**ಪೋಷಕರ ಪುನಶ್ಚೇತನ ಶಿಬಿರ:** ಜೂನ್ 3ರಂದು ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಪೋಷಕರ ಪುನಶ್ಚೇತನ ಶಿಬಿರ ನಡೆಯಿತು. ತರಗತಿವಾರು ಗುಂಪುಗಳಲ್ಲಿ ನಡೆದ ಶಿಬಿರದಲ್ಲಿ ಪಾಠ ಮತ್ತು ಪಠ್ಯೇತರ ಕಲಿಕೆಯಲ್ಲಿ ಪಂಚಮುಖೀ ಶಿಕ್ಷಣದ ಅಳವಡಿಕೆಯ ಕುರಿತು ಮಾಹಿತಿ ನೀಡಲಾಯಿತು.

**ಮಾತೃಮಂದಿರ :** ವಿದ್ಯಾಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿರುವವರು ಹಾಗೂ ಇತರ ಮಹಿಳೆಯರಲ್ಲಿ ಸಾಮಾಜಿಕ ಕಳಕಳಿ ಮೂಡಿಸುವ ಸಲುವಾಗಿ ಕೆಲ

# ಹೊಳೆಹೊನ್ನೂರಿನ ಶಿಶುಮಂದಿರ

ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ವಿದ್ಯಾಲಯವು ಕೇವಲ ಶಾಲಾ ಚಟುವಟಿಕೆಗಳನ್ನು ಮಾತ್ರ ನಡೆಸದೇ ಸುತ್ತಮುತ್ತಲಿನ ಗ್ರಾಮಗಳ ವಿಕಾಸದ ದೃಷ್ಟಿಯಿಂದ ವಿವಿಧ ಚಟುವಟಿಕೆಗಳನ್ನು ನಡೆಸುತ್ತಿದೆ. ಇದರಲ್ಲಿ ಪ್ರಮುಖವಾದದ್ದು 'ಶಿಶುಮಂದಿರ'. ಸುಮಾರು 8 ಗ್ರಾಮಗಳಲ್ಲಿ ಈಗಾಗಲೇ ಶಿಶುಮಂದಿರದ ಚಟುವಟಿಕೆ ನಡೆಯುತ್ತಿದೆ. ಇದನ್ನು ಇನ್ನೂ 8 ಗ್ರಾಮಗಳಿಗೆ ವಿಸ್ತರಿಸುವ ಪ್ರಯತ್ನ ನಡೆದಿದೆ. ಇದಕ್ಕಾಗಿ ಆಯಾ ಊರಿನ ಮಹಿಳೆಯರನ್ನು ಗುರುತಿಸಿ ಅವರಿಗೆ ತರಬೇತಿ ನೀಡಲಾಗಿದೆ. ಶಿಶುಮಂದಿರವನ್ನೇ ಕೇಂದ್ರವಾಗಿಸಿಕೊಂಡು ಗ್ರಾಮದ ಜನರಲ್ಲಿ ಗ್ರಾಮವಿಕಾಸದ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

## ಶಿಶುಮಂದಿರ ಹೇಗಿರುತ್ತದೆ?

ಭದ್ರಾ ನದೀದಂಡೆಯ ಮೇಲಿರುವ ಹೊಳೆಹೊನ್ನೂರಿನಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಶೈಕ್ಷಣಿಕ ಉಪಕ್ರಮಗಳು ಆರಂಭಗೊಂಡದ್ದು ಶಿಶುಮಂದಿರದ ಸ್ಥಾಪನೆಯಿಂದ. ಸುಮಾರು 1987ರಲ್ಲಿ.

ಆಟದ ಜೊತೆಗೆ ಪಾಠ ಹೇಳಿಕೊಡುವುದು ಶಿಶುಮಂದಿರದ ಕ್ರಮ. ಎರಡೂವರೆ ವರ್ಷದಿಂದ ಐದೂವರೆ ವರ್ಷದವರೆಗಿನ ಮಕ್ಕಳು ಇಲ್ಲಿ

ಕಲಿಯುತ್ತಾರೆ. ಉಷಾವರ್ಗ, ಅರುಣವರ್ಗ ಹಾಗೂ ಉದಯವರ್ಗ ಎಂದು ಆ ಮಕ್ಕಳ ಸುಮಾರಾದ ವಿಭಜನೆ. ಎರಡು ವರ್ಷ ಆ ಮಕ್ಕಳಿಂದ ಏನನ್ನೂ ಬರೆಸುವುದಿಲ್ಲ. ಭಾಷಾ ಬೆಳವಣಿಗೆಯ ಹಂತ ಪರಿಪೂರ್ಣ (ಪರ್ಫೆಕ್ಟ್) ಆದ ಅನಂತರವೇ ಬರವಣಿಗೆ. ಇಂಗ್ಲಿಷ್ ಮಾಧ್ಯಮದವರು 'ನೀವು ಮೊದಲು ಏನೂ ಬರೆಸುವುದಿಲ್ಲವೇ?' ಎಂದು ಕೇಳುತ್ತಾರಂತೆ. ಆದರೆ ಇವರ ಕ್ರಮದಲ್ಲಿ ಕಲಿಯುವ ಮಕ್ಕಳು ಒಂದನೇ ತರಗತಿಗೆ ಹೋಗುವಾಗ ಇವರಿಗೆ ಸ್ಪಷ್ಟವಾದ ಉಚ್ಚಾರಣೆ, ಬರವಣಿಗೆ, ಕೂಡಿಸುವುದು, ಕಳೆಯುವುದು, ಗುಣಾಕಾರ, ಭಾಗಾಕಾರ, ಮಗ್ಗಿ ಎಲ್ಲವೂ ಬರುತ್ತದೆ.

ಮಕ್ಕಳ ಸಮಗ್ರ ವಿಕಾಸ ಆಗುವುದು ಖಚಿತ. ದೈಹಿಕ, ಮಾನಸಿಕ. ಬೌದ್ಧಿಕ, ಆಧ್ಯಾತ್ಮಿಕ ಮುಂತಾಗಿ ಮಕ್ಕಳಿಗೆ ಏನೇನು ಆಗಬೇಕು – ಇದು ಒಂದೊಂದಕ್ಕೂ ಇಲ್ಲಿ ಪ್ರತ್ಯೇಕ ಚಟುವಟಿಕೆಗಳಿವೆ. ಒಟ್ಟು ವಿಕಾಸಕ್ಕೆ 93 ಕೌಶಲ(skill)ಗಳ ಪ್ರತ್ಯೇಕ ಚಟುವಟಿಕೆಗಳಿವೆ.

ಶಿಕ್ಷಣ ಇಲಾಖೆಯ ಅಧಿಕಾರಿಗಳು, ಬಿಇಓ, ಡಿಡಿಪಿಐ, ಬಿ.ಎಡ್. ಕಾಲೇಜಿನವರು – ಹೀಗೆ ಹಲವರು ಬಂದು ನೋಡಿಕೊಂಡು ಹೋಗಿದ್ದಾರೆ. ಹಲವರು ಅಳವಡಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಶಿಕ್ಷಣ ಇಲಾಖೆಯ 'ನಲಿ–ಕಲಿ' ವಿಧಾನವನ್ನು ಆರಂಭಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಈ ಶಾಲೆಗೆ ಬಂದು ನೋಡಿ ವರದಿ ತಯಾರಿಸಿಕೊಂಡು ಹೋಗಿದ್ದರು.

ವಿದ್ಯಾಲಯ/ಕೇಂದ್ರಗಳಲ್ಲಿ ಮಾತೃಮಂದಿರಗಳು ಕಾರ್ಯನಿರ್ವಹಿಸುತ್ತಿವೆ. ಹಗರಿಬೊಮ್ಮನಹಳ್ಳಿಯ ಶಾರದಾ ಮತ್ತು ಸರಸ್ವತಿ ಶಿಶುಮಂದಿರಗಳ ಮಾತೃಮಂದಿರವನ್ನು ಯೋಗೇಂದ್ರ ಗೂರೂಜೀ ಬಾಬಾ ಅವರು ಉದ್ಘಾಟಿಸಿ ಮಾರ್ಗದರ್ಶನ ಮಾಡಿದರು. ಪ್ರತೀ ತಿಂಗಳು ವಿವಿಧ ವಿಷಯಗಳ ಕುರಿತು ಮಾತೆಯರಿಗೆ ಮಾರ್ಗದರ್ಶನ ಮಾಡಲಾಗುತ್ತಿದೆ.

### ಇ) ಹಳೆ ವಿದ್ಯಾರ್ಥಿಗಳಿಗಾಗಿ

**ಹಳೆ ವಿದ್ಯಾರ್ಥಿಗಳ ಕೂಟ (ರೂಟ್ಸ್):** ರಾಷ್ಟ್ರೋತ್ಥಾನದ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳು ಇಂದು ಸಮಾಜದ ಅನೇಕ ಪ್ರತಿಷ್ಠಿತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಹಲವು ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂತಹ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸುವ ಸಲುವಾಗಿ ಆಯಾ ಶಾಲೆಗಳಲ್ಲಿ ರೂಟ್ಸ್ (Roots ರಾಷ್ಟ್ರೋತ್ಥಾನ ಓಲ್ಡ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ಫಾರ್ ಟ್ರಾನ್ಸ್‌ಫಾರ್ಮಿಂಗ್ ಸೊಸೈಟಿ) ಸಮಾವೇಶಗಳನ್ನು ನಡೆಸಲಾಗುತ್ತಿದೆ. ತನ್ಮೂಲಕ ಹಳೆವಿದ್ಯಾರ್ಥಿಗಳನ್ನು ಶಾಲೆಯ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲಾಗುತ್ತಿದೆ.

ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ರೂಟ್ಸ್ ಕಾರ್ಯಕ್ರಮಕ್ಕೆ ಸಸಿಗಳನ್ನು ನೆಡುವ ಮೂಲಕ ಚಾಲನೆ ನೀಡಲಾಯಿತು. ಶಾಲೆ ಯೋಜಿಸಿರುವ ಗ್ರಾಮೋತ್ಥಾನ ಚಟುವಟಿಕೆಯಲ್ಲಿ ಕೈಜೋಡಿಸಲು ಅವರು ನಿರ್ಧರಿಸಿದರು.

### ಈ) ವಿದ್ಯಾರ್ಥಿಗಳಿಗಾಗಿ

**'ಸೃಷ್ಟಿ – ಸಂಚಾರಿ ಶಿಬಿರ' :** ವಿದ್ಯಾರ್ಥಿಗಳಿಗೆ ಗ್ರಾಮ ಜೀವನದ ಬಗೆಗೆ ಅರಿವು ಮೂಡಿಸುವ ಸಲುವಾಗಿ ಅಕ್ಟೋಬರ್ 11 ರಿಂದ 17ರ ವರೆಗೆ 7 ದಿನಗಳ ಕಾಲ ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಸೃಷ್ಟಿ ಸಂಚಾರಿ ಶಿಬಿರವನ್ನು ಆಯೋಜಿಸಲಾಯಿತು. ಶಿಬಿರದಲ್ಲಿ ರಾಷ್ಟ್ರೋತ್ಥಾನ ಪರಿಷತ್‌ನ ವಿವಿಧ ಪ್ರೌಢ ಶಾಲೆಗಳ ಆಯ್ದ 54 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

- ವಿದ್ಯಾರ್ಥಿಗಳಿಗೆ 7 ದಿನಗಳ ಕಾಲ 7 ಗ್ರಾಮದ ವಿವಿಧ ಮನೆಗಳಲ್ಲಿ ವಸತಿಯ ವ್ಯವಸ್ಥೆ ಮಾಡಲಾಯಿತು.
- ವಿದ್ಯಾರ್ಥಿಗಳು 5 ಗುಂಪುಗಳಲ್ಲಿ ಸುತ್ತಮುತ್ತಲಿನ 7 ಗ್ರಾಮಗಳಿಗೆ ಕಾಲ್ನಡಿಗೆಯಲ್ಲಿ ಭೇಟಿ ನೀಡಿದರು. ಅಲ್ಲಿನ ಪರಿಸರವನ್ನು ವೀಕ್ಷಿಸಿ ಮಾಹಿತಿ ಪಡೆದರು. ಒಟ್ಟು 76 ಕಿ.ಮೀ. ಸಂಚಾರ, 240 ಮನೆಗಳ ಸಂಪರ್ಕ ಮಾಡಿದರು.
- ದೇವಸ್ಥಾನ, ಭಜನಾ ಮಂದಿರ ಮುಂತಾದ ಧಾರ್ಮಿಕ ಕೇಂದ್ರಗಳಲ್ಲಿ ಜಾಗೃತಿ ಕಾರ್ಯಕ್ರಮಗಳು ನಡೆದವು. ಗ್ರಾಮಗಳಲ್ಲಿ ವಿವಿಧ ಮಹಾಪುರುಷರ ಜೀವನವನ್ನು ಪರಿಚಯಿಸುವ ನಾಟಕ, ಚೀನಾ ವಸ್ತುಗಳ ಬಹಿಷ್ಕಾರ ಜಾಗೃತಿ ಕಾರ್ಯಕ್ರಮ ನಡೆಯಿತು.

## ಕೀರ್ತಿ ತಂದ ಪ್ರತಿಭೆಗಳು

- **ಜೆಜಿಆರ್‌ವಿಕೆಗೆ ಅಂತಾರಾಷ್ಟ್ರೀಯ ಪ್ರಶಸ್ತಿ :** ನೇಪಾಳದಲ್ಲಿ ನಡೆದ ಅಂತಾರಾಷ್ಟ್ರೀಯ ಶಾಟ್‌ಪುಟ್ ಮತ್ತು ಡಿಸ್ಕಸ್ ಎಸೆತ ಸ್ಪರ್ಧೆಯಲ್ಲಿ ರಾಮಮೂರ್ತಿನಗರ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ (ಜೆಜಿಆರ್‌ವಿಕೆ)ದ 10ನೇ ತರಗತಿ ವಿದ್ಯಾರ್ಥಿ ತೇಜಸ್ ಚಿನ್ನದ ಪದಕವನ್ನು ಗಳಿಸಿದ್ದಾರೆ. ಇಂಟರ್ ನ್ಯಾಷನಲ್ ಸ್ಟೂಡೆಂಟ್ಸ್ ಗೇಮ್ಸ್ ಫೆಡರೇಷನ್ ಆಯೋಜಿಸಿದ್ದ ಈ ಸ್ಪರ್ಧೆಯಲ್ಲಿ 10ಕ್ಕೂ ಅಧಿಕ ದೇಶಗಳು ಭಾಗವಹಿಸಿದ್ದವು.
- **ಅಂತಾರಾಷ್ಟ್ರೀಯ ಒಲಂಪಿಯಾಡ್‌ನಲ್ಲಿ ಚಿನ್ನ:** ಇಂಟರ್‌ನ್ಯಾಷನಲ್ ಇಂಗ್ಲಿಷ್ ಒಲಂಪಿಯಾಡ್‌ನ ಪರೀಕ್ಷೆಯಲ್ಲಿ ಬನಶಂಕರಿಯ ಇಬ್ಬರು ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಥಮ ರ್‍ಯಾಂಕ್ ಪಡೆದು ಚಿನ್ನದ ಪದಕ ಹಾಗೂ ಸಾವಿರ ರೂ. ಬಹುಮಾನವನ್ನು ಪಡೆದಿದ್ದಾರೆ.
- **ಅಂತಾರಾಷ್ಟ್ರೀಯ ಯೋಗ ಸ್ಪರ್ಧೆಯಲ್ಲಿ ಕಂಚಿನ ಪದಕ :** ಧರ್ಮಸ್ಥಳದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ಸ್ಪರ್ಧೆಯ ರಿದಮಿಕ್ ವಿಭಾಗದಲ್ಲಿ ರಾಮಮೂರ್ತಿನಗರದ ಜೆಜಿಆರ್‌ವಿಕೆ ವಿದ್ಯಾರ್ಥಿನಿ ಗ್ರೀಷ್ಮಾ ಕಂಚಿನ ಪದಕ ಗಳಿಸಿದರು. ಇದು ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದ ಶಾಲೆಯ ಮೊಟ್ಟಮೊದಲ ಗೌರವ. ಸ್ಪರ್ಧೆಯಲ್ಲಿ ಪದಕ ಗಳಿಸುವ ಮೂಲಕ ಗ್ರೀಷ್ಮಾ ಪ್ರತಿಷ್ಠಿತ ಏಷ್ಯನ್ ಕಪ್‌ನಲ್ಲಿ ಸ್ಪರ್ಧಿಸಲು ಅರ್ಹತೆ ಪಡೆದಿದ್ದಾರೆ.







- **ರಾಷ್ಟ್ರಮಟ್ಟದ ಬಾಸ್ಕೆಟ್‌ಬಾಲ್‌ನಲ್ಲಿ ತೃತೀಯ :** ಉತ್ತರಾಖಂಡದ ನೈನಿತಾಲ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಬಾಸ್ಕೆಟ್‌ಬಾಲ್ ಪಂದ್ಯಾವಳಿಯಲ್ಲಿ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರವು ತೃತೀಯ ಸ್ಥಾನ ಗಳಿಸಿದೆ. ಅಂತಾರಾಷ್ಟ್ರೀಯ ಕುಸ್ತಿಪಟು ಜೋಗೇಂದರ್ ಕುಮಾರ್ ಅವರು ಪ್ರಶಸ್ತಿ ಪತ್ರ ಹಾಗೂ ಪದಕಗಳನ್ನು ನೀಡಿ ಗೌರವಿಸಿದರು.
- ಬೆಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳ ತಂಡ ಪ್ರಥಮ ಸ್ಥಾನವನ್ನು ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದೆ.



- ಕೇರಳದ ಎರ್ನಾಕುಲಂನಲ್ಲಿ ನಡೆದ ಸಿಬಿಎಸ್‌ಇ ಶಾಲೆಗಳ ಅಂತರರಾಜ್ಯ ಕ್ರೀಡಾಕೂಟದ ಜೂಡೋ ಕ್ರೀಡೆಯಲ್ಲಿ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿನಿ ಶ್ರೇಯಾ ಯು. ವರ್ಣೇಕರ್ ಕರ್ನಾಟಕವನ್ನು ಪ್ರತಿನಿಧಿಸಿ ತೃತೀಯ ಸ್ಥಾನ ಪಡೆದರು. ಹುಬ್ಬಳ್ಳಿಯಲ್ಲಿ ನಡೆದ ದಕ್ಷಿಣವಲಯ ಜೂಡೋ ಸ್ಪರ್ಧೆಯಲ್ಲಿ ಪ್ರಥಮ ಹಾಗೂ 15ನೇ ಆಲ್ ಇಂಡಿಯಾ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ದ್ವಿತೀಯ ಸ್ಥಾನವನ್ನು ಶ್ರೇಯಾ ಪಡೆದಿದ್ದಾರೆ.
- **ಬನಶಂಕರಿ ವಿದ್ಯಾಕೇಂದ್ರಕ್ಕೆ ASSOCHM ಗೌರವ:** ಕರ್ನಾಟಕದ ಪ್ರತಿಷ್ಠಿತ ಅಸೋಸಿಯೇಷನ್ ಛೇಂಬರ್ ಆಫ್ ಕಾಮರ್ಸ್ ನೀಡುವ ASSOCHAM Parent of Innovation ಗೌರವಕ್ಕೆ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಬನಶಂಕರಿಯು ಪಾತ್ರವಾಗಿದೆ. ಕರ್ನಾಟಕದ ಘನತೆವೆತ್ತ ರಾಜ್ಯಪಾಲರಾದ ವಾಜುಭಾಯಿ ವಾಲಾ ಅವರು ಪಾರಿತೋಷಕವನ್ನು ನೀಡಿದರು. ಪಠ್ಯೇತರ ಚಟುವಟಿಕೆಯ ಮೂಲಕ ವ್ಯಕ್ತಿತ್ವ ವಿಕಾಸ ಸಲುವಾಗಿ ಆಗಸ್ಟ್ 26ರಂದು ನಡೆದ ಕಾರ್ಯಕ್ರಮದಲ್ಲಿ 300 ಶಾಲೆಗಳು ಭಾಗವಹಿಸಿದ್ದವು.



- **ರಾಷ್ಟ್ರಮಟ್ಟಕ್ಕೆ ಆಯ್ಕೆ:** ಆಂಧ್ರಪ್ರದೇಶದ ವಿಜಯವಾಡದಲ್ಲಿ ನಡೆದ ವಿದ್ಯಾಭಾರತಿಯ ಕ್ಷೇತ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಬಾಸ್ಕೆಟ್‌ಬಾಲ್ ತಂಡವು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದೆ.
- ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ಪ್ರೌಢಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಭಾಗೀರಥಿ ಅವರು ಸೆ. 21ರಂದು ಬಳ್ಳಾರಿಯಲ್ಲಿ ನಡೆದ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.
- ಸೇಡಂನಲ್ಲಿ ನಡೆದ ವಿದ್ಯಾಭಾರತಿಯ ಪ್ರಾಂತೀಯ ಮಟ್ಟದ ಕ್ರೀಡಾಕೂಟದಲ್ಲಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕಬಡ್ಡಿ ತಂಡವು ಪ್ರಥಮ ಸ್ಥಾನ ಪಡೆದು ಕ್ಷೇತ್ರೀಯ ಮಟ್ಟಕ್ಕೆ ಆಯ್ಕೆಯಾಗಿದೆ.
- **ರಾಷ್ಟ್ರಮಟ್ಟದಲ್ಲಿ ಸ್ವರ್ಣ ಪದಕ :** ಹರಿಯಾಣದ ಸೋನಿಪತ್‌ನಲ್ಲಿರುವ ರಿಷಿಕುಲ್ ವಿದ್ಯಾಪೀಠದಲ್ಲಿ ಅಕ್ಟೋಬರ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಈಜು ಸ್ಪರ್ಧೆಯಲ್ಲಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಆರುಷಿ ಮಂಜುನಾಥ್ (100 ಮೀಟರ್ ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆ) ಅವರು ಸ್ವರ್ಣ ಪದಕ ಗಳಿಸಿದ್ದಾರೆ.
- ಮಹಾರಾಷ್ಟ್ರದ ಸ್ವಾಮಿ ಅವಧೇಶಾನಂದ ಪಬ್ಲಿಕ್ ಸ್ಕೂಲ್‌ನಲ್ಲಿ ಸೆ. 18ರಿಂದ 20ರ ತನಕ ನಡೆದ ಸಿ.ಬಿ.ಎಸ್.ಇ. ಶಾಲೆಗಳ ದಕ್ಷಿಣ ವಲಯ ಈಜು ಸ್ಪರ್ಧೆಯಲ್ಲಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ನವನೀತ್ ಗೌಡ 3 ಚಿನ್ನದ ಪದಕ (11 ವರ್ಷದ ಒಳಗೆ) ಗಳಿಸುವ ಮೂಲಕ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿ ಪಡೆದಿದ್ದಾರೆ.
- ಬೆಂಗಳೂರಿನ ಸೌಂದರ್ಯ ಸೆಂಟ್ರಲ್ ಸ್ಕೂಲ್ (ಸೆ. 1), ಬೆಂಗಳೂರಿನ ಕೊತ್ತನೂರಿ ಏಗೋನ್ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ (ಡಿ. 3) ನಡೆದ ಅಂತರ್ ಶಾಲಾ ಈಜುಸ್ಪರ್ಧೆಯಲ್ಲಿ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರವು ಸಮಗ್ರ ಪ್ರಶಸ್ತಿಯನ್ನು ಪಡೆದಿದೆ.
- **ಚಿತ್ರಕಲೆಯಲ್ಲಿ ಪ್ರಥಮ:** ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ಧಾರವಾಡದ ಗರಗ ಜಯಕೀರ್ತಿ ಶಾಲೆಯಲ್ಲಿ ಜನವರಿಯಲ್ಲಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಪ್ರಥಮ ಸ್ಥಾನವನ್ನು ಪಡೆದಿದೆ.
- ವಿದ್ಯಾಭಾರತಿಯ ಪ್ರಾಂತ ಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪೃಥ್ವಿ ಹಿರೇಮಠ ಅವರು ಗಣಿತ ಪ್ರಯೋಗದಲ್ಲಿ ಪ್ರಥಮ ಸ್ಥಾನ ಗಳಿಸಿ, ಹೈದರಾಬಾದ್‌ನಲ್ಲಿ ನಡೆಯುವ ಕ್ಷೇತ್ರೀಯ ಮಟ್ಟದ ಜ್ಞಾನ ವಿಜ್ಞಾನ ಮೇಳಕ್ಕೆ ಆಯ್ಕೆಯಾಗಿದ್ದಾರೆ.
- ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ಮಂಡಿಸಿದ 'ಹಬ್ಬಗಳ ವೈಶಿಷ್ಟ್ಯ' ಪ್ರಬಂಧ ಹಾಗೂ ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನಲ್ಲಿ ನಡೆದ ರಾಜ್ಯ ಮಟ್ಟದ 24ನೇ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ಮಂಡಿಸಿದ ಪ್ರಬಂಧವು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದೆ.
- ಭಾರತ ಸಂಸ್ಕೃತಿ ಪ್ರತಿಷ್ಠಾನದ ವತಿಯಿಂದ ನಡೆದ ರಾಮಾಯಣ ಮತ್ತು ಮಹಾಭಾರತ ಸ್ಪರ್ಧೆಯಲ್ಲಿ ಧಾರವಾಡ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಜಿಲ್ಲೆಗೆ ಪ್ರಥಮ ಹಾಗೂ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ಪ್ರೌಢಶಾಲೆಯ ಸಿಂಧು ಎಸ್. ಬಳ್ಳಾರಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ.

## ವಿಶೇಷ ಕಾರ್ಯಕ್ರಮಗಳು

### ಸೈನಿಕರಿಗೆ ನಮನ

- ಮೃತ ಸೈನಿಕರ ಧನಸಹಾಯ ಮಾಡುವುದಕ್ಕಾಗಿ ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ 'ಸೈನಿಕ ನಿಧಿ'ಯನ್ನು ಪ್ರಾರಂಭಿಸಲಾಗಿದೆ. ಭಾರತೀಯ ಸೇನೆಯಲ್ಲಿ 33 ವರ್ಷಗಳ ಕಾಲ ವೈದ್ಯರಾಗಿ ಸೇವೆಸಲ್ಲಿಸಿದ ಡಾ. ಕರ್ನಲ್ ಎಸ್.ಎಸ್. ಬನ್ನೂರು ಅವರು ಉದ್ಘಾಟಿಸಿದರು.

- ಕಾರ್ಗಿಲ್ ವಿಜಯೋತ್ಸವವಾದ ಜುಲೈ 13ರಂದು ರಾಷ್ಟ್ರೋತ್ಥಾನದ ಹಲವು ವಿದ್ಯಾಲಯ/ಕೇಂದ್ರಗಳಲ್ಲಿ ಸೈನಿಕರಿಗೆ ನಮನ ಹಾಗೂ ಗೌರವ ಸಲ್ಲಿಸುವ ಕಾರ್ಯಕ್ರಮಗಳು ನಡೆಯಿತು. ಗ್ರೂಪ್ ದೇಶ್ ಸಂಸ್ಥೆಯ ಸಹಸಂಸ್ಥಾಪಕರಾದ ವಿಕಾಸ್ ಮನ್ಹಸ್, ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಸೇವೆಸಲ್ಲಿಸಿದ್ದ ಕರ್ನಲ್ ಎಂ.ಬಿ. ರವೀಂದ್ರನಾಥ (ರಾಮಮೂರ್ತಿನಗರ), ನಿವೃತ್ತ ಸೈನಿಕ ಪರಶುರಾಮ್ (ದಾವಣಗೆರೆಯ ವಿದ್ಯಾಕೇಂದ್ರ), ಸಿಸ್ಟರ್ ನಿವೇದಿತಾ ಪ್ರತಿಷ್ಠಾನದ ಪೂರ್ಣಾವಧಿ ಕಾರ್ಯಕರ್ತೆ ಉಷಾ ಜಗದೀಶ್ (ಬನಶಂಕರಿ), ಸೇನಾಪಡೆಯಲ್ಲಿ ಕ್ಯಾಪ್ಟನ್ ಆಗಿರುವ ಶಾಲೆಯ ಹಳೆ ವಿದ್ಯಾರ್ಥಿ ಕ್ಯಾ. ಹರ್ಷ (ಹಗರಿಬೊಮ್ಮಹಳ್ಳಿಯ ಶಾರದಾ ವಿದ್ಯಾಮಂದಿರ), ದೇಶ್ ಸಂಸ್ಥೆಯ ಸದಸ್ಯ ದೀಪಕ್ ಸುರಾನಾ (ರಾಮಮೂರ್ತಿನಗರ) ಮುಂತಾದವರು ಆಗಮಿಸಿ ಸೈನಿಕರ ಜೀವನಗಾಥೆಯನ್ನು ತಿಳಿಸಿದರು. ಸೇನೆಗೆ ಸೇರಿ ದೇಶಸೇವೆ ಮಾಡುವಂತೆ ಕರೆ ನೀಡಿದರು.

- **ಸೈನಿಕರಿಗೆ ಸಂಮಾನ:** ಧಾರವಾಡದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ, ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ ಮಂಜುನಾಥ, ಪ್ರಕಾಶಗೌಡ ಪಾಟೀಲ, ದಯಾನಂದ ಕಾಮತೆ, ಶಿವಾಜಿ ಮಡಿವಾಳ ಅವರನ್ನು ಸಂಮಾನಿಸಲಾಯಿತು.

### ಸೀಡ್ ಬಾಲ್ ತಯಾರಿ

ಪರಿಸರ ಜಾಗೃತಿಯ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಅವರ ಭಾಗಿದಾರತ್ವವನ್ನು ತಿಳಿಸಿಕೊಡುವ ಸರಳ ವಿಧಾನವಾಗಿ ಸೀಡ್ ಬಾಲ್ ತಯಾರಿಸುವ ಚಟುವಟಿಕೆ ಇದೀಗ ಸಾರ್ವಜನಿಕ ಅಭಿಯಾನದ ಸ್ವರೂಪ ಪಡೆದುಕೊಂಡಿದೆ. ಮಣ್ಣು ಹಾಗೂ ಸೆಗಣಿಯನ್ನು ಚೆನ್ನಾಗಿ ಮಿಶ್ರಣಗೊಳಿಸಿ ಅದರಲ್ಲಿ ಬೀಜಗಳನ್ನು ಹಾಕಿ ಉಂಡೆಯ ರೂಪಕ್ಕೆ ತಂದು ಬಿಸಿಲಿನಲ್ಲಿ ಒಣಗಿಸಲಾಗುತ್ತದೆ. ಮಳೆಗಾಲದ ಪ್ರಾರಂಭಕ್ಕೆ ಮುನ್ನ ಈ ಬೀಜದ ಉಂಡೆಯನ್ನು ಖಾಲಿ ಜಾಗಗಳಲ್ಲಿ ಎಸೆಯಲಾಗುತ್ತದೆ. ಮಳೆಗಾಲದ ಮಳೆಗೆ ಈ ಬೀಜ ಮೊಳಕೆಯೊಡೆದು ಗಿಡವಾಗಿ ಬೆಳೆಯುತ್ತದೆ. ರಾಷ್ಟ್ರೋತ್ಥಾನ ಪರಿಷತ್ತಿನ ವಿವಿಧ ಶಾಲೆಗಳಲ್ಲಿ ಸೀಡ್ ಬಾಲ್‌ಗಳನ್ನು ತಯಾರಿಸಿದ ವಿದ್ಯಾರ್ಥಿಗಳು ಅದನ್ನು ಸುತ್ತಮುತ್ತಲಿನ ಖಾಲಿ ಜಾಗಗಳಲ್ಲಿ ಎಸೆದರು.

### ಜಾಗೃತಿ ಕಾರ್ಯಕ್ರಮಗಳು

**ರಸ್ತೆ ಸುರಕ್ಷತೆ ಜಾಗೃತಿ :** ವಿದ್ಯಾರ್ಥಿಗಳಲ್ಲಿ ರಸ್ತೆ ಸುರಕ್ಷತೆಯ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ರಸ್ತೆ ಸುರಕ್ಷತೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಮುಖ್ಯ ಟ್ರಾಫಿಕ್ ವಾರ್ಡನ್ ವೀರೇಂದ್ರ ಕುಮಾರ್ ಹಾಗೂ ಕೆ.ಆರ್.ಪುರಂ ಸಂಚಾರಿ ಪೊಲೀಸ್ ಠಾಣೆಯ ಎಸ್‌ಐ ಅನಿತಾ ಕುಮಾರಿ (ರಾಮಮೂರ್ತಿನಗರದ ಜೆಜಿಆರ್‌ವಿಕೆ), ದಾವಣಗೆರೆಯ ಸ್ಥಳೀಯ ಸಂಚಾರಿ ನಿಯಂತ್ರಣ ತರಬೇತುದಾರರಾದ ಸುಭಾಷ್ ಬಿ. (ದಾವಣಗೆರೆಯ ವಿದ್ಯಾಲಯ) ಮುಖ್ಯ ಅತಿಥಿಗಳಾಗಿ ಆಗಮಿಸಿ ಸಂಚಾರಿ ನಿಯಮಗಳ ಕುರಿತು ಮಾಹಿತಿ ನೀಡಿದರು.

**ಮತದಾನ ಜಾಗೃತಿ:** ದೇಶದ ಎಲ್ಲ ರಂಗಗಳನ್ನೂ ಪ್ರಭಾವಿಸುವ ರಾಜಕೀಯ ಕ್ಷೇತ್ರವನ್ನು ಸದೃಢಗೊಳಿಸಲು ಮತದಾನ ಜಾಗೃತಿ ಮೂಡಬೇಕಾದುದು ಅನಿವಾರ್ಯ. ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಆಯೋಜಿಸಿದ





ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ದಾವಣಗೆರೆಯ ಜಿಲ್ಲಾಧಿಕಾರಿಗಳಾದ ರಮೇಶ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾರ್ಗದರ್ಶನ ಮಾಡಿದರು.

**ಜಲ ಮತ್ತು ನದಿ ಸಂರಕ್ಷಣೆ :** ಥಣಿಸಂದ್ರದ ವಿದ್ಯಾಕೇಂದ್ರದ ವಿದ್ಯಾರ್ಥಿಗಳಲ್ಲಿ ನದಿ ಹಾಗೂ ನದಿನೀರಿನ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಹಗರಿಬೊಮ್ಮನಹಳ್ಳಿಯ ಶಾರದಾ ವಿದ್ಯಾಮಂದಿರದಲ್ಲಿ ಜಲಸಂರಕ್ಷಣೆಯ ಕುರಿತು ಜಾಗೃತಿ ನಡೆಯಿತು.

**ಆರೋಗ್ಯ ಜಾಗೃತಿ:** ಶಿಕ್ಷಕರಿಗಾಗಿ ಹಗರಿಬೊಮ್ಮನಹಳ್ಳಿಯ ಶಾರದಾ ವಿದ್ಯಾಮಂದಿರದಲ್ಲಿ ಜುಲೈ 15ರಂದು ಪ್ರಥಮ ಚಿಕಿತ್ಸೆಯ ಕುರಿತು ಮಾಹಿತಿ ಕಾರ್ಯಕ್ರಮ ನಡೆಯಿತು.

### ಸೇವಾಬಸ್ತಿಗೆ ಭೇಟಿ

ವಿದ್ಯಾರ್ಥಿಗಳಿಗೆ ಸಾಮಾಜಿಕ ವ್ಯವಸ್ಥೆಯ ಬಗೆಗೆ ಅರಿವು ಮೂಡಿಸುವ ಸಲುವಾಗಿ ರಾಮಮೂರ್ತಿನಗರದ ಜೆಜಿಆರ್‌ವಿಕೆಯ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳನ್ನು ಸಮೀಪದ ವಿಜಿನಾಪುರ ಸೇವಾಬಸ್ತಿ (ಸ್ಲಂ)ಗೆ ಕರೆದೊಯ್ಯಲಾಯಿತು. ಸೇವಾಬಸ್ತಿಯ ನಿವಾಸಿಗಳೊಂದಿಗೆ ಅವರ ಜೀವನ ಶೈಲಿ, ಅಲ್ಲಿಯ ವ್ಯವಸ್ಥೆಗಳ ಕುರಿತು ವಿದ್ಯಾರ್ಥಿಗಳು ಚರ್ಚೆ ನಡೆಸಿದರು.

## ರಾಷ್ಟ್ರೋತ್ಥಾನ ಶೈಕ್ಷಣಿಕ ಸಂಸ್ಥೆಗಳು ನಡೆಸಿದ ಸಮಾನ ಕಾರ್ಯಕ್ರಮಗಳು

ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಪೂರಕ ಶಿಕ್ಷಣ ನೀಡುವ ಧ್ಯೇಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೋತ್ಥಾನ ಪರಿಷತ್‌ನ ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಿದ ಸಮಾನ ಕಾರ್ಯಕ್ರಮಗಳು

### ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭ

ನೂತನ ಶೈಕ್ಷಣಿಕ ವರ್ಷಾರಂಭದ ಸಂದರ್ಭದಲ್ಲಿ ಪರಿಷತ್‌ನ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಸಲುವಾಗಿ ವಿದ್ಯಾರಂಭ ಕಾರ್ಯಕ್ರಮವನ್ನು ಹಾಗೂ ಹೊಸದಾಗಿ ಸೇರ್ಪಡೆಗೊಂಡ ಚಿಣ್ಣರಿಗೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

- ಮೇ 9ರಂದು ದಾವಣಗೆರೆಯ ನಿಟುವಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ(ಸಿ.ಬಿ.ಎಸ್.ಇ) ನಡೆದ ಕಟ್ಟಡ ಉದ್ಘಾಟನೆ ಮತ್ತು ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಸಿರಿಗೆರೆಯ ತರಳಬಾಳು ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪೂಜ್ಯ ಶ್ರೀಗಳು ಸಸಿ ನೆಟ್ಟು ಶುಭಾರಂಭ ಮಾಡಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ ಮುಕುಂದ್, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಸ್.ಆರ್. ರಾಮಸ್ವಾಮಿ, ಮಾಜಿ ತೋಟಗಾರಿಕಾ ಸಚಿವರಾದ ಎಸ್.ಎ. ರವೀಂದ್ರನಾಥ್ ಉಪಸ್ಥಿತರಿದ್ದರು.



> ಭಾರತೀಯ ಮಕ್ಕಳಲ್ಲಿ ಅಮೆರಿಕದ ಮಕ್ಕಳನ್ನೂ ಮೀರಿಸುವಂತಹ ಪ್ರತಿಭೆ ಇದೆ. ಅಭಿವೃದ್ಧಿ ಹೊಂದಿದ ರಾಷ್ಟ್ರದ ಮಾನದಂಡವು ಕೇವಲ ಆರ್ಥಿಕತೆಯಾಗದೇ ಬೌದ್ಧಿಕ, ಚಾರಿತ್ರಿಕ ಹಾಗೂ ನೈತಿಕತೆ ಮಾನದಂಡವಾಗಬೇಕು. ಈ ನಿಟ್ಟಿನಿಂದ ನೋಡಿದಾಗ ಭಾರತ ಅಮೆರಿಕಾಗಿಂತಲೂ ಹೆಚ್ಚು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿದೆ.
>
> **– ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಜೀ**
> ಸಿರಿಗೆರೆಯ ತರಳಬಾಳು ಬೃಹನ್ಮಠ

- ಮಂಡ್ಯದ ಚಿನ್ಮಯಿ ಮಿಷನ್‌ನ ಆದಿತ್ಯಾನಂದ ಸ್ವಾಮಿಜೀ (ಥಣಿಸಂದ್ರ), ಶ್ರೀ ಕ್ಷೇತ್ರ ಕೂಡಲಿ ಮಠದ ರಘುವೀರ ಜಯತೀರ್ಥ ಸ್ವಾಮಿಜೀ (ಹೊಳೆಹೊನ್ನೂರಿನ ರಾಷ್ಟ್ರೋತ್ಥಾನ ವಿದ್ಯಾಲಯ), ರಾಮಕೃಷ್ಣ ಮಠದ ಶ್ರೀ ನಿಷ್ಠಾತ್ಮಾನಂದ ಸ್ವಾಮಿಜೀ (ರಾಮಮೂರ್ತಿನಗರದ ಜೆಜಿಆರ್‌ವಿಕೆ), ದಾವಣಗೆರೆಯ ವಿರಕ್ತಮಠದ ಪೂಜ್ಯ ಬಸವಪ್ರಿಯ ಸ್ವಾಮಿಜೀ (ಚಿತ್ರದುರ್ಗದ ಜ್ಞಾನಭಾರತಿ ವಿದ್ಯಾಮಂದಿರ), ಶ್ರೀ ಕ್ಷೇತ್ರ ನಂದಿಪುರದ ಪೂಜ್ಯ ಮಹೇಶ್ವರ ಸ್ವಾಮಿಜೀ (ಹಗರಿಬೊಮ್ಮನಹಳ್ಳಿಯ ಶಾರದಾ ವಿದ್ಯಾಮಂದಿರ), ಬೆಂಗಳೂರಿನ ಭಾರತಮಾತಾ ಗುರುಕುಲ ಆಶ್ರಮ ಹಾಗೂ ಭಾರತಮಾತಾ ಮಂದಿರದ ಸಂಸ್ಥಾಪಕರಾದ ಸಾಧು ಪ್ರೊ॥ ವಿ. ರಂಗರಾಜನ್ (ಬನಶಂಕರಿ) ಮುಂತಾದವರು ದಿವ್ಯಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಕ್ಕಳನ್ನು ಹರಸಿದರು.

## ಶಾಲಾ ಮಂತ್ರಿಮಂಡಲ

ವಿದ್ಯಾರ್ಥಿಗಳಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಜಾಗೃತಿ ಮೂಡಿಸುವ ಸಲುವಾಗಿ ಹಲವು ಚಟುವಟಿಕೆಗಳನ್ನು ರಾಷ್ಟ್ರೋತ್ಥಾನ ಪರಿಷತ್‌ನ ಶಿಕ್ಷಣ ಸಂಸ್ಥೆಗಳು ನಡೆಸುತ್ತಿವೆ. ಚುನಾವಣೆ, ಸೂಕ್ತ ಅಭ್ಯರ್ಥಿಗಳ ಆಯ್ಕೆ, ಚುನಾಯಿತ ಮಂತ್ರಿಮಂಡಲದ ಕಾರ್ಯಚಟುವಟಿಕೆಗಳ ಬಗೆಗೆ ಹಾಗೂ ದೇಶದ ಪ್ರಜಾಪ್ರಭುತ್ವದ ಬಗೆಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ ಶಾಲಾ ಮಂತ್ರಿಮಂಡಲ ರಚನೆ ಮಾಡಲಾಗುತ್ತಿದೆ.

ಮತದಾನದ ಮೂಲಕ ಶಾಲಾ ಸಂಸತ್ತಿನ ಪ್ರತಿನಿಧಿಗಳ ಆಯ್ಕೆ ಮಾಡಿ, ಮತದಾನ, ಪ್ರತಿಜ್ಞಾವಿಧಿ ಹಾಗೂ ನಿರಂತರ ಸಂಸತ್ ಅಧಿವೇಶನ(ಶಾಲಾ ಮಂತ್ರಿಮಂಡಲದ ಅಧಿವೇಶನ)ಗಳನ್ನು ನಡೆಸಲಾಗುತ್ತಿದೆ.

ವಿವಿಧೆಡೆಗಳಲ್ಲಿ ನಡೆದ ಪ್ರತಿಜ್ಞಾವಿಧಿ ಕಾರ್ಯಕ್ರಮದಲ್ಲಿ ಕೆಂಗೇರಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಗಿರಿರಾಜ್ ಜಿ.ವೈ. (ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ), ಬಾಣಸವಾಡಿಯ ಪೊಲೀಸ್ ಇನ್‌ಸ್ಪೆಕ್ಟರ್ ಶರತ್ ಕುಮಾರ್ (ಕಲ್ಯಾಣನಗರದ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಲಯ), ರಾಜ್ಯ ಇಂಟೆಲಿಜೆನ್ಸ್ ಟೀಮ್‌ನ ಪೊಲೀಸ್ ಸೂಪರಿಟೆಂಡೆಂಟ್ ಹಂಝು ಹುಸೇನ್ (ರಾಮಮೂರ್ತಿನಗರದ ಜೆಜಿಆರ್‌ವಿಕೆ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಪ್ರತಿಜ್ಞಾವಿಧಿ ಬೋಧಿಸಿದರು.

## ವ್ಯಕ್ತಿತ್ವ ವಿಕಸನ ಶಿಬಿರ/ ಬೇಸಿಗೆ ಶಿಬಿರ

ಮಕ್ಕಳನ್ನು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿ ಅವರ ಬೌದ್ಧಿಕ, ಮಾನಸಿಕ ಕ್ಷಮತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನದ ವಿದ್ಯಾಸಂಸ್ಥೆಗಳಲ್ಲಿ ಬೇಸಿಗೆ ಶಿಬಿರ/ವ್ಯಕಿತ್ವ ವಿಕಸನ ಶಿಬಿರ (ಚಿಗುರು ಇತ್ಯಾದಿ) ಗಳನ್ನು ನಡೆಸಲಾಗುತ್ತಿದೆ.





## ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ರಾಷ್ಟ್ರೋತ್ಥಾನ ಪರಿಷತ್‌ನ ಅನೇಕ ಶಾಲೆಗಳಲ್ಲಿ ಜೂನ್ 21ರಂದು ಅಂತಾರಾಷ್ಟ್ರೀಯ ಯೋಗದಿನವನ್ನು ಆಚರಿಸಲಾಯಿತು.

- ಅನೇಕ ವಿದ್ಯಾಲಯ/ಕೇಂದ್ರಗಳಲ್ಲಿ ಮಕ್ಕಳಲ್ಲಿ ಆಸಕ್ತಿ ಮೂಡಿಸುವ ಸಲುವಾಗಿ ಯೋಗಾಸನ ಪ್ರದರ್ಶನ, ಯೋಗಾಸನ ಸ್ಪರ್ಧೆ, ಯೋಗಪಿರಮಿಡ್ಡುಗಳ ರಚನೆ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.
- ಶಾಸಕರಾದ ಕುಮಾರ್ ಬಂಗಾರಪ್ಪ, ನಟ ದುನಿಯಾ ವಿಜಯ್, ಶ್ರೀನಗರ ಕಿಟ್ಟಿ, ಬೆಂಗಳೂರು ಬಿಜೆಪಿ ಕಾರ್ಯದರ್ಶಿ ರುದ್ರೇಶ್ (ಬನಶಂಕರಿ), ದಾವಣಗೆರೆಯ ಇಎಸ್‌ಐ ಆಸ್ಪತ್ರೆ ಕೀಲುಮೂಳೆ ತಜ್ಞರಾದ ಡಾ. ರಮೇಶ್ ಪೂಜಾರಿ (ದಾವಣಗೆರೆಯ ರಾ. ವಿದ್ಯಾಕೇಂದ್ರ), ಆರ್ಟ್ ಆಫ್ ಲಿವಿಂಗ್‌ನ ಯೋಗ ಶಿಕ್ಷಕ ಆನಂದ ಪಾಟೀಲ್ (ಚಿತ್ರದುರ್ಗ), ಯೋಗತಜ್ಞರಾದ ಪ್ರೊ. ಸುನೀಲ್ ಗೋವಿಂದ್ (ಥಣಿಸಂದ್ರ), ಯೋಗಾಚಾರ್ಯ ಅಮೃತ್‌ಯೋಗಿ (ರಾಮಮೂರ್ತಿನಗರ) ಮುಂತಾದ ಗಣ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.

## ಸಂಕಲ್ಪ

10ನೇ ತರಗತಿ ವಿದ್ಯಾಭ್ಯಾಸ ಪೂರೈಸಿ ಶಾಲೆಯಿಂದ ಬೀಳ್ಕೊಡಲಿರುವ ವಿದ್ಯಾರ್ಥಿಗಳಿಗಾಗಿ ಶೈಕ್ಷಣಿಕ ವರ್ಷದ ಅಂತ್ಯದ ವೇಳೆಗೆ ಆಯಾ ವಿದ್ಯಾಸಂಸ್ಥೆಗಳಲ್ಲಿ 'ಸಂಕಲ್ಪ' ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ.

- ಪೂಜ್ಯ ಸಾಮೀಜಿಗಳ ಹಾಗೂ ಸಮಾಜದ ಗಣ್ಯವ್ಯಕ್ತಿಗಳ ಉಪಸ್ಥಿತಿಯಲ್ಲಿ ವಿದ್ಯಾರ್ಥಿಗಳು ಭಾರತ ದೇಶದ ನಕ್ಷೆಯ ಚಿತ್ರದ ಮೇಲೆ ದೀಪ ಬೆಳಗಿಸಿ ಭಾರತಕ್ಕಾಗಿ ಬದುಕುವ ಸಂಕಲ್ಪ ಕೈಗೊಳ್ಳುವರು.
- ಹೊನ್ನಾಳಿಯ ಹಿರೇಕಲ್ಮಠದ ಒಡೆಯರ್ ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಜೀ (ದಾವಣಗೆರೆ ವಿದ್ಯಾಕೇಂದ್ರ), ಚಿತ್ರದುರ್ಗದ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಜೀ (ಧಾರವಾಡ ವಿದ್ಯಾಕೇಂದ್ರ), ಶ್ರೀಮದ್ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠದ ಪಟ್ಟಾಧ್ಯಕ್ಷರಾದ ಡಾ. ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿ (ಥಣಿಸಂದ್ರ), ಅವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮಿಜೀ (ದಾವಣಗೆರೆ ವಿದ್ಯಾಲಯ), ಮೈಸೂರಿನ ರಾಮಕೃಷ್ಣ ಆಶ್ರಮದ ನೈತಿಕ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಮಹೇಶ್ವರಾತ್ಮಾನಂದ (ರಾಮಮೂರ್ತಿನಗರ) ಅವರು ದಿವ್ಯಸಾನ್ನಿಧ್ಯ ವಹಿಸಿ ಮಕ್ಕಳನ್ನು ಆಶೀರ್ವದಿಸಿದರು. ಯೂತ್ ಫಾರ್ ಸೇವಾದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ವೆಂಕಟೇಶ ಮೂರ್ತಿ (ಧಾರವಾಡ ವಿದ್ಯಾಕೇಂದ್ರ), ಪ್ರಜ್ಞಾಪ್ರವಾಹದ ದಕ್ಷಿಣಮಧ್ಯ ಕ್ಷೇತ್ರದ ಸಂಯೋಜಕ ರಘುನಂದನ್ (ಧಾರವಾಡ ವಿದ್ಯಾಲಯ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.



## ವಾರ್ಷಿಕೋತ್ಸವ

ಮಕ್ಕಳಲ್ಲಿ ಅಡಕವಾಗಿರುವ ಸುಪ್ತಪ್ರತಿಭೆಗಳನ್ನು ಹೊರಹೊಮ್ಮಿಸುವ ಸಲುವಾಗಿ ಪರಿಷತ್‌ನ ಎಲ್ಲ ವಿದ್ಯಾಸಂಸ್ಥೆಗಳಲ್ಲಿ ಪ್ರತೀವರ್ಷ ಡಿಸೆಂಬರ್-ಜನವರಿ ತಿಂಗಳಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ.

- ಕಳೆದ ಶೈಕ್ಷಣಿಕ ಸಾಲಿನಲ್ಲಿ ಉನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಗಳನ್ನು ನೀಡಿ ಗೌರವಿಸಲಾಯಿತು.
- ವಿದ್ಯಾರ್ಥಿಗಳಿಂದ ಏಕಭಾರತ-ಶ್ರೇಷ್ಠ ಭಾರತ, ಭಾರತದ ಸಾಂಸ್ಕೃತಿಕ ಪರಂಪರೆ, ಸುಗ್ಗಿ-ಹಬ್ಬಗಳ ಸಂಭ್ರಮ, ಕರುನಾಡ ಸಂಭ್ರಮ ಮುಂತಾದ ವಿಷಯಾಧಾರಿತ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.
- ಇಸ್ರೋ ಸಂಸ್ಥೆಯ ಸಲಹೆಗಾರರಾದ ಪ್ರೊ. ರಾಧಾಕೃಷ್ಣನ್ (ಥಣಿಸಂದ್ರ), ಇಸ್ರೋ ಸಂಸ್ಥೆಯ ಡೆಪ್ಯುಟಿ ಪ್ರಾಜೆಕ್ಟ್ ಡೈರೆಕ್ಟರ್ ಫರ್ಹಾನ ತಬಸುಮ್, ರಾಜರಾಜೇಶ್ವರಿ ಡೆಂಟಲ್ ಕಾಲೇಜಿನ ಅಸೋಸಿಯೇಟ್ ಪ್ರೊಫೆಸರ್ ವಸುಧಾ ಶರ್ಮಾ (ಬನಶಂಕರಿ), ಚಿತ್ರದುರ್ಗದ ಕ್ಷೇತ್ರ ಶಿಕ್ಷಣಾಧಿಕಾರಿ ನಾಗಭೂಷಣ (ಚಿತ್ರದುರ್ಗ), ದಾವಣಗೆರೆ ಜಿಲ್ಲಾ ಮತ್ತು ಪ್ರಧಾನ ಸೆಷನ್ಸ್ ನ್ಯಾಯಾಧೀಶರಾದ ಎಂ. ಶ್ರೀದೇವಿ, ನ್ಯಾಯಾಧೀಶರಾದ ಕೆಂಗಬಾಲಯ್ಯ (ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ), ಸಾಮಾಜಿಕ ಕಾರ್ಯಕರ್ತ ಸಿದ್ದೇಶ್ವರ, ಜಿಲ್ಲಾ ಪಂಚಾಯತ್ ಸದಸ್ಯರಾದ ಮಂಜುಳಾ (ದಾವಣಗೆರೆಯ ವಿದ್ಯಾಲಯ), ಐಬಿಎಂ ಕಂಪೆನಿಯ ಸಹಾಯಕ ಮ್ಯಾನೇಜರ್ ಕೆ.ಎಸ್. ಶಶಿಧರ್ ಭಟ್, ಕಾವೇರಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷರಾದ ದೇವರಾಜಪ್ಪ, ವಾಸ್ತುಶಿಲ್ಪಕಾರರಾದ ಹರೀಶ್ ಲಕ್ಷ್ಮಣ (ಥಣಿಸಂದ್ರ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.

## ವಸ್ತು ಪ್ರದರ್ಶನ

ಮಕ್ಕಳಲ್ಲಿರುವ ಪ್ರತಿಭೆಯ ಪ್ರಕಾಶನಕ್ಕೆ ವೇದಿಕೆ ಕಲ್ಪಿಸುವ ಸಲುವಾಗಿ ಪಠ್ಯಾಧಾರಿತ ಹಾಗೂ ವಿವಿಧ ವಿಷಯಗಳ ಮೇಲೆ ವಸ್ತು ಪ್ರದರ್ಶನವನ್ನು ವಿವಿಧ ಶಾಲೆಗಳಲ್ಲಿ ನಿರಂತರವಾಗಿ ಆಯೋಜಿಸಲಾಗುತ್ತಿದೆ.

ನಿರುಪಯುಕ್ತ ವಸ್ತುಗಳನ್ನು ಉಪಯೋಗಿಸುವ ಬಗೆ ಹಾಗೂ ಅವರಲ್ಲಿ ಸೃಜನಶೀಲತೆ ಬೆಳೆಸುವ ಸಲುವಾಗಿ ದಾವಣಗೆರೆಯ ವಿದ್ಯಾಕೇಂದ್ರದಲ್ಲಿ ನವೆಂಬರ್ 18ರಂದು 'ಕಸದಿಂದ ರಸ' ವಸ್ತುಪ್ರದರ್ಶನ ನಡೆಯಿತು. ಪೂರ್ವ ಪ್ರಾಥಮಿಕ



ವಿದ್ಯಾರ್ಥಿಗಳು ತಮ್ಮ ಪೋಷಕರ ನೆರವಿನಿಂದ ಮನೆಯಲ್ಲಿನ ನಿರುಪಯುಕ್ತ ವಸ್ತುಗಳನ್ನು ಬಳಸಿ ವಿವಿಧ ಆಲಂಕಾರಿಕ ವಸ್ತು ಹಾಗೂ ಸಲಕರಣೆಗಳನ್ನು ತಯಾರಿಸಿ ಪ್ರದರ್ಶಿಸಿದರು.

**ಸಂಸ್ಕೃತ ಸಪ್ತಾಹ :** ವಿದ್ಯಾರ್ಥಿಗಳಲ್ಲಿ ಸಂಸ್ಕೃತದ ಕುರಿತು ಜಾಗೃತಿ ಹಾಗೂ ಭಾಷಾಭಿಮಾನ ಮೂಡಿಸುವ ಸಲುವಾಗಿ ವಿವಿಧ ಶಾಲೆಗಳಲ್ಲಿ ಸಂಸ್ಕೃತ ಸಪ್ತಾಹಗಳನ್ನು ಆಯೋಜಿಸಲಾಗುತ್ತಿದೆ.

**ಪ್ರವಾಸ/ಚಾರಣ :** ವಿದ್ಯಾರ್ಥಿಗಳಲ್ಲಿ ಸಾಮಾಜದ ಪರಿಸ್ಥಿತಿ, ಇತಿಹಾಸದ ಅರಿವು, ಧೈರ್ಯ-ಸಾಹಸ ಪ್ರವೃತ್ತಿ ಮೂಡಿಸುವ ಸಲುವಾಗಿ ಪ್ರವಾಸ, ಚಾರಣ ಮುಂತಾದ ಕಾರ್ಯಕ್ರಮಗಳನ್ನು ಪರಿಷತ್ತಿನ ಎಲ್ಲ ಶೈಕ್ಷಣಿಕ ಚಟುವಟಿಕೆಗಳಲ್ಲಿ ಆಚರಿಸಲಾಗುತ್ತಿದೆ.

**ಗಾಳಿಪಟ ಉತ್ಸವ :** ವಿದ್ಯಾರ್ಥಿಗಳಿಗೆ ಬದುಕಿನ ಮಹತ್ತ್ವವನ್ನು ತಿಳಿಸಿಕೊಡುವ ಸಲುವಾಗಿ ನಡೆದ ಗಾಳಿಪಟ ಉತ್ಸವದಲ್ಲಿ ವಿದ್ಯಾಬಾರತಿಯ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಜಿ.ಆರ್. ಜಗದೀಶ್, ಹಿರಿಯ ನ್ಯಾಯಾಧೀಶರಾದ ದಿಂಡಲಕೊಪ್ಪ (ಚಿತ್ರದುರ್ಗ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದರು.

# ವಿವಿಧ ದಿನಾಚರಣೆಗಳು

ಮಕ್ಕಳಲ್ಲಿ ಸಾಮಾಜಿಕ ಕಳಕಳಿ ಹಾಗೂ ದೇಶ-ಧರ್ಮ-ಸಂಸ್ಕೃತಿಯ ಬಗೆಗೆ ಅಭಿಮಾನ, ಗೌರವ ಮೂಡಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್‌ನ ವಿದ್ಯಾಸಂಸ್ಥೆಗಳಲ್ಲಿ ವಿವಿಧ ದಿನಾಚರಣೆಗಳನ್ನು ಆಚರಿಸಲಾಗುತ್ತಿದೆ.

**ವಿಶ್ವ ಪರಿಸರ ದಿನಾಚರಣೆ :** ಪರಿಸರದ ಬಗೆಗೆ ಜಾಗೃತಿ ಹಾಗೂ ಅದನ್ನು ಉಳಿಸಿ, ಪೋಷಿಸುವ ಅಗತ್ಯದ ಬಗೆಗೆ ಅರಿವು ಮೂಡಿಸುವ ಉದ್ದೇಶದಿಂದ ವಿಶ್ವಸಂಸ್ಥೆಯು 1973ರಿಂದ ಜೂನ್ 5ನ್ನು ವಿಶ್ವ ಪರಿಸರ ದಿನ ಎಂದು ಘೋಷಿಸಿತು. ಪರಿಷತ್‌ನ ಎಲ್ಲ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಪರಿಸರದ ಮಹತ್ತ್ವದ ಬಗ್ಗೆ ಮಕ್ಕಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಜೂನ್ 5ರಂದು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

- ವಿದ್ಯಾರ್ಥಿಗಳು ನೀರಿನ ಮಿತಬಳಕೆ ಬಗ್ಗೆ, ಪರಿಸರದ ಸ್ವಚ್ಛತೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಹಾಗೂ ಶಾಲೆಯ ಆವರಣವನ್ನು ಪ್ಲಾಸ್ಟಿಕ್ ಮುಕ್ತವಾಗಿಸುವ ಪ್ರತಿಜ್ಞೆಯನ್ನು ಸ್ವೀಕರಿಸಿದರು.
- ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಭಿತ್ತಿಪತ್ರಗಳನ್ನು ಹಿಡಿದು ಘೋಷಣೆಗಳೊಂದಿಗೆ ವಿವಿಧ ಬೀದಿಗಳಲ್ಲಿ ಜಾಥಾ, ನಾಟಕ ಕಾರ್ಯಕ್ರಮ ನಡೆಯಿತು.
- ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯಾ ವಿದ್ಯಾಕೇಂದ್ರದ 5 ರಿಂದ 10ನೇ ತರಗತಿ ವರೆಗಿನ ಪ್ರತಿಯೊಬ್ಬ ವಿದ್ಯಾರ್ಥಿಗೂ ಬೀಜಗಳನ್ನು ನೀಡಿ ಮನೆಯಲ್ಲಿ ಅವುಗಳನ್ನು ನೆಟ್ಟು ಗಿಡ ಬೆಳೆಸುವಂತೆ ಮಾರ್ಗದರ್ಶನ ಮಾಡಲಾಯಿತು.
- ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳು ಸಮೀಪದ ಯರಪ್ಪನಹಳ್ಳಿ, ದೊಡ್ಡ ಗುಬ್ಬಿ ಮತ್ತು ಯರಪನಹಳ್ಳಿ ಬಂಡೆ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಸ್ಥರ ನೆರವಿನೊಂದಿಗೆ ನೂರಕ್ಕೂ ಅಧಿಕ ಸಸಿಗಳನ್ನು ನೆಟ್ಟರು.

**ಗಣರಾಜ್ಯೋತ್ಸವ/ಸ್ವಾತಂತ್ರ್ಯೋತ್ಸವ:** ದೇಶಕ್ಕೆ ಸ್ವಾತಂತ್ರ್ಯಪ್ರಾಪ್ತಿಯಾದ ಮಹತ್ತ್ವದ ಕ್ಷಣವಾದ ಸ್ವಾತಂತ್ರ್ಯ ದಿನಾಚರಣೆ ಹಾಗೂ ದೇಶದ ಪ್ರಜಾಪ್ರಭುತ್ವ-ಸಾರ್ವಭೌಮತೆಯ ಸಂಕೇತವಾದ ಗಣರಾಜ್ಯೋತ್ಸವ ಕಾರ್ಯಕ್ರಮಗಳನ್ನು ನಮ್ಮ ಶಾಲೆಗಳಲ್ಲಿ ಸಡಗರದಿಂದ ಆಚರಿಸಲಾಯಿತು.

- ಮಕ್ಕಳು ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಮುಂತಾದ ಘಟನೆಗಳ ಬಗ್ಗೆ ನೃತ್ಯರೂಪಕ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿರಾಯಣ್ಣ, ಗಾಂಧಿಜೀ, ಭಗತ್‌ಸಿಂಗ್ ಮುಂತಾದ ಸ್ವಾತಂತ್ರ್ಯ ಹೋರಾಟಗಾರರ ಏಕಪಾತ್ರಾಭಿನಯ ಹಾಗೂ ಸ್ವಾತಂತ್ರ್ಯೋತ್ಸವದ ಬಗ್ಗೆ ಇಂಗ್ಲಿಷ್, ಹಿಂದಿ ಮತ್ತು ಕನ್ನಡ ಭಾಷೆಗಳಲ್ಲಿ ಭಾಷಣ ಸ್ಪರ್ಧೆ ಹಾಗೂ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.
- ಸ್ವಾತಂತ್ರ್ಯದಿನಾಚರಣೆ ಕಾರ್ಯಕ್ರಮದಲ್ಲಿ ಖ್ಯಾತ ಲೆಕ್ಕಪರಿಶೋಧಕ ಮುರುಗೇಂದ್ರಪ್ಪ (ದಾವಣಗೆರೆಯ ವಿದ್ಯಾಕೇಂದ್ರ), ನಿವೃತ್ತ ಸೈನಿಕರಾದ ಕರಿಯಪ್ಪ (ಚಿತ್ರದುರ್ಗ), ನಿವೃತ್ತ ವಿಂಗ್ ಕಮಾಂಡರ್ ಗಿರೀಶ್ ಕುಮಾರ್ 2001ರಲ್ಲಿ ರಕ್ಷಕ್ ಕಾರ್ಯಾಚರಣೆಯಲ್ಲಿ ವೀರಮರಣ ಹೊಂದಿದ ಮೇಜರ್ ಶಫೀಕ್‌ಘೋರಿ ಅವರ ಪತ್ನಿ ಸಲ್ಮಾ ಶಫೀಕ್, ವರ್ಣಚಿತ್ರಕಾರ ಹುತಾಂಶು ವರ್ಮ (ರಾಮಮೂರ್ತಿನಗರ ಜೆಜಿಆರ್‌ವಿಕೆ), ಭಾರತೀಯ ಶಿಕ್ಷಣ ಸಮಿತಿಯ











ಸದಸ್ಯ ನರಸಿಂಹ ಗಲಗಲಿ (ಧಾರವಾಡದ ವಿದ್ಯಾಕೇಂದ್ರ), ವಾಯುಪಡೆಯ ಕಮಾಂಡರ್ ನರೇಂದ್ರ ಸಿಂಗ್ (ಥಣಿಸಂದ್ರ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ನೆರವೇರಿಸಿದರು.

- ಗಣರಾಜ್ಯೋತ್ಸವದಲ್ಲಿ ಭಾರತೀಯ ಸೇನೆಯಲ್ಲಿ 33 ವರ್ಷ ವೈದ್ಯರಾಗಿ ಸೇವೆಸಲ್ಲಿಸಿದ ಡಾ. ಕರ್ನಲ್ ಎಸ್.ಎಸ್. ಬನ್ನೂರು (ಧಾರವಾಡ), ಖ್ಯಾತ ವಾಣಿಜ್ಯೋದ್ಯಮಿ ಅಣಬೇರು ರಾಜಣ್ಣ (ದಾವಣಗೆರೆ), ನಿವೃತ್ತ ಬ್ರಿಗೇಡಿಯರ್ ಡಾ॥ ಎಚ್.ಆರ್. ಅರವಿಂದ ಪ್ರಭು (ಕಲ್ಯಾಣನಗರದ ಜೆಜಿಆರ್‌ವಿ), ಕರ್ನಲ್ ಸತ್ಯ ಶ್ರೀನಾಥ್ (ರಾಮಮೂರ್ತಿನಗರದ ಜೆಜಿಆರ್‌ವಿಕೆ), ಏರ್ ಕಮಾಂಡರ್ ಬಾಲಕೃಷ್ಣನ್ ಜಯಂತ್ (ಥಣಿಸಂದ್ರ) ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ಮಾಡಿದರು.

**ವಿಶ್ವ ಜನಸಂಖ್ಯಾ ದಿನಾಚರಣೆ:** ವಿಶ್ವದಲ್ಲಿ ಬೃಹತ್ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವ ಜನಸಂಖ್ಯೆಯ ಬಗೆಗೆ ಜಾಗೃತಿ ಮೂಡಿಸುವ ಸಲುವಾಗಿ ವಿಶ್ವಸಂಸ್ಥೆ 1989ರಲ್ಲಿ ಜೂನ್ 11ನ್ನು ವಿಶ್ವ ಜನಸಂಖ್ಯಾ ದಿನ ಎಂದು ಘೋಷಿಸಿದೆ. ಜನಸಂಖ್ಯೆಯ ತೀವ್ರಗತಿಯಲ್ಲಿ ಏರಿಕೆಯಾಗುತ್ತಿರುವುದರಿಂದ ಜನಸಂಖ್ಯಾ ಸ್ಫೋಟ ಎಂಬ ಶಬ್ದ ಎಲ್ಲೆಡೆ ಕೇಳಿಬರುತ್ತಿದೆ. ಆದರೆ ಜನಸಂಖ್ಯೆ ಯಾವುದೇ ದೇಶಕ್ಕೆ ಹೊರೆಯಲ್ಲ; ಜನಸಂಖ್ಯೆ ಪ್ರತಿಯೊಂದು ದೇಶದ ಸಂಪನ್ಮೂಲ. ಅದರ ಅಸಮತೋಲಿತ ಏರಿಕೆಯನ್ನು ತಡೆಗಟ್ಟಬೇಕಾದ ಹಾಗೂ ಪ್ರಸ್ತುತ ಇರುವ ಜನಸಂಪನ್ಮೂಲವನ್ನು ಸದುಪಯೋಗಪಡಿಸಿಕೊಳ್ಳುವ ಪ್ರಯತ್ನ ನಡೆಯಬೇಕಾದ ಅಗತ್ಯವಿದೆ. ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್‌ನ ವಿವಿಧ ಶಾಲೆಗಳಲ್ಲಿ ವಿಶ್ವ ಜನಸಂಖ್ಯಾ ದಿನವನ್ನು ಆಚರಿಸಲಾಗುತ್ತಿದೆ.

**ರಾಷ್ಟ್ರೀಯ ವಿಜ್ಞಾನ ದಿನಾಚರಣೆ:** ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಕರಿತು ಆಸಕ್ತಿ–ಅರಿವು ಮೂಡಿಸುವ ಸಲುವಾಗಿ ಮಾರ್ಚ್ 2ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

**ಸ್ವದೇಶೀ ಸಪ್ತಾಹ:** ತನ್ನತನ ಹಾಗೂ ಸ್ವಾಭಿಮಾನವನ್ನು ಜಾಗೃತಗೊಳಿಸುವ ಸಲುವಾಗಿ ರಾಷ್ಟ್ರೋತ್ಥಾನದ ವಿವಿಧ ವಿದ್ಯಾಸಂಸ್ಥೆಗಳಲ್ಲಿ ಸ್ವದೇಶೀ ದಿನಾಚರಣೆಯನ್ನು ಆಚರಿಸಲಾಯಿತು. ಕೆಲವು ವಿದ್ಯಾಸಂಸ್ಥೆಗಳಲ್ಲಿ ಸೆಪ್ಟೆಂಬರ್ 16ರಿಂದ 23ರವರೆಗೆ ಸ್ವದೇಶೀ ಸಪ್ತಾಹವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಮಕ್ಕಳಿಂದ ವಿವಿಧ ಸ್ವದೇಶೀ ಕ್ರೀಡೆಗಳ ಅಭ್ಯಾಸ ಹಾಗೂ ಪ್ರದರ್ಶನ; ಭಾರತೀಯತೆ ಮೆರೆಯುವ ಕಿರುನೃತ್ಯ ಪ್ರದರ್ಶನ ನಡೆಯಿತು. ಸ್ವದೇಶೀ ಆಹಾರ ಪದ್ಧತಿ, ಔಷಧೀಯ ಸಸ್ಯಗಳು ಮತ್ತು ಅವುಗಳಿಂದಾಗುವ ಉಪಯೋಗಗಳ ಕುರಿತು ತಿಳಿಸಿಕೊಡಲಾಯಿತು.

ಕನ್ನಡ ರಾಜ್ಯೋತ್ಸವ (ನವೆಂಬರ್ 1) ರಾಷ್ಟ್ರಭಾಷಾ ದಿನ, ವಿಶ್ವ ರಕ್ತದಾನಿಗಳ ದಿನಾಚರಣೆ (ಜೂನ್ 6), ರಾಷ್ಟ್ರೀಯ ಗ್ರಂಥಾಲಯ ದಿನಾಚರಣೆ (ಆಗಸ್ಟ್ 13), ಓಝೋನ್ ದಿನಾಚರಣೆ ಮುಂತಾದ ದಿನಾಚರಣೆಗಳನ್ನು ಎಲ್ಲ ವಿದ್ಯಾಲಯ/ಕೇಂದ್ರಗಳಲ್ಲಿ ಆಚರಿಸಲಾಗುತ್ತಿದೆ.

## ಮಹಾತ್ಮರ ಸ್ಮರಣೆ

ಭವಿಷ್ಯದ ಕನಸು ಕಾಣಬೇಕಾದ ಮಕ್ಕಳಿಗೆ ಹೇಗೆ ಬದುಕಬೇಕು, ಯಾರಂತೆ ಬದುಕಬೇಕು ಎಂಬ ಬಗ್ಗೆ ಆದರ್ಶ ವ್ಯಕ್ತಿಗಳ ಅಗತ್ಯವಿದೆ. ಭಾರತದಲ್ಲಿ ಈ ರೋಲ್ ಮಾಡೆಲ್‌ಗಳಿಗೇನೂ ಕೊರತೆಯಿಲ್ಲ. ಪ್ರಾಚೀನ ಕಾಲದಿಂದ ಈವರೆಗೂ ಸಮಾಜಕ್ಕಾಗಿ ಸಮರ್ಪಿತ ಜೀವನ ನಡೆಸಿದ ಪರಂಪರೆಯೇ ನಮ್ಮಲ್ಲಿದೆ. ಆದರೆ ಇವರನ್ನು ನಮ್ಮ ಎಳೆಯ ಪೀಳಿಗೆಯ ಮುಂದೆ ತೆರೆದಿಡುವ ಕಾರ್ಯ ಅಷ್ಟಾಗಿ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ರಾಷ್ಟ್ರೋತ್ಥಾನ ಪರಿಷತ್ ನಮ್ಮ ಮಹಾಪುರುಷರನ್ನು ಪರಿಚಯಿಸುವ ನಿರಂತರ ಪ್ರಯತ್ನ ನಡೆಸುತ್ತಿದೆ.

ರಾಷ್ಟ್ರದ ನಾಡು–ನುಡಿ, ಸಂಸ್ಕೃತಿ, ಸ್ವಾಭಿಮಾನ, ಅಖಂಡತೆಗಾಗಿ ತಮ್ಮ ಜೀವನವನ್ನು ತೈಲದಂತೆ ಉರಿಸಿದ ಭಾರತದ ಮಹಾನ್ ಚೇತನಗಳ ಜೀವನವನ್ನು



ವಿದ್ಯಾರ್ಥಿಗಳಿಗೆ ಪರಿಚಯಿಸುವ ಸಲುವಾಗಿ ಪರಿಷತ್‌ನ ವಿದ್ಯಾಸಂಸ್ಥೆಗಳಲ್ಲಿ ಅವರ ಸ್ಮರಣೆ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಹೀಗೆ ಪ್ರತೀ ಶಾಲೆಯಲ್ಲಿ ನೂರಕ್ಕೂ ಅಧಿಕ ಮಹಾಪುರುಷರ ಪರಿಚಯ ನಡೆದಿದೆ.

ಶಾಲೆಯ ವಿದ್ಯಾರ್ಥಿಗಳೇ ಸ್ವತಃ ಮಹಾತ್ಮರ ಜೀವನದ ಅಧ್ಯಯನ ನಡೆಸಿ, ಸಹಪಾಠಿಗಳಿಗೆ ಭಾಷಣ ನೀಡುವ ಯೋಜನೆ ರೂಪಿಸಲಾಗಿದೆ.

ವಿವೇಕಾನಂದರ ಜನ್ಮದಿನವನ್ನು ರಾಮಮೂರ್ತಿನಗರದ ಜೆಜಿಆರ್‌ವಿಕೆಯಲ್ಲಿ ಸಹಾಯಕ ಸಿಬ್ಬಂದಿಗಳ ಕೃತಜ್ಞತಾ ದಿನವನ್ನಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳು ಶಾಲೆಯ ಸಹಾಯಕ ಸಿಬ್ಬಂದಿಗಳನ್ನು ಗೌರವಿಸಿದರು.

## ಮನೋವಿಕಾಸಕ್ಕೆ ಪೂರಕ ಚಟುವಟಿಕೆಗಳು

ಸಮಗ್ರವಿಕಾಸದ (ಶಾರೀರಿಕ–ಬೌದ್ಧಿಕ–ಮಾನಸಿಕ–ಭಾವನಾತ್ಮಕ–ಆಧ್ಯಾತ್ಮಿಕ) ಮೂಲಕ ವ್ಯಕ್ತಿನಿರ್ಮಾಣ, ತನ್ಮೂಲಕ ಸುಸಂಪನ್ನ ರಾಷ್ಟ್ರನಿರ್ಮಾಣದ ಗುರಿಯಿಂದ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೋತ್ಥಾನ ಪರಿಷತ್‌ನ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳಲ್ಲಿ ಸಾಮೂಹಿಕತೆ ಹಾಗೂ ಅನ್ಯೋನ್ಯತೆ ಮೂಡಿಸುವ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

**ಗುರುಪೂರ್ಣಿಮೆ :** ಗುರುವಿನ ಮಹತ್ತ್ವವನ್ನು ಮಕ್ಕಳಿಗೆ ತಿಳಿಸಿಕೊಡುವ ಹಾಗೂ ನಮ್ಮ ಸಂಸ್ಕೃತಿ ಸಮಾಜದ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ವಿವಿಧ ವಿದ್ಯಾಲಯ/ಕೇಂದ್ರಗಳಲ್ಲಿ ಆಷಾಢ ಶುಕ್ಲ ಹುಣ್ಣಿಮೆಯಂದು ಗುರುಪೂರ್ಣಿಮೆಯನ್ನು ಆಚರಿಸಲಾಗುತ್ತಿದೆ. ವಿದ್ಯಾರ್ಥಿಗಳಿಂದ ಗುರುವಿನ ಮಹತ್ತ್ವವನ್ನು ಸಾರುವ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

**ರಕ್ಷಾಬಂಧನ :** ವ್ಯಕ್ತಿ–ವ್ಯಕ್ತಿ ನಡುವಿನ ಬಾಂಧವ್ಯದ ಸಂಕೇತ ಹಾಗೂ ಸಂಘಟಿತ ಶಕ್ತಿಯ ಮಹತ್ತ್ವವನ್ನು ಸಾರುವ ಮತ್ತು ಭಾರತೀಯ ಇತಿಹಾಸದಲ್ಲಿ ಐತಿಹಾಸಿಕ ಹಿನ್ನೆಲೆಯಿರುವ ರಕ್ಷಾಬಂಧನ ಉತ್ಸವವನ್ನು ರಾಷ್ಟ್ರೋತ್ಥಾನ ಪರಿಷತ್‌ನ ವಿವಿಧ ಪ್ರಕಲ್ಪಗಳಲ್ಲಿ ಆಗಸ್ಟ್ 7ರಂದು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.

- ಹಲವು ಶಾಲೆಗಳಲ್ಲಿ ವಿದ್ಯಾರ್ಥಿಗಳೇ ಸ್ವತಃ ರೇಷ್ಮೆ ನೂಲಿನಿಂದ ರಕ್ಷೆಗಳನ್ನು ತಯಾರಿಸಿದರು. ರಕ್ಷಾಬಂದನದ ಮಹತ್ತ್ವವನ್ನು ಸಾರುವ ಗೀತೆ–ಶ್ಲೋಕಗಳ ಗಾಯನ, ನಾಟಕ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.



- ದಾವಣಗೆರೆಯ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಸಮೀಪದ ತೋಲಹುಣಸೆಯ ಪಂಡಿತ ಪುಟ್ಟರಾಜ ಗವಾಯಿಗಳ ವೀರೇಶ್ವರ ಪುಣ್ಯಾಶ್ರಮದ ಅಂಧಮಕ್ಕಳ ವಸತಿ ಶಾಲೆಯ ಮಕ್ಕಳೊಂದಿಗೆ ರಕ್ಷಾಬಂಧನ ಆಚರಿಸಿದರು.
- ಥಣಿಸಂದ್ರ ಹಾಗೂ ಬನಶಂಕರಿಯ 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಸಮೀಪದ 25ಕ್ಕೂ ಅಧಿಕ ಶಾಲಾಕಾಲೇಜುಗಳಿಗೆ ಬೇಟಿ ನೀಡಿದರು.
- ಹಗರಿಬೊಮ್ಮನಹಳ್ಳಿಯ ಶಾರದಾ ಶಿಶುಮಂದಿರದ ವಿದ್ಯಾರ್ಥಿಗಳು ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ, ತಾಲೂಕು ದಂಡಾಧಿಕಾರಿ ಕಛೇರಿ, ಕೃಷಿ ಇಲಾಖೆ, ಅಭಿಯಂತರರ ಕಛೇರಿ ಮುಂತಾದ ಕಛೇರಿಗಳಿಗೆ ಭೇಟಿ ನೀಡಿ ಅಲ್ಲಿನ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ರಕ್ಷೆ ಕಟ್ಟಿದರು.
- ಚಿತ್ರದುರ್ಗದ ಜ್ಞಾನಭಾರತಿ ವಿದ್ಯಾಮಂದಿರದ ಮಕ್ಕಳು ಸಮೀಪದ ಜಾನುಕೊಂಡ, ಸಿದ್ದಾಪುರ, ಹುಲ್ಲೂರ ಗ್ರಾಮಗಳ ನೂರಾರು ಮನೆಗಳಿಗೆ ಭೇಟಿ ನೀಡಿ ರಕ್ಷೆ ಕಟ್ಟಿದರು.
- ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯಾ ರಾ. ವಿದ್ಯಾಕೇಂದ್ರದ ಪ್ರೌಢಶಾಲೆಯ ವಿದ್ಯಾರ್ಥಿಗಳು ಸಮೀಪದ ಸೈನಿಕ ತರಬೇತಿ ಶಾಲೆಗೆ ಭೇಟಿ ನೀಡಿ ತರಬೇತಿ ಸೈನಿಕರು ಹಾಗೂ ಕರ್ತವ್ಯನಿರತ ಸೈನಿಕರಿಗೆ ರಾಖಿ ಕಟ್ಟಿ ವಿಶಿಷ್ಟವಾಗಿ ಆಚರಿಸಿದರು. ಸೈನಿಕರೊಂದಿಗೆ ವಿದ್ಯಾರ್ಥಿಗಳು ಅನೌಪಚಾರಿಕ ಮಾತುಕತೆ ನಡೆಸಿದರು.

TAPAS
reach the unreached

saadhana
reach the unreached

# ತಪಸ್ ಮತ್ತು ಸಾಧನಾ



ಭಾರತೀಯ ಯುವಜನರ ಬುದ್ಧಿವಂತಿಕೆಯನ್ನು ಜಗತ್ತು ಕೌತುಕದಿಂದ ನೋಡುತ್ತಿದೆ. ಆದರೆ ಭಾರತದಲ್ಲಿನ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಆರ್ಥಿಕ ದುರ್ಬಲತೆಯಿಂದಲೋ ಸೂಕ್ತ ಮಾರ್ಗದರ್ಶನವಿಲ್ಲದೆ, ಆಯ್ಕೆಯ ಸಮಸ್ಯೆಯಿಂದ ಅವರ ಪ್ರತಿಭೆ ಹೊರಹೊಮ್ಮಲು ಅಸಾಧ್ಯವಾಗಿದೆ. ಈ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡು ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಹಾಗೂ ಪ್ರತಿಷ್ಠಿತ ಉನ್ನತ ಶಿಕ್ಷಣಕ್ಕೆ ಪೂರಕವಾದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ನೀಡುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್ 'ತಪಸ್' (ಬಾಲಕರಿಗಾಗಿ) ಹಾಗೂ ಸಾಧನಾ (ಬಾಲಕಿಯರಿಗಾಗಿ) ಎಂಬ ವಿಶಿಷ್ಟ ಯೋಜನೆಯನ್ನು ನಡೆಸುತ್ತಿದೆ.



ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲ ಕುಟುಂಬದ ಪ್ರತಿಭಾವಂತ ಗಂಡುಮಕ್ಕಳನ್ನು ಪ್ರತಿಷ್ಠಿತ ಐಐಟಿ–ಜೆಇಇ ಶಿಕ್ಷಣ ಪಡೆಯುವಂತೆ ಮಾಡುವ ಸಲುವಾಗಿ 2012ರಲ್ಲಿ 'ತಪಸ್' ಯೋಜನೆ ಪ್ರಾರಂಭಗೊಂಡಿತು.

ಈ ಯೋಜನೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಸತಿ, ಭೋಜನ, ಕಾಲೇಜು ಶುಲ್ಕ, ಅಧ್ಯಯನ ಸಾಮಗ್ರಿ, ತರಬೇತಿ ಸೇರಿದಂತೆ 2 ವರ್ಷಗಳ ಶಿಕ್ಷಣ ಸಂಪೂರ್ಣ ಉಚಿತವಾಗಿದೆ. ಇದಕ್ಕಾಗಿ ಬೆಂಗಳೂರಿನ ಬನಶಂಕರಿಯ ರಾಷ್ಟ್ರೋತ್ಥಾನ ವಿದ್ಯಾಲಯದ ಪರಿಸರದಲ್ಲಿ ಸುಸಜ್ಜಿತ ಪ್ರಯೋಗಾಲಯ, ಗ್ರಂಥಾಲಯ, ವಸತಿ ನಿಲಯಗಳಂತಹ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಪಿ.ಯು.ಸಿ. ಕಾಲೇಜನ್ನು ಪರಿಷತ್‌ನಿಂದ ಪ್ರಾರಂಭಿಸಲಾಗಿದೆ.

ಪ್ರತಿಷ್ಠಿತ ಬೇಸ್ ಸಂಸ್ಥೆಯ ಸಹಯೋಗದಲ್ಲಿ ಈ ಚಟುವಟಿಕೆ ನಡೆಯುತ್ತಿದೆ. ಐಐಟಿ–ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗೆ ಮಕ್ಕಳನ್ನು ಸಿದ್ಧಪಡಿಸುವ ಹಿನ್ನೆಲೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ವಿಷಯಗಳ ಶ್ರೇಷ್ಠ ಮಟ್ಟದ ಸಾರಾಂಶವುಳ್ಳ ಪ್ರಶ್ನೋತ್ತರ ಸಹಿತ ಅಭ್ಯಾಸಪಾಠ್ಯಗಳನ್ನು ಸಿದ್ಧಪಡಿಸಿ, ಅವುಗಳನ್ನು ಪರಿಣಾಮಕಾರಿಯಾಗುವಂತೆ ಮಕ್ಕಳಿಗೆ ಮಾರ್ಗದರ್ಶನ ನೀಡುವ ಕಾರ್ಯವನ್ನು 'ಬೇಸ್' ಸಂಸ್ಥೆ ಮಾಡುತ್ತಿದೆ.

ಕುಟುಂಬದ ವಾರ್ಷಿಕ ಆದಾಯ 1.5 ಲಕ್ಷ ದಾಟಿರದ ಹಾಗೂ 9ನೇ ತರಗತಿಯಲ್ಲಿ ಕನಿಷ್ಠ ಶೇ. 80ಗಿಂತ ಅಧಿಕ ಅಂಕ ಗಳಿಸಿದ ಪ್ರಸ್ತುತ ಸಾಲಿನಲ್ಲಿ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.



ಪರಿಶಿಷ್ಟ ಜಾತಿಗೆ ಸೇರಿದ ಅಂಜನಪ್ಪ ಮೂಲತಃ ಆನೇಕಲ್‌ನ ಚಿಟ್ನಳ್ಳಿಯವರು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಈತನಿಗೆ ತಾಯಿ ಲಿಂಗಮ್ಮ ಕೂಲಿ ಮಾಡಿ ಪ್ರಾಥಮಿಕ ಶಿಕ್ಷಣ ನೀಡಿದ್ದರು. ರಾಷ್ಟ್ರೋತ್ಥಾನ ಪರಿಷತ್‌ನ 'ತಪಸ್' ಯೋಜನೆಗೆ ಆಯ್ಕೆಯಾದ ಅಂಜನಪ್ಪ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ ದೇಶದಲ್ಲಿಯೇ 32ನೇ ರ್‍ಯಾಂಕ್ ಗಳಿಸಿ ಮುಂಬೈ ಐಐಟಿಗೆ ಪ್ರವೇಶ ಪಡೆದಿದ್ದಾನೆ.

**ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬದ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗಂಡುಮಕ್ಕಳಿಗೆ ಉಚಿತ ವಸತಿ ಸಹಿತ ಪಿ.ಯು.ಸಿ. ಶಿಕ್ಷಣದ ಜೊತೆಗೆ ಐಐಟಿ–ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿಗೊಳಿಸುವುದೇ 'ತಪಸ್' ಯೋಜನೆಯ ಉದ್ದೇಶ.**

**ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬದ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ (ಹೆಣ್ಣುಮಕ್ಕಳಿಗೆ) ಉಚಿತ ವಸತಿ ಸಹಿತ ಪಿ.ಯು.ಸಿ. ಶಿಕ್ಷಣದ ಜೊತೆಗೆ ಪ್ರತಿಷ್ಠಿತ NEET / CET / KVPY / IISER ಮುಂತಾದ ಪ್ರವೇಶ ಪರೀಕ್ಷೆಗೆ ತರಬೇತಿಗೊಳಿಸುವುದೇ 'ಸಾಧನಾ' ಯೋಜನೆಯ ಉದ್ದೇಶ.**

## ತಪಸ್ ವಿದ್ಯಾರ್ಥಿಗಳ ಆಯ್ಕೆ

ಪ್ರತಿವರ್ಷ ಡಿಸೆಂಬರ್ 25 ರಂದು ರಾಜ್ಯದ ಪ್ರತಿ ಜಿಲ್ಲೆಯ ಸುಮಾರು 40 ಸ್ಥಾನಗಳಲ್ಲಿ ಏಕಕಾಲದಲ್ಲಿ ಪ್ರವೇಶ ಪರೀಕ್ಷೆ ನಡೆಸಿ, ಅತ್ಯಧಿಕ ಅಂಕಗಳನ್ನು ಪಡೆದ ಸುಮಾರು 150 ಮಕ್ಕಳನ್ನು ಆಯ್ಕೆ ಮಾಡಲಾಗುತ್ತದೆ. ಮೊದಲ ಹಂತದಲ್ಲಿ ಈ 150 ಮಕ್ಕಳ ಮನೆಗಳಿಗೆ ಭೇಟಿ ನೀಡಿ, ಅವರ ವಿವರಗಳನ್ನು ಸಂಗ್ರಹಿಸಲಾಗುತ್ತದೆ. ಅವರನ್ನು 10 ದಿನಗಳ ಪ್ರಶಿಕ್ಷಣ ತರಬೇತಿ ಶಿಬಿರಕ್ಕೆ ಆಹ್ವಾನಿಸಿ, ಅನೇಕ ವಿಷಯಗಳನ್ನು ಮಾನದಂಡಗಳನ್ನಾಗಿರಿಸಿ ಅವರ ಪ್ರತಿಭೆಗನುಸಾರವಾಗಿ ಅಂತಿಮವಾಗಿ 40 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

ಪ್ರಸ್ತುತ ಪ್ರಥಮ ಪಿ.ಯು. ನಲ್ಲಿ 38 ಹಾಗೂ ದ್ವಿತೀಯ ಪಿ.ಯು. ನಲ್ಲಿ 34 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.



ಭಾಗಲಕೋಟೆಯ ಬೀಳಗಿಯ ಸಾಮಾನ್ಯ ಕೃಷಿಕ ಕುಟುಂಬದ ಶಂಕರ್ ನಾಯಕ್ ಹಾಗೂ ಮೀನಾಕ್ಷಿ ನಾಯಕ್ ದಂಪತಿಗಳ ಮಗನಾದ ಪ್ರೇಮ್‌ಕುಮಾರ್ ಜೆಇಇ ಅಡ್ವಾನ್ಸ್ ಪರೀಕ್ಷೆಯಲ್ಲಿ (ಪರಿಶಿಷ್ಟ ಜಾತಿ) ದೇಶದಲ್ಲಿಯೇ 116ನೇ ರ್‍ಯಾಂಕ್ ಗಳಿಸಿ ಐಐಟಿಗೆ ಪ್ರವೇಶ ಪಡೆದಿದ್ದಾನೆ.

## ವಿದ್ಯಾರ್ಥಿಗಳ ಮಾನಸಿಕ, ಶಾರೀರಿಕ, ಬೌದ್ಧಿಕ ಹಾಗೂ ಸಾಂಸ್ಕೃತಿಕ ವಿಕಾಸಕ್ಕಾಗಿ ನಡೆದ ಚಟುವಟಿಕೆಗಳು

- **ಚೆನ್ನೈ ಐಐಟಿಗೆ ಭೇಟಿ:** ತಪಸ್ ವಿದ್ಯಾರ್ಥಿಗಳಿಗೆ ಐಐಟಿ ಪ್ರವೇಶಕ್ಕೆ ಸ್ಫೂರ್ತಿದಾಯಕವಾಗಲೆಂದು ದ್ವಿತೀಯ ಪಿ.ಯು.ಸಿ. ಮಕ್ಕಳನ್ನು ಡಿ. 3ರಂದು ಚೆನ್ನೈನ ಐಐಟಿ ವೀಕ್ಷಣೆಗೆ ಕರೆದೊಯ್ಯಲಾಯಿತು. ವಿದ್ಯಾರ್ಥಿಗಳು ಐಐಟಿಯ ವ್ಯವಸ್ಥೆ ಹಾಗೂ ವಿಶೇಷತೆಗಳನ್ನು ತಿಳಿದುಕೊಂಡು ಪ್ರೇರಣೆಗೊಂಡರು.
- ತಪಸ್‌ನ ವಿದ್ಯಾರ್ಥಿಗಳು ಒಂದು ಶಿಸ್ತುಬದ್ಧ ದಿನಚರಿಯಲ್ಲಿ ತಮ್ಮ ವಿದ್ಯಾಭ್ಯಾಸದ ಜೀವನವನ್ನು ನಡೆಸುತ್ತಾರೆ. ಬೆಳಗ್ಗೆ 4.30ಕ್ಕೆ ಪ್ರಾರಂಭವಾಗುವ ದಿನಚರಿ ರಾತ್ರಿ 11.30ಕ್ಕೆ ಮುಕ್ತಾಯವಾಗುತ್ತದೆ. ಇದರಲ್ಲಿ ಅತ್ಯಧಿಕ ಸಮಯ ಅಧ್ಯಯನಕ್ಕೆ ಮೀಸಲಾಗಿದ್ದರೂ ಯೋಗ, ಪ್ರಾಣಾಯಾಮ, ಭಜನೆ, ಹಿರಿಯರಿಂದ ಮಾರ್ಗದರ್ಶನ, ಹಬ್ಬಗಳ ಆಚರಣೆ, ಪ್ರವಾಸ ಇತ್ಯಾದಿ ಸಂಸ್ಕಾರ ಪೂರಕ ಕಾರ್ಯಕ್ರಮಗಳನ್ನು ಯೋಜಿಸಲಾಗುತ್ತಿದೆ.
- ಅನ್ಯಾನ್ಯ ಸಂದರ್ಭಗಳಲ್ಲಿ ವಿವಿಧ ಕ್ಷೇತ್ರಗಳ ಹಿರಿಯರು ಸಾಧಕರು ತಪಸ್‌ಗೆ ಆಗಮಿಸಿ ತಪಸ್ ಮಕ್ಕಳಿಗೆ ಮೌಲ್ಯಯುತ ಜೀವನದ ಬಗ್ಗೆ ಮಾರ್ಗದರ್ಶನ ಮಾಡಿದರು.





- ವಿದ್ಯಾರ್ಥಿಗಳ ವಿಕಾಸಕ್ಕಾಗಿ ಸಂಘದ ಪ್ರಥಮ ವರ್ಷದ ಶಿಕ್ಷಣಕ್ಕೆ ತಪಸ್‌ನ ವಿದ್ಯಾರ್ಥಿಗಳು ಭಾಗವಹಿಸಿದರು. ಪ್ರಸ್ತುತ ಪ್ರತಿನಿತ್ಯ ಶಾಖೆ ನಡೆಯುತ್ತಿದೆ.
- **'ಸಂಕಲ್ಪ':** ತಪಸ್‌ನಲ್ಲಿ ಎರಡು ವರ್ಷಗಳ ಶಿಕ್ಷಣ ಪಡೆದು, ಉನ್ನತ ಶಿಕ್ಷಣಕ್ಕೆ ತೆರಳುತ್ತಿರುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ಸಂಕಲ್ಪ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಸಮಾಜಮುಖಿಯಾಗಿ, ಸಂಸ್ಕಾರಯುತವಾಗಿ, ದೇಶದ ಹಿತಕ್ಕೆ ಪೂರಕವಾಗುವಂತೆ ಬದುಕುವ ಸಂಕಲ್ಪ ಕೈಗೊಂಡರು.
- ಜುಲೈ 6ರಂದು ವಿದ್ಯಾರ್ಥಿಗಳಿಗಾಗಿ ನಿಮಿಷಾಂಬಾ ದೇವಸ್ಥಾನ, ಶ್ರೀರಂಗಪಟ್ಟಣ, ಅಬ್ಬೆ ಜಲಪಾತ, ರಾಜಾಸೀಟ್ ಹಾಗೂ Golden Temple ಮುಂತಾದ ಪ್ರವಾಸೀ ತಾಣಗಳಿಗೆ ಪ್ರವಾಸ ಕೈಗೊಳ್ಳಲಾಯಿತು.
- ವಿದ್ಯಾರ್ಥಿಗಳ ಮನೋವಿಕಾಸಕ್ಕೆ ಪೂರಕವಾದ ಹಿಂದೂ ಸಾಮ್ರಾಜ್ಯ ದಿನ, ಗುರುಪೂರ್ಣಿಮೆ, ದಸರಾ, ದೀಪಾವಳಿ, ಗಣೇಶ ಚತುರ್ಥಿ, ಸಂಕ್ರಾಂತಿ ಮುಂತಾದ ಅನೇಕ ಉತ್ಸವಗಳನ್ನು ಹಾಗೂ ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಕನ್ನಡ ರಾಜ್ಯೋತ್ಸವಗಳನ್ನು ಆಚರಿಸಲಾಯಿತು.

| ತಪಸ್‌ನ ಪ್ರಯೋಜನ ಪಡೆದ ವಿದ್ಯಾರ್ಥಿಗಳು | | | | | |
|---|---|---|---|---|---|
| 2012–14 | 34 | 2013–15 | 38 | 2014–16 | 34 |
| 2015–17 | 36 | 2016–18 | 34 | 2017–19 | 36 |




## 2015–17ರ 4ನೇ ಬ್ಯಾಚ್‌ನ ಫಲಿತಾಂಶ

- 2016–17ರ ದ್ವಿತೀಯ ಪಿಯುಸಿಯಲ್ಲಿ ತಪಸ್‌ನ ಎಲ್ಲ ವಿದ್ಯಾರ್ಥಿಗಳು ಉತ್ತಮ ಶ್ರೇಣಿಗಳಲ್ಲಿ ತೇರ್ಗಡೆಯಾಗಿದ್ದಾರೆ. 35 ವಿದ್ಯಾರ್ಥಿಗಳಲ್ಲಿ 33 ಮಕ್ಕಳು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದರೆ.
- ಐಐಟಿ ಜೆಇಇ ಮೇನ್ಸ್‌ನಲ್ಲಿ 31 ವಿದ್ಯಾರ್ಥಿಗಳು ಹಾಗೂ ಜೆ.ಇ.ಇ. ಅಡ್ವಾನ್ಸ್‌ನಲ್ಲಿ 19 ಜನ ಅರ್ಹತೆ ಪಡೆದಿದ್ದಾರೆ. ಸಿ.ಇ.ಟಿ.ಗೆ ನಾವು ಹೆಚ್ಚು ಪ್ರಾಮುಖ್ಯತೆ ನೀಡದಿದ್ದರೂ 10 ವಿದ್ಯಾರ್ಥಿಗಳು 500 ರ್‍ಯಾಂಕ್‌ನೊಳಗೆ ಹಾಗೂ 14 ವಿದ್ಯಾರ್ಥಿಗಳು 1000 ರ್‍ಯಾಂಕ್‌ನೊಳಗೆ ಸ್ಥಾನ ಪಡೆದಿದ್ದಾರೆ.
- ಈ ವರ್ಷ 7 ವಿದ್ಯಾರ್ಥಿಗಳು ಐಐಟಿ.ಗೆ ದಾಖಲಾಗಿದ್ದಾರೆ. ಮುಂಬಯಿ ಐಐಟಿಗೆ ಇಬ್ಬರು ಹಾಗೂ ಗೌಹಾತಿ, ಇಂದೋರ್, ವಾರಣಾಸಿ, ಚೆನ್ನೈ, ಧಾರವಾಡ ಐಐಟಿಗೆ ತಲಾ ಒಬ್ಬರು ದಾಖಲಾಗಿದ್ದಾರೆ
- 14 ಮಂದಿ ಸುರತ್ಕಲ್‌ನ ಎನ್.ಐ.ಟಿ.ಗೆ ಹಾಗೂ ಒಬ್ಬ ರೂರ್ಕಿಲ್ ಎನ್.ಐ.ಟಿ.ಗೆ ಪ್ರವೇಶ ಪಡೆದಿದ್ದಾರೆ. ಉಳಿದವರು ಆರ್.ವಿ. ಪೆಸಿಟ್, ಬಿ.ಎಂ.ಎಸ್. ಮುಂತಾದ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆದಿದ್ದಾರೆ.
- ಬೇಸ್ ಸಂಸ್ಥೆ ಪ್ರತಿವರ್ಷ ನಡೆಸುವ ಪ್ರತಿಭಾ ಪುರಸ್ಕಾರ ವಿಶೇಷ ಕಾರ್ಯಕ್ರಮದಲ್ಲಿ ವಿಶಿಷ್ಟ ಸಾಧನೆ ಮಾಡಿದ ತಪಸ್‌ನ ಎಲ್ಲ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ತಪಸ್‌ನ ವಿದ್ಯಾರ್ಥಿಗಳ ಸಾಧನೆಯು ಸಭೆಯಲ್ಲಿ ನೆರೆದ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

## ಪಕ್ಷಿನೋಟ

ತಪಸ್ ಈಗಾಗಲೇ 4 ತಂಡಗಳ 140ಕ್ಕೂ ಅಧಿಕ ಬಡ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕೆ ಅಣಿಗೊಳಿಸಿದೆ. ಮುಂದಿನ ವರ್ಷ ಮೊದಲನೆ ತಂಡದ ವಿದ್ಯಾರ್ಥಿಗಳು ಶಿಕ್ಷಣ ಮುಗಿಸಿ ವೃತ್ತಿ ಜೀವನಕ್ಕೆ ಕಾಲಿಡುತ್ತಿದ್ದಾರೆ.



## ಸಾಧನಾ



ಹೆಣ್ಣುಮಕ್ಕಳನ್ನು ಕಾಲೇಜು ಶಿಕ್ಷಣಕ್ಕೆ ಕಳುಹಿಸಲು ಪೋಷಕರು ಶಕ್ತಿ ಹೊಂದಿರುವುದಿಲ್ಲ. ಹಾಗಾಗಿ, ಸಮೀಪದ ಯಾವುದೋ ಸರ್ಕಾರಿ ಕಾಲೇಜಿಗೆ ಕೆಲವರು ಸೇರಿಸಿದರೆ ಮತ್ತೆ ಕೆಲವರು ಮದುವೆ ಮಾಡಿ 'ಜವಾಬ್ದಾರಿ ಮುಗಿಯಿತು' ಎಂದು ಕೈ ತೊಳೆದುಕೊಳ್ಳುತ್ತಾರೆ. ಆದರೆ, ಗ್ರಾಮೀಣ ಭಾಗದ ಪ್ರತಿಭಾವಂತ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒಂದಿಷ್ಟು ಅನುಕೂಲ ಕಲ್ಪಿಸಿದರೆ ಅವರು ಯಾರಿಗೂ ಕಡಮೆ ಇಲ್ಲದಂತೆ ಸಾಧನೆಯ ಹೆಗ್ಗುರುತುಗಳನ್ನು ಮೂಡಿಸಬಲ್ಲರು. ಈ ನಿಟ್ಟಿನಲ್ಲಿ ವ್ಯಾಪಕ ಚಿಂತನ–ಮಂಥನ ನಡೆಸಿ ಹೆಣ್ಣುಮಕ್ಕಳಿಗಾಗಿಯೇ 2017–18ರ ಶೈಕ್ಷಣಿಕ ವರ್ಷದಿಂದ ರಾಷ್ಟ್ರೋತ್ಥಾನವು 'ಸಾಧನಾ' ಎಂಬ ಯೋಜನೆಯನ್ನು ಆರಂಭಿಸಲು ನಿರ್ಧರಿಸಿತು.

ಬಾಲಕರಿಗಾಗಿ ಇರುವ ತಪಸ್‌ನಂತೆಯೇ ನಡೆಯುವ ಈ ಯೋಜನೆಯಲ್ಲಿ ಆಯ್ಕೆಯಾದ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಬೆಂಗಳೂರಿನ ಥಣಿಸಂದ್ರದಲ್ಲಿರುವ ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನಲ್ಲಿ ಎರಡು ವರ್ಷಗಳ ಪಿಯುಸಿ ಶಿಕ್ಷಣವನ್ನು ಸಂಪೂರ್ಣ ಉಚಿತವಾಗಿ ನೀಡಲಾಗುತ್ತದೆ. ಅಲ್ಲದೆ, ಆಯ್ಕೆಯಾದ ವಿದ್ಯಾರ್ಥಿನಿಯರಿಗೆ NEET / CET / KVPY / IISER ಮುಂತಾದ ಪ್ರವೇಶ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತದೆ. ಊಟ, ಹಾಸ್ಟೆಲ್ ಸೌಲಭ್ಯ ಹಾಗೂ ಅಧ್ಯಯನ ಸಾಮಗ್ರಿಯನ್ನು ಉಚಿತವಾಗಿ ಪೂರೈಸಲಾಗುತ್ತದೆ.

ಮೊದಲ ತಂಡದಲ್ಲಿ 50 ಮಂದಿ ವಿದ್ಯಾರ್ಥಿನಿಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ.




# FIRST
# ಫೌಂಡೇಷನ್ ಫಾರ್ ಇಂಡಿಕ್ ರಿಸರ್ಚ್ ಸ್ಟಡೀಸ್ (FIRST), ಬೆಂಗಳೂರು

**ಭಾರತೀಯ ಸಮಾಜವನ್ನು ಪ್ರಭಾವಿಸುವ ವಿವಿಧ ಆಯಾಮಗಳ ಬಗ್ಗೆ ದೇಸಿ ಚಿಂತನೆಯ ಹಿನ್ನೆಲೆಯಲ್ಲಿ ಪುನರ್ವಿಚಾರ, ಸಂಶೋಧನೆ ಮತ್ತು ವೈಚಾರಿಕತೆಗಳನ್ನು ಕಟ್ಟಿಬೆಳೆಸುವ ಉದ್ದೇಶದ ಸಲುವಾಗಿ ಫೌಂಡೇಶನ್ ಫಾರ್ ಇಂಡಿಕ್ ರಿಸರ್ಚ್ ಸ್ಟಡೀಸ್ (Foundation for Indic Research Studies - FIRST) ಕಾರ್ಯನಿರ್ವಹಿಸುತ್ತಿದೆ.**

ಈ ಕೆಳಗಿನ ಐದು ವಿಷಯಗಳನ್ನು ಆದ್ಯತೆಯ ವಿಷಯಗಳನ್ನಾಗಿ ಆಯ್ದುಕೊಂಡಿದ್ದು, ಇವುಗಳ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆ ಹಾಗೂ ಪ್ರಸರಣ ಕಾರ್ಯವನ್ನು ನಡೆಸಲಾಗುತ್ತಿದೆ.

1. ಸಾಂಸ್ಕೃತಿಕ ಅಧ್ಯಯನ
2. ತತ್ತ್ವಶಾಸ್ತ್ರ
3. ಪರ್ಯಾಯ ಸಾಮಾಜಿಕ ಚಿಂತನೆ
4. ಪರ್ಯಾಯ ರಾಜಕೀಯ ಚಿಂತನೆ
5. ಸಂತುಲಿತ ಅಭಿವೃದ್ಧಿ ಮತ್ತು ಅರ್ಥಶಾಸ್ತ್ರ

## ಚಟುವಟಿಕೆಗಳು

### ವ್ಯಾಸಂಗ ಗೋಷ್ಠಿಗಳು

ಪಿ.ಜಿ. ವಿದ್ಯಾರ್ಥಿಗಳು ಮತ್ತು ಅಧ್ಯಯನ ಹಾಗೂ ಸಂಶೋಧನೆಯಲ್ಲಿ ಆಸಕ್ತಿ ಇರುವವರನ್ನು ಗುರುತಿಸಿ ವ್ಯಾಸಂಗ ಗೋಷ್ಠಿಯನ್ನು ಆಯೋಜಿಲಾಗುತ್ತಿದೆ. ಆಯಾ ವಿಷಯಕ್ಕೆ ಸಂಬಂಧಪಟ್ಟ ವಿಷಯ ತಜ್ಞರ ಉಪಸ್ಥಿತಿಯಲ್ಲಿ ತಿಂಗಳಿಗೊಮ್ಮೆ ನಡೆಯುವ ಈ ಗೋಷ್ಠಿಯಲ್ಲಿ ಭಾಗವಹಿಸುವವರಿಗೆ 15 ದಿನಗಳ ಮೊದಲೇ ಆರಿಸಲಾದ ವಿಷಯವೊಂದರ ಕುರಿತ ಪಠ್ಯವನ್ನು ಕಳುಹಿಸಲಾಗುತ್ತದೆ. ಅದನ್ನು ಅಧ್ಯಯನ ಮಾಡಿಕೊಂಡು ಗೋಷ್ಠಿಯಲ್ಲಿ ಭಾಗವಹಿಸಬೇಕು. ಪ್ರತಿ 4 ಅಥವಾ 5 ತಿಂಗಳಿಗೊಮ್ಮೆ ನೂತನ ವಿಷಯವನ್ನು ಆರಿಸಿಕೊಳ್ಳಲಾಗುತ್ತದೆ. ಸುಮಾರು 25 ಮಂದಿ ನಿಯಮಿತವಾಗಿ ಭಾಗವಹಿಸುತ್ತಿದ್ದಾರೆ.



## ಸಂಶೋಧನಾ ತರಬೇತಿ ಕಾರ್ಯಕ್ರಮ

2017ರ ಜೂನ್ 7 ಮತ್ತು 8ರಂದು ಎಂ.ಫಿಲ್ ಮತ್ತು ಪಿಎಚ್‌ಡಿ ನೋಂದಾಯಿಸಿದವರಿಗಾಗಿ ಸಂಶೋಧನಾ ತರಬೇತಿ ಕಾರ್ಯಕ್ರಮ – 'ರಿಸರ್ಚ್ ಓರಿಯಂಟೇಷನ್ ವರ್ಕ್‌ಷಾಪ್' (ROW) ಏರ್ಪಡಿಸಲಾಯಿತು. ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯ, ಬೆಂಗಳೂರು, ತುಮಕೂರು ಮತ್ತು ಮಂಗಳೂರು ವಿಶ್ವವಿದ್ಯಾಲಯಗಳ 25 ಸಂಶೋಧನಾ ವಿದ್ಯಾರ್ಥಿಗಳು ಭಾಗವಹಿಸಿದರು.



### ಶಿಬಿರಾರ್ಥಿಯ ಅನಿಸಿಕೆ...

ಎರಡು ದಿನಗಳಲ್ಲಿ ಅತ್ಯಂತ ವ್ಯವಸ್ಥಿತವಾಗಿ ನಡೆದ ಕಾರ್ಯಾಗಾರ ಇದಾಗಿದ್ದು, ಸಂಶೋಧನಾ ವಿದ್ಯಾರ್ಥಿಗಳಿಗೆ ಉಪಯುಕ್ತವಾದುದಾಗಿತ್ತು. ಸಂಶೋಧನಾ ಮಾರ್ಗದಲ್ಲಿ ವಿಭಿನ್ನ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳುವುದರ ಕುರಿತು ಸ್ಪಷ್ಟವಾದ ಮಾರ್ಗದರ್ಶನ ದೊರೆಯಿತು. ಸಂಶೋಧನ ಪ್ರಶ್ನೆಗಳನ್ನು ರೂಪಿಸಿಕೊಂಡು ಮುಂದುವರೆಯುವ ವಿಧಾನ ಹಾಗೂ ಸವಾಲುಗಳನ್ನು ಎದುರಿಸುವ ರೀತಿಗಳನ್ನು ಕುರಿತು ವಿವರಿಸಿದ ವಿಧಾನ ತೃಪ್ತಿದಾಯಕವಾಗಿತ್ತು. ಸಿನಿಮಾವೊಂದನ್ನು ಸಂಶೋಧನೆಗೆ ಸಮೀಕರಿಸಿ ನೋಡುವ ದೃಷ್ಟಿಕೋನ ಆಸಕ್ತಿದಾಯಕವಾಗಿತ್ತು. ಮುಖ್ಯವಾಗಿ ಕಾರ್ಯಗಾರ ನಡೆಸಿಕೊಟ್ಟ ಡಾ. ಜಿ.ಬಿ. ಹರೀಶ್, ಡಾ. ವಾಸುದೇವಮೂರ್ತಿ, ಸಂತೋಷ್ ಜಿ.ಆರ್. ಇವರೊಂದಿಗೆ ನಡೆದ ಸ್ನೇಹಯುತ ಸಂವಾದವು ಸಂಶೋಧನಾರ್ಥಿಗಳ ಕೆಲವು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಉಪಯುಕ್ತವಾಯಿತು. ವಾದ–ಪ್ರತಿವಾದ ಹಾಗೂ ತೌಲನಿಕ ಅಧ್ಯಯನದ ನಡುವೆ ಗಮನಿಸಬೇಕಾದ ಅಂಶಗಳು, ವಿಮರ್ಶೆ ಮತ್ತು ಸಂಶೋಧನೆ ಬಗ್ಗೆ ಇರುವ ವ್ಯತ್ಯಾಸಗಳು ಹೀಗೆ ಹಲವಾರು ವಿಷಯಗಳ ಬಗ್ಗೆ ತಿಳಿವಳಿಕೆ ನೀಡಿ, ಸಂಶೋಧನೆಯ ಆಯಾಮಗಳನ್ನು ಗುರುತಿಸುವ ಬಗ್ಗೆ ಅರಿವು ಮೂಡಿಸುವಲ್ಲಿ ಕಾರ್ಯಗಾರ ಸಫಲವಾಗಿದೆ. ಕಾರ್ಯಾಗಾರವು ಯಶಸ್ವಿಯಾಗಿ ನಡೆಯಲು ಕಾರಣರಾದ ಪ್ರತಿಯೊಬ್ಬರಿಗೂ ಕೃತಜ್ಞತಾಪೂರ್ವಕ ನಮನಗಳು.

**ಸೌಮ್ಯ ಅರುಣ ಕೆ.ಆರ್.**
soumya.arunk1991@gmail.com



## ಸಂಶೋಧನಾ ಸಹಕಾರ

- ವಿವಿಧ ಯೂನಿವರ್ಸಿಟಿಗಳ Ph.D ಮತ್ತು M.Phil ವಿದ್ಯಾರ್ಥಿಗಳು ತಮ್ಮ ಪ್ರಬಂಧಕ್ಕಾಗಿ ಫರ್ಸ್ಟ್‌ನ ಆಕರಗಳನ್ನು ಉಪಯೋಗಿಸುತ್ತಿದ್ದಾರೆ.
- ಅನೇಕ ಲೇಖಕರು ಪೂರಕ ಮಾಹಿತಿಗಳಿಗಾಗಿ ನಮ್ಮ ಗ್ರಂಥಾಲಯಕ್ಕೆ ಭೇಟಿ ನೀಡಿದ್ದಾರೆ. ತಮ್ಮ ಲೇಖನ ಹಾಗೂ ಪುಸ್ತಕಗಳನ್ನು ಇಲ್ಲಿಯ ಆಕರಗಳನ್ನು ಬಳಸಿ ರಚಿಸಿದ್ದಾರೆ.

## ಅಧ್ಯಯನ ವೃತ್ತ

ಸಾಮಾಜಿಕ ಕಳಕಳಿಯ ಹಲವು ವಿಷಯಗಳ ಕುರಿತಾಗಿ ಸ್ವತಂತ್ರವಾಗಿ ಅಧ್ಯಯನ ಮಾಡಿ ವಿಷಯ ಪ್ರತಿಪಾದನೆಯನ್ನು ಮಾಡುವವರಿಂದ ಕೂಡಿದ ಅಧ್ಯಯನ ವೃತ್ತವು ಫರ್ಸ್ಟ್‌ನ ವತಿಯಿಂದ ನಡೆಯುತ್ತಿದೆ. 2018 ಮೇ 25ರಂದು "ಭಾರತೀಯ ವೈಚಾರಿಕತೆಯ ಪ್ರಸರಣದಲ್ಲಿ ಸೋಷಿಯಲ್ ಮಿಡಿಯಾಗಳ ಪಾತ್ರ' ಎಂಬ ವಿಷಯದ ಕುರಿತು ಸಾಫ್ಟ್‌ವೇರ್ ತಂತ್ರಜ್ಞ ಸತ್ಯನಾರಾಯಣ ಶ್ಯಾನುಬೋಗ್ ವಿಚಾರ ಮಂಡನೆ ಮಾಡಿದರು.

## ಶಾಸ್ತ್ರಲೋಕ ಪರಿಚಯ (Familiarising with Shastras)

ಇಂದಿನ ಯುವಜನತೆಗೆ, ಕಾಲೇಜು ವಿದ್ಯಾರ್ಥಿಗಳಿಗೆ ನಮ್ಮ ಪ್ರಾಚೀನ ಜ್ಞಾನಸಂಪತ್ತಿನ ಆಕರಗಳಾದ ವೇದ, ಪುರಾಣ, ಶಾಸ್ತ್ರಗ್ರಂಥಗಳನ್ನು ಸುಲಭ ರೀತಿಯಲ್ಲಿ ಪರಿಚಯಿಸುವ ದೃಷ್ಟಿಯಿಂದ ತಂಡವೊಂದು ಕಾರ್ಯ ನಿರ್ವಹಿಸುತ್ತಿದೆ. ನಮ್ಮ ಜ್ಞಾನ ಪರಂಪರೆಯ ಮಹತ್ತ್ವ ಮತ್ತು ಅದರ ಪ್ರಸ್ತುತತೆ ಇವುಗಳನ್ನು ಮುಖ್ಯವಾಗಿ ಗಮನಿಸಲಾಗುತ್ತಿದೆ. ಮೊದಲ ಹಂತದಲ್ಲಿ ಪುರಾಣಗಳ ಅಧ್ಯಯನಕ್ಕೆ ಆದ್ಯತೆ ನೀಡಿದೆ. ಅಧ್ಯಯನದಲ್ಲಿ ಆರಿಸಿಕೊಂಡ ಪ್ರತಿ ಗ್ರಂಥಕ್ಕೂ ಇಂದಿನ ಯುವಜನತೆಗೆ ಅರ್ಥವಾಗುವಂತೆ ಪವರ್‌ಪಾಯಿಂಟ್ ಪ್ರದರ್ಶನವನ್ನು ಸಿದ್ಧಗೊಳಿಸುವ ಗುರಿಯನ್ನು ಹೊಂದಲಾಗಿದೆ. ಡಾ. ಶ್ರೀಧರ್ ಅವರು ಸಂಚಾಲಕರಾಗಿದ್ದಾರೆ. ಪ್ರಸ್ತುತ ಮಾರ್ಕಂಡೇಯ ಪುರಾಣವನ್ನು ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ.

## ಟಿಪ್ಪು ಕುರಿತಾದ ಅಧ್ಯಯನ

ಕರ್ನಾಟಕದ ಚರಿತ್ರೆಯಲ್ಲಿ ಟಿಪ್ಪುವಿನ ಕುರಿತಾದ ನಿಜ ಸಂಗತಿಗಳ ಅಧ್ಯಯನವನ್ನು ಫಸ್ಟ್ ವತಿಯಿಂದ ನಡೆಸಲಾಗಿದೆ. ಚಾರಿತ್ರಿಕ ಸಂಗತಿಗಳ ಜೊತೆಗೆ ಟಿಪ್ಪು ಆಳಿದ ಪ್ರದೇಶಗಳ ಡೆಮೊಗ್ರಫಿಯ ಅಂಕಿಅಂಶ (ಜನಸಂಖ್ಯಾ ಚಿತ್ರಣ) ಮತ್ತು ರಾಷ್ಟ್ರೀಯ ಸರಾಸರಿಯೊಂದಿಗೆ ಆ ಪ್ರದೇಶಗಳ ಮುಸಲ್ಮಾನ ಜನಸಂಖ್ಯೆಯ ತುಲನೆ ವಿಶೇಷವಾಗಿ ದಾಖಲಿಸಲ್ಪಟ್ಟಿತು. ನಮ್ಮ ಅಧ್ಯಯನದ ಗ್ರಹಿಕೆಗಳ ಪ್ರಸಾರದ ದೃಷ್ಟಿಯಿಂದ ಸೂಕ್ತ ಸಾಹಿತ್ಯ ನಿರ್ಮಾಣ ಹಾಗೂ ಅದರ ಪ್ರಸ್ತುತತೆಯನ್ನು ಪರಿಣಾಮಕಾರಿಯಾಗಿ ಮಾಡಲಾಯಿತು. ಇದಕ್ಕಾಗಿ ಸೋಷಿಯಲ್ ಮೀಡಿಯಾಗಳನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ. ವಿಶೇಷವಾಗಿ ವಿಕ್ರಮ ಸಂಚಿಕೆಯಲ್ಲಿ ಸುಮಾರು 25ಕ್ಕೂ ಹೆಚ್ಚು ಪುಟಗಳಲ್ಲಿ ಈ ವಿಷಯ ಪ್ರಕಟಗೊಂಡಿತು.

ಟಿಪ್ಪು ನಿಜಸ್ವರೂಪ ಪ್ರದರ್ಶಿನಿ : ಕೊಡಗು, ಮಂಗಳೂರು, ಬೆಂಗಳೂರು, ಚಿತ್ರದುರ್ಗ ಸೇರಿದಂತೆ ಹಲವಾರು ಕಡೆ ಫಸ್ಟ್‌ನ ವತಿಯಿಂದ ಸಿದ್ಧಪಡಿಸಲಾಗಿದ್ದ 'ಟಿಪ್ಪು ನಿಜಸ್ವರೂಪ' ಭಿತ್ತಿಚಿತ್ರಗಳ ಪ್ರದರ್ಶಿನಿಯನ್ನು ಏರ್ಪಡಿಸಲಾಯಿತು.

## ವಿಚಾರ ಸಂಕಿರಣ

'ಟಿಪ್ಪು ಮತ್ತು ಆತನ ಆರಾಧಕರ ಮನಸ್ಥಿತಿಯನ್ನು ಅರ್ಥೈಸಿಕೊಳ್ಳುವ ಬಗೆ' (Seminar on Understanding the Mindset of Tippu and his Worshippers) ಎಂಬ ವಿಚಾರ ಸಂಕಿರಣವನ್ನು 2017ರ ನವೆಂಬರ್ 4ರಂದು ಬೆಂಗಳೂರಿನ ಗಾಂಧಿಭವನದಲ್ಲಿ ಆಯೋಜಿಸಲಾಯಿತು. ರಾಜ್ಯಸರ್ಕಾರವು ಟಿಪ್ಪು ಜಯಂತಿಯನ್ನು ಶತಾಯಗತಾಯ ಯಶಸ್ವಿಯಾಗಿ ಆಚರಿಸಲೇಬೇಕೆಂದು ನಿರ್ಧರಿಸಿದ್ದ ಹಿನ್ನೆಲೆಯಲ್ಲಿ ಟಿಪ್ಪುವಿನ ನಿಜಸ್ವರೂಪವನ್ನು ತೆರೆದಿಡುವ ಈ ಕಾರ್ಯಕ್ರಮ ಪ್ರಜ್ಞಾವಂತರ ಗಮನವನ್ನು ತೀವ್ರವಾಗಿ ಸೆಳೆಯಿತು.



ಬಿಜೆಪಿಯ ರಾಷ್ಟ್ರೀಯ ವಕ್ತಾರರಾದ ಡಾ. ಸಂಬೀತ್ ಪಾತ್ರ, ವಿಮರ್ಶಕ, ಲೇಖಕ ಡಾ. ಜಿ.ಬಿ ಹರೀಶ್, ಲೇಖಕರಾದ ಡಾ. ಸಂದೀಪ್ ಬಾಲಕೃಷ್ಣ ಮತ್ತು ಮಂಗಳೂರಿನ ಸಾಮಾಜಿಕ ಕಾರ್ಯಕರ್ತರಾದ ರಾಬರ್ಟ್ ರೊಸಾರಿಯೋ ಮಾತನಾಡಿದರು. ಪ್ರಶ್ನೋತ್ತರ ಕಾರ್ಯಕ್ರಮ ನಡೆಯಿತು. ಸುಮಾರು 250 ಮಂದಿ ಭಾಗವಹಿಸಿದ್ದರು.

- ಈ ಸಂದರ್ಭದಲ್ಲಿ ಟಿಪ್ಪುವಿನ ನೈಜಮುಖ ಅನಾವರಣಗೊಳಿಸುವ ಮತು ಸೆಕ್ಯುಲರಿಸಂ, ಮೂಲಭೂತವಾದ ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟ ಆಯ್ದ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆ ಮಾಡಲಾಯಿತು.
- ಟಿಪ್ಪು ಜಯಂತಿಗೆ ಸಂಬಂಧಪಟ್ಟಂತೆ ಅನೇಕ ಗಣ್ಯರು, ಲೇಖಕರು ಹಾಗೂ ಸಾಮಾಜಿಕ ಕಾರ್ಯಕರ್ತರ ಅಭಿಪ್ರಾಯಗಳ ವಿಡಿಯೋ ಚಿತ್ರೀಕರಣವನ್ನು ಪ್ರದರ್ಶಿಸಲಾಯಿತು.



ಟಿಪ್ಪು ಜಯಂತಿಯೇ 'ಕೈ'ಗೆ ಮುಖ್ಯ

BJP spokesman questions govt celebrating Tipu's birth anniversary

ಕಾರ್ಯಪ್ಪಗಿಂತ ಟಿಪ್ಪು ಜಯಂತಿ ಮುಖ್ಯವೇ?

ಕಾರ್ಯಪ್ಪಗಿಂತ ಟಿಪ್ಪುಮೇಲೆ ಪ್ರೀತಿ

ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ರಾಷ್ಟ್ರೀಯ ವಕ್ತಾರ ಡಾ.ಸಂಬಿತ್ ಪಾತ್ರ ವ್ಯಂಗ್ಯ

ಕಾಂಗ್ರೆಸ್‌ಗೆ ಕಾರ್ಯಪ್ಪಗಿಂತ ಟಿಪ್ಪುವೇ ಮುಖ್ಯ

## ಡೆಮಾಗ್ರಫಿ ಕುರಿತಾದ ಅಧ್ಯಯನ

'2011ರ ಸೆನ್ಸಸ್ ವರದಿ : ಜನಸಂಖ್ಯೆಯ ಏರುಪೇರು – ಚಿತ್ರಣ, ಪರಿಣಾಮಗಳು' ಎಂಬ ಶೀರ್ಷಿಕೆಯಲ್ಲಿ ಅಧ್ಯಯನವೊಂದನ್ನು ಫೌಂಡೇಷನ್‌ನಿಂದ ಕೈಗೊಳ್ಳಲಾಯಿತು. 2011 ಜನಗಣತಿಯ ವರದಿಯಲ್ಲಿ ಗಮನಿಸಬೇಕಾದ ಸಂಗತಿಗಳೇನು? ಹೆಚ್ಚುತ್ತಿರುವ ಮುಸಲ್ಮಾನರ ಜನಸಂಖ್ಯೆ ಅದಕ್ಕೆ ಕಾರಣ, ಅದರಿಂದಾಗುವ ಪರಿಣಾಮಗಳನ್ನು ದಾಖಲಿಸಲಾಯಿತು. ವಿಸ್ತೃತ ಅಂಕಿಅಂಶಗಳ ಅಧ್ಯಯನದಿಂದ ದೇಶ, ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕುಗಳ ಜನಸಂಖ್ಯಾ ಏರುಪೇರುಗಳ ಚಿತ್ರಣವನ್ನು ಈ ಅಧ್ಯಯನದಲ್ಲಿ ನೀಡಲಾಯಿತು. ಅಧ್ಯಯನ ಫಲಿತಾಂಶಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳುವ ದೃಷ್ಟಿಯಿಂದ ಪಿಪಿಟಿ ಪ್ರೆಸೆಂಟೇಷನ್ ಮೂಲಕ ಪ್ರಸ್ತುತ ಪಡಿಸಲಾಯಿತು.

ನೆಲಮಂಗಲ, ಮಂಡ್ಯ ಸೇರಿದಂತೆ 2017–18ರಲ್ಲಿಯೂ ಈ ಕುರಿತ ವಿಚಾರ ಮಂಡನೆ, ಜನಜಾಗೃತಿ ಕಾರ್ಯಕ್ರಮಗಳು ರಾಜ್ಯದ ಅನೇಕ ಕಡೆ ನಡೆದವು.

## ವಿಶೇಷ ಜಾಗರಣ ಕಾರ್ಯ

- 2018ರ ಆರಂಭದಲ್ಲಿ ಕರ್ನಾಟಕ ರಾಜ್ಯಸರ್ಕಾರವು ವಿಜಯನಗರ ಸಾಮ್ರಾಜ್ಯದ ನಾಶಕ್ಕೆ ಕಾರಣರಾದ ಬಹಮನಿ ಸುಲ್ತಾನರ ಉತ್ಸವವನ್ನು ಆಚರಿಸುವ ಸಂಬಂಧ ಘೋಷಣೆಯನ್ನು ಹೊರಡಿಸಿರುವುದನ್ನು ಪತ್ರಿಕಾ ಮಾಧ್ಯಮಗಳು ವರದಿ ಮಾಡಿದವು. ಈ ಕುರಿತು ಹೆಚ್ಚಿನ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡುವ ಉದ್ದೇಶದಿಂದ ಇತಿಹಾಸದ ವಿವರಗಳನ್ನು ಅಧ್ಯಯನ ನಡೆಸುವ ಕಾರ್ಯ ಫಸ್ಟ್‌ನ ವತಿಯಿಂದ ನಡೆಯಿತು. ಈ ಹಿನ್ನೆಲೆಯಲ್ಲಿ ಫೆಬ್ರುವರಿ 16ರಂದು ಫೌಂಡೇಷನ್‌ನಲ್ಲಿ ನಡೆದ ಸಭೆಯಲ್ಲಿ ವಿವಿಧ ಲೇಖಕರು, ಬರಹಗಾರರು ಭಾಗವಹಿಸಿದ್ದರು. ಲೇಖಕರಿಗೆ ಅಗತ್ಯವಾದ ಅನೇಕ ಆಕರಗ್ರಂಥಗಳನ್ನು ಒದಗಿಸಲಾಯಿತು.
- ರಾಜ್ಯ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಮತಚಲಾವಣೆಗೆ ಮುನ್ನ ಗಮನಿಸಬೇಕಾದ ಅಂಶಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ವಿವಿಧ ವಿಷಯಗಳ ಕುರಿತು 14 ಪುಸ್ತಕಗಳನ್ನು ಫಸ್ಟ್‌ನ ಆಕರ, ಮಾಹಿತಿ ಸಂಗ್ರಹಗಳ ಆಧಾರದ ಮೇಲೆ ಸಿದ್ಧಪಡಿಸಲಾಯಿತು.

## ಗ್ರಂಥಾಲಯ

ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಸಂಸ್ಕೃತ ಸೇರಿದಂತೆ ಹದಿನಾಲ್ಕು ಸಾವಿರ ಪುಸ್ತಕಗಳನ್ನು ಫೌಂಡೇಷನ್ನಿನ ಆದ್ಯತೆಯ ವಿಷಯಗಳಿಗನುಸಾರವಾಗಿ



ಸಂಗ್ರಹಿಸಲಾಗಿದೆ. ಅನೇಕ ಹಿತೈಷಿಗಳು ತಮ್ಮ ಅಪೂರ್ವ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿ ನಮ್ಮ ಪುಸ್ತಕ ಸಂಗ್ರಹದ ಮೌಲ್ಯವನ್ನು ಹೆಚ್ಚಿಸಿದ್ದಾರೆ.

- ಮೈಸೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ವಿಭಾಗದ ಡೀನ್ ಆಗಿದ್ದ ಖ್ಯಾತ ಇತಿಹಾಸಜ್ಞ ಡಾ. ಎ.ವಿ. ನರಸಿಂಹ ಮೂರ್ತಿ ಅವರು ತಮ್ಮ ಅಮೂಲ್ಯ ಸಂಗ್ರಹದಿಂದ 500ಕ್ಕೂ ಹೆಚ್ಚು ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದ್ದಾರೆ ಅವುಗಳಲ್ಲಿ 'ಎಫಿಗ್ರಾಫಿಯಾ ಕರ್ನಾಟಿಕಾ'ದ ಹತ್ತು ಸಂಪುಟಗಳು ಪ್ರಮುಖವಾದವು.
- ಬೆಂಗಳೂರಿನ ರಾಜೇಶ್ವರಿ ಅವರು ಭಾರತೀಯ ತತ್ತ್ವಶಾಸ್ತ್ರ, ಆಧ್ಯಾತ್ಮ ಚರ್ಚೆಗಳಿಗೆ ಸಂಬಂಧಪಟ್ಟಂತೆ ಅನೇಕ ಪುಸ್ತಕಗಳನ್ನು ನೀಡಿದ್ದಾರೆ.

## ಗಣ್ಯರ ಭೇಟಿ

ಈ ವರ್ಷ ದೆಹಲಿ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರದ ಪ್ರಾಧ್ಯಾಪಕ ಪ್ರೊ. ರಾಕೇಶ ಸಿನ್ಹಾ, ನ್ಯಾಷನಲ್ ಬುಕ್ ಟ್ರಸ್ಟ್‌ನ ಅಧ್ಯಕ್ಷರಾದ ಬಲದೇವ ಭಾಯ್ ಶರ್ಮ, ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್ ಮುಂತಾದವರು ಭೇಟಿ ನೀಡಿ ಫಸ್ಟ್‌ನ ಕಾರ್ಯಚಟುವಟಿಕೆಗಳ ಹಾಗೂ ಗ್ರಂಥಾಲಯದ ವಿವರ ತಿಳಿದು ಸಂತಸ ವ್ಯಕ್ತಪಡಿಸಿದರು.

# ರಾಷ್ಟ್ರೋತ್ಥಾನ ವಾರ್ತಾ

- ಪರಿಷತ್‌ನ ಎಲ್ಲ ಪ್ರಕಲ್ಪಗಳು ಒಂದು ತಿಂಗಳಲ್ಲಿ ನಡೆಸಿದ ಚಟುವಟಿಕೆಗಳನ್ನು ಹಂಚಿಕೊಳ್ಳುವ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ.
- ಅನೇಕ ಮಾಹಿತಿಪೂರ್ಣ-ಸಂಶೋಧನಾತ್ಮಕ ಭಾಷಣಗಳನ್ನು ಯಥಾವತ್ ಲಿಪಿರೂಪಕ್ಕಿಳಿಸಿ ಪ್ರಕಟಿಸಲಾಗಿದೆ. ಅನೇಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದನ್ನು ರೆಫರೆನ್ಸ್ ಆಗಿ ಬಳಸಿದ ಉದಾಹರಣೆಗಳೂ ಇವೆ.
- ಕಳೆದ 4 ವರ್ಷಗಳಿಂದ ಬಹುವರ್ಣಗಳಲ್ಲಿ ಮುದ್ರಣವಾಗುತ್ತಿದೆ.
- ಇಂದು ನಾಡಿನ ಗಣ್ಯ ಸಾಹಿತಿಗಳು, ಲೇಖಕರೆನಿಸಿರುವ ಅನೇಕ ಹಿರಿಯರು ಈ ಪತ್ರಿಕೆಯ ಸಂಪಾದಕರಾಗಿದ್ದ ಹೆಮ್ಮೆ.
- ಕೇವಲ ಕಾರ್ಯಕ್ರಮಗಳ ವರದಿಗಷ್ಟೇ ಸೀಮಿತವಾಗದೆ ಓದುಗರು ಮತ್ತು ಪತ್ರಿಕೆಗೆ ಸಂಬಂಧ ಕಲ್ಪಿಸುವ ಪ್ರಯೋಗಗಳನ್ನು (ಉದಾ: 'ನನ್ನ ದೇಶ: ನನಗೆಷ್ಟು ಗೊತ್ತು' ಮುಂತಾದವು) ನಡೆಸಲಾಗುತ್ತಿದೆ.
- ಕಾರ್ಯಕ್ರಮದಲ್ಲಿ ಆಗಮಿಸಿದ ಅತಿಥಿಗಳಿಂದ ಮೂಡಿಬಂದ ವೈಚಾರಿಕ ಭಾಷಣಗಳನ್ನು ಯಥಾವತ್ತಾಗಿ ಅಥವಾ ಸಮಗ್ರ ವರದಿಯನ್ನು ಪ್ರಕಟಿಸಲಾಗಿದೆ. ಈ ಮೂಲಕ ಚಿಂತಕರ 'ರೆಫೆರೆನ್ಸ್' ಆಗಿಯೂ ಬಳಕೆಯಾಗುತ್ತಿದೆ.
- ಪರಿಷತ್ ನಡೆಸುತ್ತಿರುವ ಚಟುವಟಿಕೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಸಮಾನಮನಸ್ಕರೊಂದಿಗೆ ಹಂಚಿಕೊಳ್ಳುವ ಸಲುವಾಗಿ 'ವಾಟ್ಸಾಪ್', ಫೇಸ್‌ಬುಕ್‌ಗಳಲ್ಲಿ ಕಾರ್ಯಾರಂಭಿಸಲಾಗಿದೆ. ಈ ಮೂಲಕ ವರದಿಯನ್ನು ಇನ್ನಷ್ಟು ಸದೃಢಗೊಳಿಸುವ ಪ್ರಯತ್ನ ನಡೆಯುತ್ತಿದೆ.

**ರಾಷ್ಟ್ರೋತ್ಥಾನ ಪರಿಷತ್‌ನ ಕಾರ್ಯಚಟುವಟಿಕೆಯ ಮೇಲೆ ಬೆಳಕು ಚೆಲ್ಲುವ ಹಾಗೂ ಸಮಾನ ಮನಸ್ಕರೊಂದಿಗೆ ಹಂಚಿಕೊಳ್ಳುವ ಮಾಧ್ಯಮವಾಗಿ ರಾಷ್ಟ್ರೋತ್ಥಾನ ವಾರ್ತಾ ತ್ರೈಮಾಸಿಕ ಪತ್ರಿಕೆಯಾಗಿ 1971ರಲ್ಲಿ ಪ್ರಾರಂಭವಾಯಿತು. ಇದೀಗ ಪರಿಷತ್‌ನ ಕಾರ್ಯಚಟುವಟಿಕೆಗಳು ವಿವಿಧ ಕ್ಷೇತ್ರಗಳಿಗೆ ವಿಸ್ತರಿಸಿದ್ದು, ಎಲ್ಲ ಪ್ರಕಲ್ಪಗಳೂ ತಮ್ಮದೇ ಆದ ಮಹತ್ತ್ವಪೂರ್ಣ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಈ ಚಟುವಟಿಕೆಗಳನ್ನು ರಾಷ್ಟ್ರೋತ್ಥಾನದ ಪರಿವಾರದವರೊಂದಿಗೆ ಹಂಚಿಕೊಳ್ಳುವ ರಾಷ್ಟ್ರೋತ್ಥಾನ ಪರಿಷತ್‌ನ ಪರಿವಾರ ಪತ್ರಿಕೆಯಾಗಿ 'ರಾಷ್ಟ್ರೋತ್ಥಾನ ವಾರ್ತಾ' ಪ್ರತಿ ತಿಂಗಳು (ಮಾಸಿಕ ಪತ್ರಿಕೆಯಾಗಿ) ಹೊರಬರುತ್ತಿದೆ.**





# ಕೇಂದ್ರ ಕಾರ್ಯಾಲಯ

**ಪರಿಷತ್ತಿನ ಕೇಂದ್ರ ಕಾರ್ಯಾಲಯದ ಉದ್ಯೋಗಿ ಕಾರ್ಯಕರ್ತರ ವೈಯಕ್ತಿಕ ಬೆಳವಣಿಗೆಗಾಗಿ ಹಾಗೂ ಅವರಲ್ಲಿ ಸಾಮಾಜಿಕ ಜಾಗೃತಿ ಮೂಡಿಸುವ ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.**

**ಮಾಸಿಕ ಉಪನ್ಯಾಸ ಕಾರ್ಯಕ್ರಮ:** ಕಾರ್ಯಕರ್ತರಲ್ಲಿ ಸಾಮಾಜಿಕ ಹಾಗೂ ವೈಯಕ್ತಿಕ ಜಾಗೃತಿಗಾಗಿ ಪ್ರತಿ ತಿಂಗಳ ಎರಡನೆ ಶನಿವಾರ ಮಾಸಿಕ ಬೌದ್ಧಿಕ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಕಳೆದ 6 ವರ್ಷಗಳಿಂದ ಈ ಕಾರ್ಯಕ್ರಮ ನಡೆಯುತ್ತಿದೆ. ಪ್ರಚಲಿತ ವಿಚಾರ, ಆರೋಗ್ಯ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಗಣ್ಯರು, ಹಿರಿಯರು ಹಾಗೂ ವಿಷಯ ತಜ್ಞರು ಆಗಮಿಸಿ ಮಾರ್ಗದರ್ಶನ ಮಾಡುತ್ತಿದ್ದಾರೆ

**ನಂದಗೋಕುಲದ ಮಕ್ಕಳೊಂದಿಗೆ ದೀಪಾವಳಿ:** ಪಾಲಕ–ಪೋಷಕ ರಹಿತ ಮಕ್ಕಳಿಗೆ ಆಶ್ರಯಧಾಮವಾಗಿರುವ ನಂದಗೋಕುಲದ ಮಕ್ಕಳನ್ನು ಪರಿಷತ್ತಿನ ಕೇಂದ್ರ ಕಚೇರಿಗೆ ಕರೆಸಿಕೊಂಡು ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಮಕ್ಕಳಿಗೆ ಎಣ್ಣೆಹಚ್ಚಿ ದೀಪಾವಳಿ ಹಬ್ಬದ ಶುಭಾಶಯ ಕೋರಿದರು. ಎಲ್ಲ ಮಕ್ಕಳಿಗೆ ಹಬ್ಬದ ಪ್ರಯುಕ್ತ ಹೊಸ ಬಟ್ಟೆಗಳನ್ನು ನೀಡಿದರು.

ಉದ್ಯೋಗಿಗಳ ಗುಣವಿಕಾಸದ ದೃಷ್ಟಿಯಿಂದ ರಕ್ಷಾಬಂಧನ, ಗುರುಪೂರ್ಣಿಮೆ, ಶಿವರಾತ್ರಿ, ರಾಮನವಮಿ, ಚೌತಿ ಮುಂತಾದ ಹಬ್ಬಗಳನ್ನು ಹಾಗೂ ಸ್ವಾತಂತ್ರ್ಯೋತ್ಸವ–ಗಣರಾಜ್ಯೋತ್ಸವಗಳನ್ನು ಆಚರಿಸಲಾಗುತ್ತಿದೆ.

**ಕಾರ್ಯಕರ್ತರ ಅಭ್ಯಾಸ ವರ್ಗ :** ರಾಷ್ಟ್ರೋತ್ಥಾನ ಪರಿಷತ್‌ನ ಕಾರ್ಯಕರ್ತರ ಬೆಳವಣಿಗೆಗಾಗಿ ಕಾರ್ಯಕರ್ತರ ಅಭ್ಯಾಸ ವರ್ಗ ನಡೆಸಲಾಗುತ್ತಿದೆ. ಉದ್ಯೋಗಿ ಕಾರ್ಯಕರ್ತರ ವರ್ಗವು 3 ತಿಂಗಳಿಗೊಮ್ಮೆ ಅಂದರೆ ವರ್ಷಕ್ಕೆ 4 ಬಾರಿ ನಡೆಯುತ್ತಿದೆ.

ಪ್ರಮುಖ ಕಾರ್ಯಕರ್ತರ ಅಭ್ಯಾಸವರ್ಗವು ಡಿಸೆಂಬರ್ 29 ಮತ್ತು 30 ರಂದು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಹನುಮಗಿರಿಯಲ್ಲಿ ನಡೆಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖರಾದ ಮುಕುಂದ್ ಸಿ.ಆರ್. ಅವರು ಆಗಮಿಸಿ ಪರಿಷತ್‌ನ ಚಟುವಟಿಕೆಗಳ ಅವಲೋಕನ ಹಾಗೂ ಮುಂದಿನ ಕಾರ್ಯಯೋಜನೆಗಳ ಬಗೆಗೆ ಮಾರ್ಗದರ್ಶನ ಮಾಡಿದರು.



ಕೇಂದ್ರ ಕಚೇರಿಯಲ್ಲಿ ಕೆಲಸ ಮಾಡುವ ಉದ್ಯೋಗಿಗಳಲ್ಲಿ ಸಹೋದರತ್ವ ಹಾಗೂ ಸಾಮರಸ್ಯ ಮೂಡಿಸುವ ದೃಷ್ಟಿಯಿಂದ ವಿವಿಧ ಪ್ರಕಲ್ಪ/ವಿಭಾಗಶಃ ಪ್ರವಾಸ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.

## ಕಾಲೇಜು ವಿದ್ಯಾರ್ಥಿ ಪ್ರಬಂಧ ಸ್ಪರ್ಧೆ

ಉತ್ಥಾನ ಮಾಸಪತ್ರಿಕೆ ಕಾಲೇಜು ವಿದ್ಯಾರ್ಥಿಗಳಿಗಾಗಿ "ಸ್ವಾತಂತ್ರ್ಯದ ನಾಳೆಗಳು : ಕಾಲೇಜಿನ ಒಳಗೆ–ಹೊರಗೆ" ಎಂಬ ವಿಷಯದ ಕುರಿತು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಿತು. ರಾಜ್ಯದ 36 ಪ್ರತಿಷ್ಠಿತ ಕಾಲೇಜುಗಳಿಂದ ಪ್ರಬಂಧಗಳು ಆಗಮಿಸಿವೆ. ಮೌಲ್ಯಮಾಪನವು 2 ಹಂತಗಳಲ್ಲಿ ನಡೆಯಿತು. ಮೊದಲನೇ ಹಂತವಾಗಿ ಚಿತ್ರದುರ್ಗದ ಎಂ.ಎಂ.ಎಫ್.ಜಿ. ಕಾಲೇಜಿನ ತತ್ತ್ವಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಕೆ. ರಾಜೀವಲೋಚನ ಹಾಗೂ ಖ್ಯಾತ ಬರಹಗಾರ್ತಿ ಛಾಯಾ ಭಗವತಿ ಅವರು ಪ್ರಬಂಧಗಳ ಮೌಲ್ಯಮಾಪನ ಮಾಡಿ 15 ಪ್ರಬಂಧಗಳನ್ನು ಆರಿಸಿದರು.

ಎರಡನೇ ಹಂತದ ಮೌಲ್ಯಮಾಪನದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಬೆಂಗಳೂರಿಗೆ ಆಗಮಿಸಿ ಪಿಪಿಟಿ ಮೂಲಕ ತಮ್ಮ ಪ್ರಬಂಧವನ್ನು ತೀರ್ಪುಗಾರರ ಸಮ್ಮುಖದಲ್ಲಿ ಮಂಡಿಸಿದರು. ಜನವರಿ 6ರಂದು ನಡೆದ ಈ ಕಾರ್ಯಕ್ರಮದಲ್ಲಿ ಪತ್ರಕರ್ತರಾದ ಡಿ.ಎಂ. ಘನಶ್ಯಾಮ್ ಹಾಗೂ ಸಾಫ್ಟ್‌ವೇರ್ ತಂತ್ರಜ್ಞರಾದ ಕಿರಣ್ ಕೆ.ಎಸ್. ಅವರು ತೀರ್ಪುಗಾರರಾಗಿ ಆಗಮಿಸಿದರು. ಜ್ಞಾನ ಆಯೋಗದ ಸದಸ್ಯರಾಗಿದ್ದ ಪ್ರೊ. ಎಂ.ಕೆ. ಶ್ರೀಧರ್ ಅವರು ಆಗಮಿಸಿ ವಿಜೇತರಿಗೆ ಬಹುಮಾನ ವಿತರಿಸಿದರು.




### ಚೀನಾ ಉತ್ಪನ್ನಗಳನ್ನು ಬಹಿಷ್ಕರಿಸುವ

# ಸ್ವದೇಶಿ ಸುರಕ್ಷಾ ಅಭಿಯಾನಕ್ಕೆ ಸಾರ್ವಜನಿಕರಿಂದ ಅಪೂರ್ವ ಬೆಂಬಲ

ವಿಜಯವಾಣಿ ದಿಗ್ವಿಜಯ 24X7 NEWS ಮಾಧ್ಯಮ ಸಹಯೋಗ

ಜನಸಾಮಾನ್ಯರಲ್ಲಿ ದೇಶವಿರೋಧಿ ಚೀನಾ ಉತ್ಪನ್ನಗಳನ್ನು ಬಹಿಷ್ಕರಿಸುವಂತೆ ಹಾಗೂ ನಮ್ಮ ಸಮಾಜದಲ್ಲಿ ದೇಶಭಕ್ತಿ, ಸ್ವಾಭಿಮಾನ, ಸ್ವದೇಶಿ ಮಾನಸಿಕತೆಯನ್ನು ಜಾಗೃತಗೊಳಿಸುವ ಸಲುವಾಗಿ ರಾಷ್ಟ್ರೋತ್ಥಾನ ಪರಿಷತ್ ಸೆಪ್ಟೆಂಬರ್ 9ರಿಂದ 24ರ ತನಕ ನಡೆಸಿದ 'ರಾಷ್ಟ್ರೀಯ ಸ್ವದೇಶಿ–ಸುರಕ್ಷಾ ಅಭಿಯಾನ'ಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಈ ಅಭಿಯಾನದ ಪ್ರಯುಕ್ತ ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್‌ನ ಕೇಂದ್ರಕಛೇರಿ ಹಾಗೂ ರಾಜ್ಯದ 11 ಜಿಲ್ಲೆಗಳಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಲಯ/ಕೇಂದ್ರಗಳ ಮೂಲಕ ಜನಜಾಗೃತಿಗಾಗಿ ಮನೆಮನೆ ಸಂಪರ್ಕ, ಜಾಗೃತಿ ನಡಿಗೆ (ವಾಕಥಾನ್), ಪಂಜಿನ ಮೆರವಣಿಗೆ, ಮಾನವ ಸರಪಳಿ, ಬೈಕ್ ರ್‍ಯಾಲಿ, ಸೈಕಲ್ ರ್‍ಯಾಲಿ, ಬೀದಿ ನಾಟಕ, ಗ್ರಾಮ ಸಂಪರ್ಕ, ಶಾಲಾ ಕಾಲೇಜು ಭೇಟಿ–ಜಾಗೃತಿ, ಮೆಟ್ರೋ–ರೈಲ್ವೇ–ಬಸ್ ನಿಲ್ದಾಣಗಳಲ್ಲಿ ಜಾಗೃತಿ, ವಿಚಾರಗೋಷ್ಠಿ ಮುಂತಾದ ಸಾರ್ವಜನಿಕ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಶಾಲೆಗಳಲ್ಲಿ ಮಕ್ಕಳಿಗಾಗಿ ಶಾಲಾ ಹಾಗೂ ಅಂತರಶಾಲಾ ಮಟ್ಟದಲ್ಲಿ ವಿವಿಧ ಸ್ಪರ್ಧೆ(ಪ್ರಬಂಧ, ಭಾಷಣ, ನಾಟಕ ಇತ್ಯಾದಿ)ಗಳನ್ನು ನಡೆಸಲಾಗಿದೆ.

## ಉದ್ಘಾಟನಾ ಕಾರ್ಯಕ್ರಮ

ಸೆಪ್ಟೆಂಬರ್ 9 ರಂದು ಸುಂಕೇನಹಳ್ಳಿಯಲ್ಲಿರುವ ರಾಷ್ಟ್ರೋತ್ಥಾನ ಯೋಗಕೇಂದ್ರದಲ್ಲಿ ಅಭಿಯಾನದ ಉದ್ಘಾಟನಾ ಕಾರ್ಯಕ್ರಮ ನಡೆಯಿತು.

ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಹಾಗೂ ವಿಜಯವಾಣಿ ಹಾಗೂ ದಿಗ್ವಿಜಯ ನ್ಯೂಸ್‌ನ ಅಂದಿನ ಪ್ರಧಾನ ಸಂಪಾದಕ ಹರಿಪ್ರಕಾಶ್ ಕೋಣೆಮನೆ ಅವರು ಅಭಿಯಾನಕ್ಕೆ ಚಾಲನೆ ನೀಡಿದರು. ಬಿಜೆಪಿಯ ರಾಜ್ಯ ಉಪಾಧ್ಯಕ್ಷ ತೇಜಸ್ವಿ ಸೂರ್ಯ ಅವರು ಮುಖ್ಯ ಭಾಷಣ ಮಾಡಿದರು. ರಾಷ್ಟ್ರೋತ್ಥಾನ ಪರಿಷತ್‌ನ ಆಡಳಿತ ಮಂಡಳಿ ಸದಸ್ಯ ಕೆ.ಎಸ್. ನಾರಾಯಣ್ ಉಪಸ್ಥಿತರಿದ್ದರು.











## ಜಾಗೃತಿ ನಡಿಗೆ




- ಬೆಂಗಳೂರಿನಲ್ಲಿ ಒಟ್ಟು 16 ಕಡೆಗಳಲ್ಲಿ (ಕೇಂದ್ರ ಕಛೇರಿ ಹಾಗೂ ಯೋಗಕೇಂದ್ರ ಕೇಂದ್ರಿತವಾಗಿ, ಸೇವಾಬಸ್ತಿ (ಕೊಳೆಗೇರಿ, ಸ್ಲಂ)ಗಳಲ್ಲಿ ಹಾಗೂ ಬೆಂಗಳೂರಿನ ವಿವಿಧ ಶಾಲೆಗಳು ಸೇರಿದಂತೆ) ಜಾಗೃತಿ ನಡಿಗೆ ಕಾರ್ಯಕ್ರಮ ನಡೆಯಿತು. ರಾಜ್ಯದಲ್ಲಿ ಒಟ್ಟು 40ಕ್ಕೂ ಅಧಿಕ ಕಡೆಗಳಲ್ಲಿ ಜಾಗೃತಿ ನಡಿಗೆ (ವಾಕಥಾನ್, ಜಾಥಾ)ಗಳು ನಡೆದಿವೆ.
- ಶಾಲಾ ವಿದ್ಯಾರ್ಥಿಗಳಿಂದ ಶಾಲೆಯ ಸಮೀಪದ ಪ್ರಮುಖ ರಸ್ತೆಗಳಲ್ಲಿ ಜಾಗೃತಿ ಜಾಥಾ ನಡೆಸಲಾಗಿದೆ.
- ಒಟ್ಟು 25 ಸಾವಿರಕ್ಕೂ ಅಧಿಕ ಮಂದಿ (ಪರಿಷತ್‌ನ ಕಾರ್ಯಕರ್ತರು, ಯೋಗಾಭ್ಯಾಸಿಗಳು, ಸೇವಾಬಸ್ತಿಯ ನಾಗರಿಕರು, ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿ ಹಾಗೂ ಸಾರ್ವಜನಿಕರು ಸೇರಿದಂತೆ) ಭಾಗವಹಿಸಿದ್ದರು.
- ಸಮಾಜದ ಅನೇಕ ಗಣ್ಯರು, ಸಾಮಾಜಿಕ ಕಾರ್ಯಕರ್ತರು, ರಾಜಕಾರಣಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಬೆಂಬಲ ಸೂಚಿಸಿದ್ದಾರೆ.





## ಪಂಜಿನ ಮೆರವಣಿಗೆ

ಸೆ. 14 ಗುರುವಾರ, ರಾಷ್ಟ್ರೋತ್ಥಾನ ಪರಿಷತ್‌ನಿಂದ ಪ್ರಾರಂಭಗೊಂಡ ಪಂಜಿನ ಮೆರವಣಿಗೆ ಸ್ಥಳೀಯ ರಾಘವೇಂದ್ರ ಕಾಲೋನಿ ಮೂಲಕ ಸಮೀರಪುರ ರಸ್ತೆಗಳಲ್ಲಿ ಸಂಚರಿಸಿ ಗವಿಗಂಗಾಧರೇಶ್ವರ ದೇವಸ್ಥಾನದ ಸಮೀಪದ ಕೆಂಪೇಗೌಡ ಪ್ರತಿಮೆಯ ಸಮೀಪದಲ್ಲಿ ಸಮಾಪ್ತಗೊಂಡಿತು. 150ಕ್ಕೂ ಅಧಿಕ ಕಾರ್ಯಕರ್ತರು ಪಂಜು ಹಿಡಿದು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಮಾನವ ಸರಪಳಿ

ರಾಮಮೂರ್ತಿನಗರದ ಜೈಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳು ರಾಮಮೂರ್ತಿನಗರದ ಮುಖ್ಯ ರಸ್ತೆಯಲ್ಲಿ ಸುಮಾರು 2 ಕಿ.ಮೀ. ಉದ್ದದ ಮಾನವ ಸರಪಳಿ ರಚಿಸಿ, ಭಿತ್ತಿಪತ್ರಕಗಳನ್ನು ಹಿಡಿದು ಹಾಗೂ ವಾಹನ ಸವಾರರಿಗೆ ಕರಪತ್ರಗಳನ್ನು ಹಂಚುವ ಮೂಲಕ ಚೀನಾ ವಸ್ತುಗಳನ್ನು ಖರೀದಿಸದಂತೆ ಜನಜಾಗೃತಿ ಮೂಡಿಸಿದರು. ರಾಜ್ಯದ 2 ಕಡೆ ಮಾನವ ಸರಪಳಿ ರಚಿಸಿ ಜನಜಾಗೃತಿ ಮೂಡಿಸಲಾಗಿದೆ.







## ಬೈಕ್ ರ್‍ಯಾಲಿ

ಬೆಂಗಳೂರಿನ ಕೆಂಪೇಗೌಡನಗರ, ಜಯನಗರ ಹಾಗೂ ಥಣಿಸಂದ್ರದ ರಾಷ್ಟ್ರೋತ್ಥಾನ ವಿದ್ಯಾಲಯದ ಸೇರಿದಂತೆ ಒಟ್ಟು 3 ಕಡೆಗಳಲ್ಲಿ ಬೈಕ್ ರ್‍ಯಾಲಿ ನಡೆದಿದೆ. ರಾಜ್ಯದ 2 ಕಡೆಗಳಲ್ಲಿ ಕೆಲವು ಸೈಕಲ್ ರ್‍ಯಾಲಿ ನಡೆದಿದೆ. ಹೀಗೆ ವಿವಿಧ ರ್‍ಯಾಲಿಗಳಲ್ಲಿ (ಬೈಕ್, ಸೈಕಲ್ ರ್‍ಯಾಲಿ) ಒಟ್ಟು 500ಕ್ಕೂ ಅಧಿಕ ಮಂದಿ ಭಾಗವಹಿಸಿದ್ದಾರೆ.

## ಮನೆಮನೆ ಸಂಪರ್ಕ– ಸಹಿಸಂಗ್ರಹ



ಈ ಅಭಿಯಾನ ರಾಜ್ಯಾದ್ಯಂತ ವ್ಯಾಪಿಸಿದ್ದು ಒಟ್ಟು 8 ಲಕ್ಷ ಸಹಿಸಂಗ್ರಹಿಸಲಾಗಿದೆ. ಸುಮಾರು 25 ಸಾವಿರಕ್ಕೂ ಅಧಿಕ ಮನೆಗಳಿಗೆ ಭೇಟಿ ನೀಡಲಾಗಿದೆ. ಸುಮಾರು ಸಾವಿರಕ್ಕೂ ಅಧಿಕ ಅಂಗಡಿಗಳನ್ನು ಸಂಪರ್ಕಿಸಿ ಚೀನಾ ವಸ್ತುಗಳ ಮಾರಾಟ ಮಾಡದಂತೆ ವಿನಂತಿಸಿ ಸಹಿ ಸಂಗ್ರಹಿಸಲಾಗಿದೆ.

ಬಳ್ಳಾರಿಯ ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ಮನೆಮನೆ ಸಂಪರ್ಕ ಕಾರ್ಯಕ್ರಮಕ್ಕೆ ಶ್ರೀ ಕ್ಷೇತ್ರ ನಂದೀಪುರದ ಶ್ರೀ ಶ್ರೀ ಮಹೇಶ್ವರ ಸ್ವಾಮಿಜೀಗಳು ಆಗಮಿಸಿ ಸ್ವತಃ ಮಕ್ಕಳೊಂದಿಗೆ ಮನೆಮನೆಗೆ ತೆರಳಿ ಸಹಿಸಂಗ್ರಹ ಕಾರ್ಯಕ್ರಮದಲ್ಲಿ ಭಾಗವಹಿಸಿದರು.





## ಸ್ಪರ್ಧೆಗಳು

ಅಂತರ್‌ಶಾಲಾ ಹಾಗೂ ಶಾಲಾ ಮಟ್ಟದಲ್ಲಿ ಪ್ರಬಂಧ, ಭಾಷಣ, ನಾಟಕ, ಚಿತ್ರಕಲೆ, ಆಶುಭಾಷಣ ಮುಂತಾದ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ವಿಜೇತರಿಗೆ ಪ್ರಶಸ್ತಿ ನೀಡಲಾಗಿದೆ. ಹೀಗೆ ರಾಷ್ಟ್ರೋತ್ಥಾನ ಪರಿಷತ್ ನಡೆಸುವ 12 ಶಾಲೆಗಳಲ್ಲಿ ಈ ಸ್ಪರ್ಧೆಗಳು ನಡೆದಿವೆ. ಸುಮಾರು 2000 ಮಂದಿ ವಿದ್ಯಾರ್ಥಿಗಳು ಈ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.


ವಸ್ತು ಪ್ರದರ್ಶನ


ಚರ್ಚಾಸ್ಪರ್ಧೆ


ನಾಟಕ


ಪ್ರಬಂಧ ಸ್ಪರ್ಧೆ

## ಸಾರ್ವಜನಿಕ ಕಾರ್ಯಕ್ರಮಗಳು

ಜನಜಾಗೃತಿಗಾಗಿ ರಾಜ್ಯದ ಹಲವೆಡೆಗಳಲ್ಲಿ ಸಾರ್ವಜನಿಕ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮಗಳಲ್ಲಿ ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಎಂ.ಪಿ. ಕುಮಾರಸ್ವಾಮಿ, ಹಿರೇಮಗಳೂರು ಕಣ್ಣನ್, ಸಂತೋಷ್ ಗುರೂಜೀ (ದಾವಣಗೆರೆ), ನಂದೀಪುರ ಕ್ಷೇತ್ರದ ಶ್ರೀ ಮಹೇಶ್ವರ ಸ್ವಾಮಿಜೀ (ಹಗರಿಬೊಮ್ಮನಹಳ್ಳಿ), ಪ್ರಜ್ಞಾ ಪ್ರವಾಹ ಸಂಘಟನೆಯ ದಕ್ಷಿಣ ಮಧ್ಯ ಕ್ಷೇತ್ರದ ಸಂಚಾಲಕ ರಘುನಂದನ್, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಮೇಯರ್ ಡಿ.ಕೆ. ಚೌಹಾಣ ಮುಂತಾದವರು ಭಾಗವಹಿಸಿದರು.





## ವಿಚಾರ ಸಂಕಿರಣ

ಸರಿಸುಮಾರು ಪರಿಷತ್ ನಡೆಸುವ ಎಲ್ಲ ಶಾಲೆಗಳಲ್ಲಿ ಪೋಷಕರಿಗಾಗಿ ಹಾಗೂ ಸಾರ್ವಜನಿಕರಿಗಾಗಿ ಕನಿಷ್ಠ 1 ವಿಚಾರ ಸಂಕಿರಣ ನಡೆಸಲಾಗಿದೆ. ಒಟ್ಟು 50ಕ್ಕೂ ಅಧಿಕ ಕಡೆಗಳಲ್ಲಿ ವಿಚಾರ ಸಂಕಿರಣ ನಡೆಸಲಾಗಿದೆ. ನಮ್ಮ ಶಾಲೆಗಳ ಸುತ್ತಮುತ್ತಲಿನ ಐಟಿಐ, ಪದವಿ, ಪದವಿಪೂರ್ವ ಕಾಲೇಜು, ಸರ್ಕಾರೀ ಹಾಗೂ ಖಾಸಗಿ ಪ್ರೌಢಶಾಲೆ, ಹಿರಿಯ ಪ್ರಾಥಮಿಕ ಶಾಲೆಗಳು ಸೇರಿದಂತೆ ಒಟ್ಟು 25ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳಲ್ಲಿ ರಾಷ್ಟ್ರೋತ್ಥಾನ ಪರಿಷತ್ ವತಿಯಿಂದ ವಿಚಾರ ಸಂಕಿರಣಗಳನ್ನು ಆಯೋಜಿಸಲಾಯಿತು. ಸುಮಾರು 2000ಕ್ಕೂ ಅಧಿಕ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.


ಭಾಜಪಾದ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ (ಶಿವಮೊಗ್ಗ), ಸ್ವದೇಶಿ ಜಾಗರಣ ಮಂಚ್‌ನ ಕರ್ನಾಟಕ ತೆಲಂಗಾಣ ರಾಜ್ಯಗಳ ಸಂಘಟನಾ ಕಾರ್ಯದರ್ಶಿ ಜಗದೀಶ್, ಪರಿಸರ ತಜ್ಞ ಪ್ರೊ. ಎಂ.ಪಿ. ಕುಮಾರಸ್ವಾಮಿ, ಸಂತೋಷ್ ಗುರೂಜಿ, ತೇಜಸ್ವಿ ಸೂರ್ಯ, ಸಾಮಾಜಿಕ ಕಾರ್ಯಕರ್ತರಾದ ರಾಜೇಶ್ ಪದ್ಮಾರ್, ಗಿರಿಧರ್ ಉಪಾಧ್ಯಾಯ, ರಾಧಾಕೃಷ್ಣ ಹೊಳ್ಳ, ಪಟಾಪಟ್ ಶ್ರೀನಿವಾಸ್ ಸೇರಿದಂತೆ ಸಮಾಜದ ಅನೇಕ ಗಣ್ಯರು ಆಗಮಿಸಿ ಉಪನ್ಯಾಸ ನೀಡಿದ್ದಾರೆ.

ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳಿಗಾಗಿ ಈ ಅಭಿಯಾನದ 15 ದಿನಗಳ ಕಾಲ (ಸೆ. 9 ರಿಂದ 23) ಬೆಳಗ್ಗಿನ ಪ್ರಾರ್ಥನಾ ಸಮಯದಲ್ಲಿ ಚೀನಾ ಕುರಿತು (ಕನಿಷ್ಠ 10 ನಿಮಿಷ) ಮಾಹಿತಿ ನೀಡುವ ಕಾರ್ಯಕ್ರಮ ನಡೆದಿದೆ.








## ಪ್ರಚಾರ ಸಾಮಗ್ರಿ

- ಈ ಅಭಿಯಾನಕ್ಕಾಗಿ 5 ಲಕ್ಷ ಕರಪತ್ರಗಳನ್ನು ಮುದ್ರಿಸಲಾಗಿದೆ.
- 50,000 ಸಹಿಸಂಗ್ರಹ ಪತ್ರಕಗಳನ್ನು ಮುದ್ರಿಸಿ ರಾಜ್ಯದಾದ್ಯಂತ ಕಳುಹಿಸಲಾಗಿದೆ. ಇನ್ನು ಕೆಲವರು ಜೆರಾಕ್ಸ್ ಪ್ರತಿಗಳನ್ನು ತೆಗೆದು ಸಹಿ ಮಾಡಿಸಿ ಕಳುಹಿಸಿದ ಉದಾಹರಣೆಗಳೂ ಇವೆ.
- 'ಚೀನಾ–ಬಹಿಷ್ಕರಿಸುವುದೊಂದೇ ದಾರಿ' (ಲೇಖಕ: ಎಸ್.ಎಸ್. ನರೇಂದ್ರಕುಮಾರ್) ಎಂಬ ಶೀರ್ಷಿಕೆಯ ಜಾಗೃತಿ ಪುಸ್ತಕದ 20,000 ಪ್ರತಿಗಳನ್ನು ಮುದ್ರಿಸಲಾಗಿದೆ.

## ಹಳ್ಳಿಗಳ ಸಂಪರ್ಕ–ಸಹಿಸಂಗ್ರಹ

ಚೀನಾ ವಸ್ತುಗಳಿಂದ ಭಾರತಕ್ಕಾಗುವ ಹಾನಿಯ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ರಾಷ್ಟ್ರೋತ್ಥಾನ ಪರಿಷತ್‌ನ ಶಾಲೆಗಳ ವಿದ್ಯಾರ್ಥಿಗಳು ಸಮೀಪದ 'ಹಳ್ಳಿಗಳ ಸಂಪರ್ಕ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಶಾಲೆಯ ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿ 11 ಜಿಲ್ಲೆಗಳ ಸುಮಾರು 250ಕ್ಕೂ ಅಧಿಕ ಗ್ರಾಮಗಳಿಗೆ ಖುದ್ದು ಭೇಟಿ ನೀಡಲಾಗಿದೆ. ವಿಶೇಷವಾಗಿ ಹಗರಿಬೊಮ್ಮನಹಳ್ಳಿ ಶಾಲೆಯಿಂದ 50ಕ್ಕೂ ಅಧಿಕ ಹಳ್ಳಿಗಳನ್ನು, ದಾವಣಗೆರೆಯಲ್ಲಿ ಹಾಗೂ ಚಿತ್ರದುರ್ಗದಲ್ಲಿ 10ಕ್ಕೂ ಅಧಿಕ ಹಳ್ಳಿಗಳನ್ನು ಗುರುತಿಸಿ, ಜಾಥಾದಲ್ಲಿ ತೆರಳಿ ಜಾಗೃತಿ ಹಾಗೂ ಸಹಿಸಂಗ್ರಹ ಅಭಿಯಾನಗಳು ನಡೆದಿವೆ. ಇನ್ನು ನಮ್ಮ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳ ಹಳ್ಳಿಗಳನ್ನು ಸೇರಿಸಿಕೊಂಡರೆ ಈ ಸಂಖ್ಯೆ 500ರ ಹಳ್ಳಿಗಳ ಗಡಿ ದಾಟಲಿದೆ.


ಹಳ್ಳಿ ಸಂಪರ್ಕ


ಬೀದಿನಾಟಕ

## ಪರಿಣಾಮ – ಫಲಿತಾಂಶ – ಪ್ರಭಾವದ ಕುರಿತು ಚರ್ಚೆ


ರಾಷ್ಟ್ರೋತ್ಥಾನ ಪರಿಷತ್‌ಗೆ ಭೇಟಿ ನೀಡಿದ ವಿಜಯವಾಣಿ ಮತ್ತು ದಿಗ್ವಿಜಯ ನ್ಯೂಸ್‌ನ ಅಂದಿನ ಪ್ರಧಾನ ಸಂಪಾದಕರಾದ ಹರಿಪ್ರಕಾಶ್ ಕೋಣೆಮನೆ ಅವರು ಪರಿಷತ್‌ನ ಹಿರಿಯರೊಂದಿಗೆ ಮಾತುಕತೆ ನಡೆಸಿದರು.

## ಮೆಟ್ರೋ–ಪಾರ್ಕ್–ಬಸ್ ನಿಲ್ದಾಣಗಳಲ್ಲಿ ಜಾಗೃತಿ– ಸಹಿಸಂಗ್ರಹ

ಬೆಂಗಳೂರಿನ ಮೆಟ್ರೋ, ಪಾರ್ಕ್‌ಗಳಿಗೆ ಭೇಟಿ ನೀಡಿ ಚೀನಾ ವಸ್ತುಗಳನ್ನು ಬಹಿಷ್ಕರಿಸುವಂತೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಬೆಂಗಳೂರಿನ 6 ಮೆಟ್ರೋ ನಿಲ್ದಾಣಗಳಲ್ಲಿ, 10 ಪಾರ್ಕ್‌ಗಳಲ್ಲಿ ಹಾಗೂ 20ಕ್ಕೂ ಅಧಿಕ ಬಸ್ ನಿಲ್ದಾಣಗಳಿಗೆ ಭೇಟಿ ನೀಡಿದ್ದು, ಚೀನಾ ವಸ್ತುಗಳನ್ನು ಹಾಗೂ ಸೇವೆಗಳನ್ನು ಬಳಸದಿರುವ ಸಂಕಲ್ಪ ಕೈಗೊಳ್ಳುವ ಸಹಿಪತ್ರಕಕ್ಕೆ ಸಹಿ ಮಾಡಿಸಲಾಗಿದೆ.








## ಸಮಾರೋಪ

ಬೈಕ್ ಹಾಗೂ ಸಾರ್ವಜನಿಕ ಕಾರ್ಯಕ್ರಮ ಸೆ. 23ರಂದು ಜಯನಗರದ ರಾಷ್ಟ್ರೋತ್ಥಾನ ಯೋಗಕೇಂದ್ರದಲ್ಲಿ ನಡೆಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಪ್ರಾಂತ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಅವರು ಬೈಕ್ ರ್‍ಯಾಲಿಗೆ ಚಾಲನೆ ನೀಡಿದರು. ಖ್ಯಾತ ವಿಮರ್ಶಕ, ಚಿಂತಕ ಜಿ.ಬಿ. ಹರೀಶ್ ಅವರು ಮುಖ್ಯ ಭಾಷಣ ಮಾಡಿದರು. ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಉಪಸ್ಥಿತರಿದ್ದರು. ಬೆಂಗಳೂರಿನ ಜಯನಗರ ಹಾಗೂ ಕೆಂಪೇಗೌಡನಗರದಿಂದ ಹೊರಟ ಎರಡು ಪ್ರತ್ಯೇಕ ರ್‍ಯಾಲಿಗಳು ಸೌತ್ ಎಂಡ್ ಸರ್ಕಲ್‌ನಲ್ಲಿ ಒಂದುಗೂಡಿ ಜಯನಗರ ಯೋಗಕೇಂದ್ರವನ್ನು ತಲಪಿದವು. ಒಟ್ಟು 350ಕ್ಕೂ ಅಧಿಕ ಬೈಕ್‌ಗಳು ರ್‍ಯಾಲಿಯಲ್ಲಿ ಭಾಗವಹಿಸಿದ್ದವು.

# ಚೀನಾ ವಸ್ತು ಬಹಿಷ್ಕರಿಸುವ ಸ್ವದೇಶಿ ಸುರಕ್ಷಾ ಅಭಿಯಾನ ಪತ್ರಿಕೆಗಳು ಕಂಡಂತೆ...

3A ದಾವಣಗೆರೆ

ರಾಷ್ಟ್ರೀಯ ಸ್ವದೇಶಿ-ಸುರಕ್ಷಾ ಅಭಿಯಾನದಲ್ಲಿ ಅರ್ಥಶಾಸ್ತ್ರಜ್ಞ ಪ್ರೊ.ಬಿ.ಎಂ.ಕುಮಾರಸ್ವಾಮಿ

## ಚೀನಾದ ಅಗ್ಗದ ವಸ್ತು ಭಾರತದ ಭವಿಷ್ಯಕ್ಕೆ ದುಬಾರಿ

ವಿಜಯವಾಣಿ

## ಚೀನಾ ಉತ್ಪನ್ನ ಬಹಿಷ್ಕರಿಸಲು ಆರಂಭವಾಯ್ತು ಮೌನ ಯುದ್ಧ

'ರಾಷ್ಟ್ರೀಯ ಸ್ವದೇಶಿ-ಸುರಕ್ಷಾ ಅಭಿಯಾನ'ಕ್ಕೆ ಚಾಲನೆ | ನಡಿಗೆ, ಬೈಕ್ ರ್‍ಯಾಲಿ, ಪಂಜಿನ ಮೆರವಣಿಗೆ ಮೂಲಕ ಜಾಗೃತಿ

## ಚೀನಾ ವಸ್ತು ವಿರುದ್ಧ ವಿದ್ಯಾರ್ಥಿಗಳ ಬಲ

ರಾಜರಾಜೇಶ್ವರಿನಗರದಲ್ಲಿ ರಾಷ್ಟ್ರೀಯ ಸ್ವದೇಶಿ-ಸುರಕ್ಷಾ ಅಭಿಯಾನ » ಜಾಗೃತಿ ಜಾಥಾ

## ರಾಜ್ಯಾದ್ಯಂತ ಮೊಳಗಿದ ಸ್ವದೇಶಿ ಮಂತ್ರ

ಚೀನಾ ವಸ್ತು ಬಹಿಷ್ಕರಿಸಲು ಜನಸಂಕಲ್ಪ | ಮನೆಮನೆಗೆ ತೆರಳಿ ಸಹಿ ಸಂಗ್ರಹ | ಸ್ವದೇಶಿ-ಸುರಕ್ಷಾ ಅಭಿಯಾನಕ್ಕೆ ಸ್ಪಂದನೆ

ದಾವಣಗೆರೆಯಲ್ಲಿ ರೈಲು ನಿಲ್ದಾಣದಲ್ಲಿ ಜಾಗೃತಿ

ಶಾಲೆಗಳಲ್ಲಿ ನಾಟಕದ ಮೂಲಕ ಅರಿವು

## ಹಳ್ಳಿಗಳತ್ತ ಸ್ವದೇಶಿ-ಸುರಕ್ಷಾ ಅಭಿಯಾನ

ಚೀನಾ ವಸ್ತುಗಳನ್ನು ಬಹಿಷ್ಕರಿಸುವಂತೆ ನೂರಕ್ಕೂ ಅಧಿಕ ಗ್ರಾಮಗಳಲ್ಲಿ ಜಾಗೃತಿ

ರಾಜಧಾನಿಯಲ್ಲಿ ಇಂದು 5 ಕಡೆ ನಡಿಗೆ

## ಮೆಟ್ರೋ ನಿಲ್ದಾಣಗಳಲ್ಲಿ ಸ್ವದೇಶಿ ಸುರಕ್ಷಾ ಅಭಿಯಾನ

ಹಗರಿಬೊಮ್ಮನಹಳ್ಳಿಯಲ್ಲಿ ನಂದಿಪುರದ ಮಹೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಸಾರ್ವಜನಿಕರಿಗೆ ಸ್ವದೇಶಿ ವಸ್ತುಗಳ ಕುರಿತಂತೆ ಜಾಗೃತಿ ಮೂಡಿಸಲಾಯಿತು. ಮಾಜಿ ಶಾಸಕ ಕೆ.ನೇಮಿರಾಜ ನಾಯ್ಕ, ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕಾರ್ಯದರ್ಶಿ ಬಿ.ಬಸವನಗೌಡ ಇದ್ದಾರೆ

## ರಾಷ್ಟ್ರದ ಋಣ ತೀರಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಹಗರಿಬೊಮ್ಮನಹಳ್ಳಿ: 'ಸ್ವದೇಶಿ ಸುರಕ್ಷಾ ಅಭಿಯಾನದಲ್ಲಿ ಭಾಗವಹಿಸುವ ಮೂಲಕ ಯುವಕರು ರಾಷ್ಟ್ರದ ಋಣ ತೀರಿಸಬಹುದಾಗಿದೆ' ಎಂದು ... ಸ್ವಾಮೀಜಿ ... ತಕರಾರು ತೆಗೆಯುತ್ತಿರುವ ಚೀನಾ ದೇಶದ ವಿರುದ್ಧ ಆಂದೋಲನವನ್ನು ರೂಪಿಸಬೇಕಿದೆ. ದೇಶದ ಸಾವಿರಾರು ಕಾರ್ಖಾನೆಗಳನ್ನು ರಕ್ಷಿಸುವ ಹಾಗೂ ಲಕ್ಷಾಂತರ ಯುವಕರು ನಿರುದ್ಯೋಗಿಗಳಾಗುವುದನ್ನು ತಡೆಗಟ್ಟಲು ಚೀನಾ ನಿರ್ಮಿತ ವಸ್ತುಗಳನ್ನು ಬಹಿಷ್ಕರಿಸಿ ರಾಷ್ಟ್ರ ಸುರಕ್ಷೆಗೆ ಕೈಜೋಡಿಸಬೇಕಾಗಿದೆ' ಎಂದರು.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪುಟ್ಟ ಮಕ್ಕಳಿಂದ ಚೀನಾವಸ್ತು ನಿಷೇಧಕ್ಕೆ ಜಾಗೃತಿ

## ಚೀನಾ ವಸ್ತುಗಳ ಹಂಗೇಕೆ, ದೇಸಿ ಉತ್ಪನ್ನವೇ ಇರಲಿ

## ಮನೆ ಮನ ತಲುಪಿದ ಸ್ವದೇಶಿ ಅಭಿಯಾನ

ಸಾರ್ವಜನಿಕ ಸ್ಥಳದಲ್ಲಿ ಜಾಗೃತಿ ಮೂಡಿಸಿದ ವಿದ್ಯಾರ್ಥಿಗಳು | 50 ಸಾವಿರಕ್ಕೂ ಹೆಚ್ಚು ಸಹಿ ಸಂಗ್ರಹ

ಇಂದು ಸುಂಕೇನಹಳ್ಳಿಯಲ್ಲಿ ಸಹಿ ಸಂಗ್ರಹ

ವಿಜಯವಾಣಿ ದಿಗ್ವಿಜಯ 24X7 NEWS ಮಾಧ್ಯಮ ಸಹಯೋಗ

## ಚೀನಾ ವಸ್ತುಗಳ ವಿರುದ್ಧ ನಿರಂತರ ಜಾಗೃತಿ

ರಾಷ್ಟ್ರೀಯ ಸ್ವದೇಶಿ-ಸುರಕ್ಷಾ ಅಭಿಯಾನಕ್ಕೆ ಸಾಂಕೇತಿಕ ಅಂತ್ಯ

ವಿಜಯವಾಣಿ

## ವರ್ಷವಿಡೀ ಮನೆ ಮನ ಆಂದೋಲನ

ಆರ್‌ಎಸ್‌ಎಸ್ ದಕ್ಷಿಣ ಪ್ರಾಂತ ಕಾರ್ಯವಾಹ ತಿಪ್ಪೇಸ್ವಾಮಿ ಕರೆ | ಚೀನಾ ವಸ್ತು ವಿರುದ್ಧ ಅಭಿಯಾನ

ಬೈಕ್ ರ್‍ಯಾಲಿ ಮೂಲಕ ಜಾಗೃತಿ

## ದೀಪಾವಳಿ: ಚೀನಾ ಸರಕು ಬೇಡಿಕೆ 40–45% ಕುಸಿತ?

ಮೇಡ್ ಇನ್ ಚೀನಾಗೆ ಭರ್ಜರಿ ಹೊಡೆತ

**ಹೊಸದಿಲ್ಲಿ:** ಗಡಿ ತಂಟೆಯೂ ಸೇರಿದಂತೆ ಪಾಕಿಸ್ತಾನದ ಜತೆ ಸೇರಿ ಭಾರತದ ವಿರುದ್ಧ ಕತ್ತಿ ಮಸೆಯುತ್ತಿರುವ ಚೀನಾದ ಮೇಲೆ ಭಾರತೀಯರಲ್ಲಿ ಉಕ್ಕುತ್ತಿರುವ ಆಕ್ರೋಶ ಈಗ ಚೀನಾ ಸರಕುಗಳ ಮೇಲೆ ತಿರುಗಿದೆ.

ದೀಪಾವಳಿ ಮಾರ್ಕೆಟ್

6500 ಕೋಟಿ ರೂ. 2016ರ ದೀಪಾವಳಿ ವೇಳೆ ಭಾರತದಲ್ಲಿ ಚೀನಾದ ವಸ್ತುಗಳ ವ್ಯವಹಾರ ಮೊತ್ತ

4000 ಕೋಟಿ ರೂ. ಆಟಿಕೆ, ಫ್ಯಾನ್ಸಿ ಲೈಟ್, ಅಲಂಕಾರಿಕ ವಸ್ತುಗಳಿಂದಲೇ ಆಗಿದ್ದ ವ್ಯವಹಾರ

ಭಾರತೀಯ ವಸ್ತುಗಳಿಗೆ ಬೇಡಿಕೆ

»06

---

Sunday, September 24, 2017

City

## Rally against China products

DHARWAD: Rashtrothan Parishat has launched a campaign to create an awareness among people against China goods.

As part of the campaign, the Parishat will take out a procession on September 26, from RLS School Ground at 4:00 pm. The procession will pass through Ranapratahap Circle, Subhas Market, Kamat Hotel, Ram Mandir, Old Bus Stand, and Jubilee Circle, before returning back to the RLS School Ground, where the concluding ceremony will be held.

In a press statement here on Saturday, the Rashtrothan Parishat said, the procession was to highlight the importance of using Indian goods and the importance of boycotting China goods. Everyone should avoid using China goods as the China government was trying to invade Indian territory and unnecessarily troubling India.

Parishat's board member Ashok Sonakurpi, and Mayor D K Chavan would flag off the procession. Later, RSS's South Central Area co-ordinator Raghunandaji would deliver the key-note speech during the concluding ceremony.

As part of the anti-China products rally, Rashtrothan Vidyakendra will hold a signature collection campaign at the University of Agricultural Sciences (UAS) from 3:00 pm to 6:00 pm on September 26.

DH News Service


BHARATESH EDUCATION TRUST, BELAGAVI.
is looking for
1. Principal- for its CBSE school at Halaga, Belagavi
Qualifications and experience as per CBSE norms. Knowledge about CBSE guidelines & rules essential
2. Coordinator- for the State Board English Medium School at Belagavi.
The candidate must be well aware of the regulations of the State Education Board.

ರಾಷ್ಟ್ರೋತ್ಥಾನ ಪರಿಷತ್ ನೋಂದಣಿಗೊಂಡ ಸಾಮಾಜಿಕ ಸೇವಾ ಸಂಸ್ಥೆಯಾಗಿದ್ದು, ಜನಶಿಕ್ಷಣ, ಜನಸೇವೆ ಹಾಗೂ ಜನಜಾಗೃತಿ ಉದ್ದೇಶಗಳನ್ನಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿದೆ. ರಾಜ್ಯಾದ್ಯಂತ ಇರುವ ನಮ್ಮ ಪ್ರಕಲ್ಪಗಳು ಹಾಗೂ ಚಟುವಟಿಕೆಗಳನ್ನು ಹೀಗೆ ಪಟ್ಟಿ ಮಾಡಬಹುದು:

# ಚಟುವಟಿಕೆಗಳು

- 'ಸಂರಕ್ಷಾ' ತಲಸ್ಸೆಮಿಯಾ ಮಕ್ಕಳ ಆರೈಕೆ ಕೇಂದ್ರ
- ಹೋಮಿಯೋಪತಿ ಚಿಕಿತ್ಸಾಲಯ
- ಆಯುರ್ವೇದ ಚಿಕಿತ್ಸಾಲಯ
- ಅಂಗಮರ್ದನ
- ಅಗ್ನಿವೇಶ ಆಯುರ್ವೇದ ಅನುಷ್ಠಾನ
- ಯೋಗ ತರಬೇತಿ/ಚಿಕಿತ್ಸೆ
- ಫಿಟ್ನೆಸ್ ಸೆಂಟರ್
- ಸಂಗೀತ–ನೃತ್ಯ ಕೇಂದ್ರ
- ಕರಾಟೆ
- ಗ್ರಂಥಾಲಯ
- ವಾಚನಾಲಯ
- ಪ್ರೌಢಶಾಲೆಗಳು
- ಕಿರಿಯ, ಹಿರಿಯ ಪ್ರಾಥಮಿಕ ಶಾಲೆ
- ಪದವಿಪೂರ್ವ ಕಾಲೇಜು
- ಸಿಬಿಎಸ್‌ಇ ಶಾಲೆಗಳು
- ತಪಸ್
- ಸಾಧನಾ
- ಗೋಶಾಲೆ
- ಪುಸ್ತಕ ಪ್ರಕಟಣೆ
- ಮಾಸಪತ್ರಿಕೆ
- ಕ್ಯಾಸೆಟ್, ಸಿ.ಡಿ. ಉತ್ಪಾದನೆ
- ಮುದ್ರಣ

- ಪಾಠದ ಕೇಂದ್ರಗಳು
- ಹೊಲಿಗೆ ತರಬೇತಿ
- ಬಾಲಗೋಕುಲ
- ಸಂಸ್ಕಾರ ಕೇಂದ್ರ
- ಭಜನಾಕೇಂದ್ರ
- ನಂದಗೋಕುಲ
- ಚಿಕಿತ್ಸಾಲಯಗಳು
- ರಕ್ತನಿಧಿ
- ರೋಗಪರೀಕ್ಷಣಾ ಕೇಂದ್ರ



# ರಾಷ್ಟ್ರೋತ್ಥಾನ ಪರಿಷತ್

ಕೇಶವಶಿಲ್ಪ, ಕೆಂಪೇಗೌಡನಗರ, ಬೆಂಗಳೂರು - 560 019
E-mail: rashtrotthana@gmail.com Website: www.rashtrotthana.org

## ಆಡಳಿತ ಮಂಡಳಿ

| ಅಧ್ಯಕ್ಷರು | ಉಪಾಧ್ಯಕ್ಷರು | ಪ್ರಧಾನ ಕಾರ್ಯದರ್ಶಿ | ಖಜಾಂಚಿ |
|---|---|---|---|
| ಶ್ರೀ ಎಸ್.ಆರ್. ರಾಮಸ್ವಾಮಿ | ಶ್ರೀ ಎ. ಗೋಪಾಲಕೃಷ್ಣ ನಾಯಕ್ | ಶ್ರೀ ನಾ. ದಿನೇಶ್ ಹೆಗ್ಡೆ | ಶ್ರೀ ಗಣಪತಿ ಹೆಗಡೆ |
| ಸಾಹಿತಿಗಳು | ನಿವೃತ್ತ ಅಧಿಕಾರಿ, ಐಟಿಐ | ಸಾಮಾಜಿಕ ಕಾರ್ಯಕರ್ತರು | ಸಾರಿಗೆ ವ್ಯವಹಾರಸ್ಥರು |

## ಸದಸ್ಯರು

ಶ್ರೀ ಕೆ.ಎಸ್. ನಾರಾಯಣ, ಸಾಮಾಜಿಕ ಕಾರ್ಯಕರ್ತರು
ಶ್ರೀ ಅಶೋಕ್ ಸೋನಕರ್, ಸೀನಿಯರ್ ಸೂಪರಿಂಟೆಂಡೆಂಟ್ ಆಫ್ ಪೋಸ್ಟ್ ಆಫೀಸಸ್ (ನಿ)
ಶ್ರೀ ಎ.ಆರ್. ದ್ವಾರಕಾನಾಥ್, ವ್ಯವಸ್ಥಾಪಕರು (ನಿ), ಬಿಹೆಚ್‌ಇಎಲ್
ಶ್ರೀ ಬಿ.ಎಸ್. ರವಿಕುಮಾರ್, ಸಾಮಾಜಿಕ ಕಾರ್ಯಕರ್ತರು
ಶ್ರೀಮತಿ ಮಾಲಿನಿ ಭಾಸ್ಕರ್, ಸಾಮಾಜಿಕ ಕಾರ್ಯಕರ್ತರು